ಕಿನ್ನಾಳ ಕಲೆ

ಒಂದು ಅಧ್ಯಯನ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಕಿರು ಸಂಶೋಧನಾ ಪ್ರಬಂಧ



ಸಂಶೋಧಕ
ರವಿ ವಸರಾಮ ನಾಯಿಕ

ಮಾರ್ಗದರ್ಶಕರು
ಡಾ.ಎಸ್.ಸಿ.ಪಾಟೀಲ

ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೬

122



ಕಿನ್ನಾಳ ಕಲೆ

ಒಂದು ಅಧ್ಯಯನ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಕಿರು ಸಂಶೋಧನ ಪ್ರಬಂಧ

ಸಂಶೋಧಕ
ರವಿ ವಸರಾಮ ನಾಯಕ

ಮಾರ್ಗದರ್ಶಕರು
ಡಾ. ಎಸ್.ಸಿ.ಪಾಟೀಲ
ಪ್ರವಾಚಕರು ಮತ್ತು ಮುಖ್ಯಸ್ಥರು

ಲಲಿತಕಲಾ ನಿಕಾಯ
ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಶಾಖೆ : ಬನಶಂಕರಿ

೨೦೦೬

ಪ್ರಮಾಣ ಪತ್ರ

ಕಿನ್ನಾಳ ಕಲೆ : ಒಂದು ಅಧ್ಯಯನ ಎಂಬ ಶೀರ್ಷಿಕೆಯ ಕಿರು ಸಂಶೋಧನ ಪ್ರಬಂಧವನ್ನು ಡಾ.ಎಸ್.ಸಿ.ಪಾಟೀಲ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

R.V. Naik

(ರವಿ ವಸರಾಮ ನಾಯಿಕ)
ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬನಶಂಕರಿ, ಬಾದಾಮಿ

ದಿನಾಂಕ : ೩೦ ಮೇ ೨೦೦೭
ಸ್ಥಳ : ಬನಶಂಕರಿ ಬಾದಾಮಿ

ಪ್ರಮಾಣ ಪತ್ರ

ರವಿ ವಸರಾಮ ನಾಯಿಕ ಇವರು ಬರೆದು ಸಾದರಪಡಿಸಿದ **ಕಿನ್ನಾಳ ಕಲೆ : ಒಂದು ಅಧ್ಯಯನ** ಎಂಬ ಶೀರ್ಷಿಕೆಯ ಕಿರು ಸಂಶೋಧನ ಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

(ಡಾ.ಎಸ್.ಸಿ.ಪಾಟೀಲ)
ಪ್ರವಾಚಕರು ಮತ್ತು ಮುಖ್ಯಸ್ಥರು
ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬನಶಂಕರಿ, ಬಾದಾಮಿ

ದಿನಾಂಕ : ೩೦ ಮೇ ೨೦೦೩
ಸ್ಥಳ : ಬನಶಂಕರಿ ಬಾದಾಮಿ

ಕಿನ್ನಾಳ ಕಲೆ : ಒಂದು ಅಧ್ಯಯನ

ಪರಿವಿಡಿ



ಈಗಿನ ಕಲಾವಿದರಿಗೆ ಮಾದರಿಯಾದ ಸುಮಾರು ನೂರು ವರ್ಷಗಳ ಹಿಂದಿನ ಕಿನ್ನಾಳದ ಗೊಂಬೆ
ಸಂಗ್ರಹ : ನಾರಾಯಣಪ್ಪ ಚಿತ್ರಗಾರ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಯಾವುದೇ ದೇಶದ ಕಲೆಗಳು ಆಯಾ ಸಂಸ್ಕೃತಿಯ ಪಡಿನೆರಳಾಗಿರುತ್ತವೆ. ಮತ್ತು ಅವು ಆ ಸಂಸ್ಕೃತಿಯ ತೋರ್ಬೆರಳಾಗಿಯೂ, ದೀವಿಗೆಯಾಗಿಯೂ ಕಾರ್ಯನಿರ್ವಹಿಸುತ್ತವೆ. ಭಾರತದಲ್ಲಿ ಕಲೆಗಳ ಸಂಖ್ಯೆ ೬೪ ಎಂದು ನಮ್ಮ ಪ್ರಾಚೀನರು ಉಲ್ಲೇಖಿಸುತ್ತ ಬಂದಿದ್ದಾರೆ. ಯಾವ ಯಾವ ಕೆಲಸ ಅಥವಾ ಕೃತಿಯಲ್ಲಿ ಕೌಶಲ್ಯವಿದೆಯೋ ಅಲ್ಲೆಲ್ಲ ಕಲೆಯಿದೆ ಎಂಬುದು ಅವರ ಅಭಿಮತವಾಗಿತ್ತು. ಆದರೆ ಆಧುನಿಕರು ಕಲೆಗಳಲ್ಲಿ 'ಲಲಿತಕಲೆ' ಮತ್ತು 'ಕುಶಲ ಕಲೆ' ಎಂದು ಸ್ಪಷ್ಟವಾಗಿ ವಿಂಗಡನೆ ಮಾಡಿರುವುದುಂಟು.

ಸಾಮಾನ್ಯವಾಗಿ ಲಲಿತಕಲೆಗಳನ್ನು 'ಶುದ್ಧ ಕಲೆ'ಯೆಂದು ಕುಶಲ ಕಲೆಗಳನ್ನು "ಪ್ರಯೋಜಕ ಕಲೆ"ಗಳೆಂದು ಕರೆಯಲಾಗಿದೆ. ಮುಖ್ಯವಾಗಿ ಕಾವ್ಯ, ನಾಟಕ, ಸಾಹಿತ್ಯ, ನೃತ್ಯ, ಚಿತ್ರಕಲೆ, ಶಿಲ್ಪಕಲೆ, ಮತ್ತು ವಾಸ್ತುಶಿಲ್ಪ ಈ ಏಳು ಕಲೆಗಳನ್ನು ಲಲಿತಕಲೆಗಳು ಎಂದು ಕರೆಯಲ್ಪಟ್ಟರೆ, ವೃತ್ತಿಪರವಾದ ಕಸುಬನ್ನು ಬಿಂಬಿಸುವ ಕಮ್ಮಾರ, ಚಮ್ಮಾರ, ಅಕ್ಕಸಾಲಿಗ, ಬಡಿಗತನ, ಮುಂತಾದ ಕುಶಲ ಕರ್ಮಿಗಳಿಂದ ಸೃಷ್ಟಿಗೊಳ್ಳುವ ರಚನೆಗಳೆಲ್ಲವೂ ಕುಶಲಕಲೆಗಳೆಂದು ಕರೆಯಲ್ಪಡುತ್ತವೆ. ಪ್ರಸ್ತುತ ಅಧ್ಯಯನ ಮಾಡಲಿರುವ ಕಿನ್ನಾಳ ಕಲೆ "ಕುಶಲ ಕಲೆ" ವ್ಯಾಪ್ತಿಗೆ ಬರುವಂತದ್ದು.

ಜನಾಂಗದ ಬದುಕು ಜೀವನ ಚರಿತ್ರೆಯೆನಿಸಿದರೆ ಕಲೆಗಳು ಅದರ ಆತ್ಮ ಚರಿತ್ರೆಯೆನಿಸುತ್ತವೆ. ವ್ಯಾಪಕವಾದ ಅರ್ಥದಲ್ಲಿ ಜನತೆ ಬದುಕಿದ ರೀತಿ ಅನುಸರಿಸಿದ ಧರ್ಮ, ಕಟ್ಟಿದಕಲೆ, ಅವರ ಜೀವನ ಸಮಸ್ಯೆ, ಜೀವನ ಮೌಲ್ಯ ಇತ್ಯಾದಿಗಳ ವಿವರಣೆಯೇ[೧] ಇತಿಹಾಸ ಎನಿಸುತ್ತದೆ. ಆ ಇತಿಹಾಸದ ಒಳ ಚೌಕಟ್ಟಿನಲ್ಲಿ ಬೆಳೆದು ಬಂದ ಕಲೆಗಳು ಅದಕ್ಕೆ ಸುಂದರ ಸಂಸ್ಕಾರವನ್ನು ನೀಡುತ್ತವೆ.

ನಮ್ಮ ಗ್ರಾಮೀಣ ಜನಪದರ ಕಲೆಗಳು ಅವರ ಬದುಕಿನೊಂದಿಗೆ ಬೆರೆತು ಅವರ ಬದುಕೇ ಆಗಿ ಅವರೊಟ್ಟಿಗೆ ಬೆಳೆದು ವಿಕಾಸ ಹೊಂದುತ್ತಾ ಬಂದಿವೆ. ಅವರ ಸೌಂದರ್ಯಪ್ರಜ್ಞೆ, ಕಲಾವಂತಿಕೆಗಳು ಅವರ ಬದುಕಿನ ಆಚರಣೆ ನಂಬಿಕೆಗಳೊಟ್ಟಿಗೆ ಬೆಳೆದು ನಿಂತಿವೆ. ಅವರು ತಮ್ಮ ಬದುಕಿನ ಪ್ರತಿಯೊಂದರಲ್ಲೂ ಕಲೆಯನ್ನು ತುಂಬಿ ತಮ್ಮ ಸೌಂದರ್ಯ ಪ್ರಜ್ಞೆಯನ್ನು ಮೆರೆದಿದ್ದಾರೆ.

'ಕಲೆ' ಎಂಬುದರ ಒಂದು ಮುಖ ಲಲಿತಕಲೆಗಳಾಗಿ ವಿಕಾಸ ಹೊಂದಿದ್ದರೆ, ಮತ್ತೊಂದು ಮುಖ ಕುಶಲ ಕಲೆಗಳಾಗಿ ಬೆಳವಣಿಗೆ ಹೊಂದಿವೆ. ಕರ್ನಾಟಕವು ಇಂಥ ಕಲೆಗಳ ಆಗರವಾಗಿದೆ. ಅದರಲ್ಲೂ ನಮ್ಮ ನಾಡಿನ ಜನಪದ ಕುಶಲಕಲೆಗಳು ವಿಶೇಷವಾಗಿ ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಖ್ಯಾತಿಯನ್ನು ಹೊಂದಿವೆ. ಕೊಪ್ಪಳ ಜಿಲ್ಲೆಯ 'ಕಿನ್ನಾಳ' ಗ್ರಾಮವು ಇಂಥ ಜನಪದ ಕುಶಲ ಕಲೆಗಳನ್ನು ಸಿದ್ಧಪಡಿಸುವ ಪ್ರಮುಖ ಕೇಂದ್ರವಾಗಿದೆ. ನಮ್ಮ ನಾಡಿನ ಜನಪದ ಕಲೆಯಲ್ಲಿ ಒಂದಾದ ಕಿನ್ನಾಳ ಕಲೆಯನ್ನು ೧೫-೨೦ ವರ್ಷಗಳ ಹಿಂದೆ ೫೦-೬೦



೦೧. ಡಾ.ಎಸ್.ಸಿ.ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪುಟ. ೩

ಕುಟುಂಬಗಳು ಕಿನ್ನಾಳ ಕಲಾಕೃತಿಗಳನ್ನು ರಚಿಸುತ್ತಿದ್ದರು. ಆಧುನಿಕ ಜಗತ್ತಿನ ಯಾಂತ್ರಿಕ ಕೈಗಾರೀಕರಣ, ವೈಜ್ಞಾನೀಕರಣದಿಂದಾಗಿ ಈ ಕಲೆಯಲ್ಲಿ ಸದ್ಯ ೧೦-೧೫ ಕುಟುಂಬಗಳು ಕೆಲಸ ನಿರ್ವಹಿಸುತ್ತಿವೆ.

ಜನಪದ ಕಲೆಗಳು ನಮ್ಮ ಗ್ರಾಮೀಣ ಜನರ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಜನಪದ ಕಲೆಗಳೇ ಶಿಷ್ಟಕಲೆಗಳಿಗೆ ಭದ್ರ ಬುನಾದಿಗಳಾಗಿವೆ. ಉತ್ತರ ಕರ್ನಾಟಕದ ಭಾಗದಲ್ಲಿ ಕೆಲವೊಂದು ಜನಪದ ಶಿಲ್ಪಕಲೆಯ ಪರಂಪರೆ ಇಂದಿಗೂ ಎದ್ದು ಕಾಣುತ್ತಿವೆ. ನಿತ್ಯ ಜೀವನಕ್ಕೆ ಈ ಜನಪದ ಶಿಲ್ಪಗಳು ಹೊಸ ಹುರುಪನ್ನು ಕಲೆಯ ಚಮತ್ಕಾರವನ್ನು ತೋರುತ್ತವೆ. ಇವುಗಳೊಂದಿಗೆ ಸಾಮಾಜಿಕ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ನೈತಿಕ ಹೊಣೆ ಹೊತ್ತುಕೊಂಡು ಪ್ರತಿ ವರ್ಷವು ಆಯಾ ಸಂದರ್ಭದ ಹಬ್ಬ ಉತ್ಸವ ಆಚರಣೆಯ ಸಂದರ್ಭದಲ್ಲಿ ಜನಪದ ಚಿತ್ರ ಶಿಲ್ಪಕಲೆಗಳು ಇಂದಿಗೂ ರೂಪಗೊಳ್ಳುತ್ತವೆ.[೨]

ಪ್ರಮುಖವಾಗಿ ಶಿಷ್ಟಪದ ಮತ್ತು ಜನಪದ ಎಂಬ ವಿಂಗಡನೆ ಮಾಡಿ ಈ ಕಲೆಗಳನ್ನು ಪರಿಗಣಿಸಬೇಕು, ಶಿಷ್ಟಾಚಾರಗಳ ಚೌಕಟ್ಟಿನಲ್ಲಿ ನಿಸರ್ಗ ದೂರ ಬದುಕನ್ನು ನಡೆಯಿಸಿಕೊಂಡ ಬಂದ ನಗರ ಜನತೆಯ ಕಲೆ **"ಶಿಷ್ಟಪದ ಕಲೆ"** ಎನಿಸಿದರೆ, ನಿಸರ್ಗ ಸಹಜವಾದ ಬದುಕನ್ನು ನಡೆಸಿಕೊಂಡು ಬಂದ ಗ್ರಾಮೀಣ ಕಲೆ **"ಜನಪದ ಕಲೆ"** ಎನಿಸುತ್ತದೆ.[೩]

ಭಾರತದ ಹೆಸರಾಂತ ಪಂಡಿತ ಪಾಣಿನಿಯು, ರಾಜ ಶಿಲ್ಪಿ ಕಲಾವಿದರ ಮತ್ತು ಗ್ರಾಮಶಿಲ್ಪಿ ಗ್ರಾಮೀಣ ಕಲಾವಿದರ ನಡುವಿನ ವಿಶಿಷ್ಟತೆಯನ್ನು ವಿವರಿಸಿದ್ದಾನೆ. ಈ ವರ್ಗೀಕರಣ ಜನಪದ ಕಲೆಯ ಪರಿಕಲ್ಪನೆಯ ಆಳವನ್ನು ನೀಡುವುದು ಮಾತ್ರವಲ್ಲ ಅದು ಎರಡು ವಿಭಿನ್ನ ಕಲಾರೂಪಗಳನ್ನು ವಿಶೇಷವಾಗಿ ಗುರುತಿಸುತ್ತಿದ್ದಾನೆ.[೪]

ನಾಗರಿಕತೆಯ ಪ್ರಭಾವ ಜನಪದರ ಮೇಲೆ ಆದಂತೆ ಜಾನಪದ ಕೃಶವಾಗುತ್ತದೆ. ಎಷ್ಟೋ ಅಂಶಗಳು ಕಣ್ಮರೆಯಾಗುತ್ತವೆ. ಜನಪದರು ಎಲ್ಲಿಯವರೆಗೆ ಇರುತ್ತಾರೋ ಅಲ್ಲಿಯವರೆಗೂ ಜನಪದ ಅಂಶಗಳು ಕಾಲದಿಂದ ಕಾಲಕ್ಕೆ ಪರಂಪರೆಯಿಂದ ಪರಂಪರೆಗೆ ಹರಿಯುವಾಗ ಮಾರ್ಪಾಟನ್ನು ಹೊಂದುತ್ತಾ ಬರುತ್ತವೆ ಎಂಬ ಅಂಶ ಗಮನಾರ್ಹವಾದುದು. ಯಾವುದೇ ಕಲೆಯಾಗಲಿ ಸಾಹಿತ್ಯವಾಗಲಿ ಕಾಲಕ್ಕನುಗುಣವಾಗಿ ಬದಲಾವಣೆ ಆಗುತ್ತಲೇ ಇರುತ್ತದೆ. ಇಲ್ಲದೆ ಹೋದರೆ ಅದು ತನ್ನ ಜೀವಂತಿಕೆಯನ್ನು ಕಳೆದುಕೊಳ್ಳುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.[೫]

ಜನಪದ ಕಲೆಗಳು ಗ್ರಾಮೀಣರ ಬದುಕಿನಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿವೆಯಾದರೂ ಆಧುನಿಕ ನಾಗರಿಕತೆಯ ಬಿರುಗಾಳಿ ಹಳ್ಳಿಗಳ ಕಡೆ ಬೀಸತೊಡಗಿ ಪರಂಪರಾನುಗತವಾಗಿ ಬೆಳೆದು ಬಂದ ಅನೇಕ ಕಲೆಗಳು ಕಣ್ಮರೆಯಾಗಿವೆ. ಕೆಲವು ಕಲೆಗಳಂತೂ ಧೂಳಿನಿಂದ ಮಸುಕಾಗಿದ್ದರೆ. ಕೆಲವು ರೂಪಾಂತರ ಹೊಂದಿ ತಮ್ಮ ಸಹಜ ಸೌಂದರ್ಯವನ್ನು ಕಳೆದುಕೊಂಡಿವೆ.[೬] ಈ ಹಿನ್ನೆಲೆಯಲ್ಲಿ ಮರೆಯಾಗುತ್ತಿರುವ ಕಿನ್ನಾಳ ಕಲೆ ಮತ್ತು ಕಿನ್ನಾಳ ಕಲಾವಿದರ ಬಗ್ಗೆ ಅಧ್ಯಯನವನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಿದೆ.

ಕರ್ನಾಟಕದಲ್ಲಿರುವ ಜನಪದ ಚಿತ್ರ-ಶಿಲ್ಪಗಳನ್ನು ಅವುಗಳ ಗುಣ ಸ್ವಭಾವಗಳ ಬಗೆಗೆ ಪ್ರಾದೇಶಿಕವಾಗಿ ವಿವರವಾದ ಅಧ್ಯಯನ ಮಾಡಬೇಕಾಗಿದೆ ಮತ್ತು ಈ ಕಲೆಯ ವಿವಿಧ ಪ್ರಕಾರಗಳತ್ತ ನಮ್ಮ ದೃಷ್ಟಿ ಸೆಳೆದು ಜನಪದ ಕಲಾಕ್ಷೇತ್ರದ ಮೇಲೆ ಸಂಶೋಧನೆ ಮಾಡುವತ್ತ ನಮ್ಮ ಗಮನ ಹರಿಸಬೇಕಾಗಿದೆ. ಕನ್ನಡದಲ್ಲಿ ಜಾನಪದದ ಇತರ ಪ್ರಕಾರಗಳ ಬಗ್ಗೆ ಸಾಕಷ್ಟು ಪುಸ್ತಕಗಳು ಪ್ರಕಟವಾಗಿವೆ. ಆದರೆ ಚಿತ್ರಶಿಲ್ಪಗಳ ಬಗ್ಗೆ ನಾವು ಸಾಕಷ್ಟು ಗಮನ ಹರಿಸಿಲ್ಲ ಈ ವೈವಿಧ್ಯಮಯವಾದ ಜನಪದ ಕಲೆಯ ಕುರಿತು ಸಾಕಷ್ಟು ಸಂಶೋಧನೆ ನಡೆಯಬೇಕಾದದ್ದು ಅಗತ್ಯವಾಗಿದೆ. ಸ್ಪಷ್ಟ ಸ್ವರೂಪದೊಂದಿಗೆ ಈ ಜನಪದ ಕಲೆಯ ಅಧ್ಯಯನ ಇಂದಿನ ತುರ್ತು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತವಾಗಬಲ್ಲ ಜನಪದರ ನೂರಾರು ಕಲೆಗಳಲ್ಲಿ ಪ್ರಧಾನವಾದ ಆದರೆ ಸಮಗ್ರವಾಗಿ ಅಧ್ಯಯನಕ್ಕೆ ಒಳಪಡದೇ ಇರುವ ಕಿನ್ನಾಳ ಕಲೆಯನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ರಚನೆಗೆ ನೆರವಾಗುವ ಆಕರ ಸಾಮಾಗ್ರಿಗಳಲ್ಲಿ ಜನಪದ ಕಲೆಯ ಪ್ರಕಾರಗಳಾದ ಕಿನ್ನಾಳ ಶಿಲ್ಪ ಮತ್ತು ಚಿತ್ರಗಳು ಪ್ರಮುಖವಾದವುಗಳು. ನಮ್ಮ ಹಿಂದಿನವರ ಜೀವನ ಶೈಲಿಗೆ

೦೨. ಟಿ.ಆರ್.ಶಿವೇಸ್ವಾಮಿ (ಪ್ರ.ಸಂ.) : ಶಿಲ್ಪಕಲಾ ಪ್ರಪಂಚ, ಪುಟ. ೪೬೩
೦೩. ಡಾ.ಎಸ್.ಸಿ.ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪುಟ. ೩
೦೪. ಎನ್.ಮರಿಶಾಮಾಚಾರ್ : ಭಾರತದ ಜನಪದ ಚಿತ್ರಕಲೆ, ಪುಟ ೫
೦೫. ಎಚ್.ಎಚ್.ಸಿದ್ಧಗಂಗಪ್ಪ : ಹಳ್ಳಿಯ ಬಳ್ಳಿ, ಪುಟ ೧
೦೬. -ಅದೇ-ಪುಟ ೩೫

ಸಾಕ್ಷಿಯಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಈ ಶಿಲ್ಪಗಳು ಮತ್ತು ಚಿತ್ರಗಳು ನೋಡಲು ದೊರೆಯುತ್ತವೆ. ಅವುಗಳದೇ ಆದ ಶ್ರೀಮಂತ ಪರಂಪರೆ ಈ ಕಲೆಗಳಿಗೆ ಇದೆ.

ವಾಸ್ತವವಾಗಿ ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಮಾತ್ರವಲ್ಲ ಅಲ್ಲಿ ಬದುಕಿದ್ದ ಜನ. ಹೀಗೆ ಬದುಕಿರುವ ಜನರ ಬದುಕಿನ ಒಂದು ಗಣನೀಯ ಭಾಗವಾಗಿ ಕಲೆಗಳು ಆಕಾರ ಪಡೆದಿರುತ್ತವೆ. ಇತ್ತಿಚೆಗೆ ಇತಿಹಾಸವನ್ನು ನೋಡುವ ದೃಷ್ಟಿಯೂ ಗಮನಾರ್ಹವಾಗಿ ಬದಲಾವಣೆ ಪಡೆದುಕೊಂಡಿವೆ. ಇತಿಹಾಸ ರಚನೆಯ ಆಕರಗಳನ್ನು ಹೊಸ ರೀತಿಯಿಂದ ನೋಡುವ ದೃಷ್ಟಿ ಬೆಳೆದಿದೆ. ಈ ಅಧ್ಯಯನದಿಂದ ನಮಗೆ ನಮ್ಮ ನಾಡಿನ ಜನಪದರ ಜೀವನ ಶೈಲಿಯ ಅಧ್ಯಯನಕ್ಕೆ ಕಿನ್ನಾಳ ಕಲೆ ಹೊಸ ಆಕರ ಸಾಮಗ್ರಿಯಾಗಿ ಸಾಂಸ್ಕೃತಿಕ ಪರಂಪರೆಯ ಅಧ್ಯಯನಕ್ಕೆ ಸಹಕಾರಿಯಾಗಲಿದೆ.

ಜನಪದ ಶಿಲ್ಪಕಲೆ ಎಲ್ಲ ಕಟ್ಟಳೆಗಳಿಂದ ಮುಕ್ತವಾದ ಆದರೆ, ಜನರ ಬದುಕಿನೊಂದಿಗೆ ಬೆರೆತುಕೊಂಡು ಬಂದ ಸಹಜ ಅಭಿವ್ಯಕ್ತಿಯ ಕಲೆಯಾಗಿದೆ. ಈ ಜನಪದ ಶಿಲ್ಪಗಳು ಎಂದರೆ ಉಳಿ ಮುಟ್ಟದ ಪ್ರತಿಮೆಗಳಿದ್ದಂತೆ ಅವುಗಳಲ್ಲಿ ನಯ, ನಾಜೂಕು ಕಡಿಮೆ ಇದ್ದರೂ, ಅಂತಃಸತ್ವ ಹಿರಿದಾಗಿರುತ್ತದೆ.[೭]

ಈ ಕಲಾ ಸಂಪತ್ತನ್ನು ನಾಡಿಗೆ ಪರಿಚಯಿಸುವ ಕಿನ್ನಾಳ ಕಲೆಯ ಕುರಿತು ಸಣ್ಣ ಪುಸ್ತಕಗಳು ಪ್ರಕಟವಾಗಿದ್ದರೆ, ದಿನಪತ್ರಿಕೆ ಹಾಗೂ ವಿಶೇಷ ಸಂಚಿಕೆ ವಾರ ಪತ್ರಿಕೆಗಳಲ್ಲಿ ಬಂದಿರುವ ಕೆಲವು ಬಿಡಿ ಲೇಖನಗಳನ್ನು ಹೊರತು ಪಡಿಸಿದರೆ ಈ ಕಲೆಯ ಕುರಿತು ಸಮಗ್ರವಾದ ಅಧ್ಯಯನಗಳು ನಡೆದಿರುವುದಿಲ್ಲ. ಇದನ್ನು ಗಮನಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.


ಕಿನ್ನಾಳದ ಚಿತ್ರಕಲೆಯನ್ನು ಮತ್ತು ಶಿಲ್ಪಕಲೆಯನ್ನು ದೃಶ್ಯಾತ್ಮಕ ನೆಲೆಯಿಂದ ಅಧ್ಯಯನ ಮಾಡುವ ಉದ್ದೇಶ ಈ ಪ್ರಬಂಧಕ್ಕೆ ಇದೆ . ಈ ಕಲೆಯು ಬೆಳೆದು ಬಂದ ಬಗೆಯ ಕುರಿತು ಇಲ್ಲಿ ಸಿದ್ಧಗೊಳ್ಳುವ ವರ್ಣಗಳ ಹಾಗೂ ಶಿಲ್ಪಕಲಾಕೃತಿಗಳ ವಸ್ತು-ವಿಷಯ, ವಿವಿಧ ಪ್ರಕಾರಗಳ ಬಗ್ಗೆ ಅಧ್ಯಯನ ಮಾಡುವುದರ ಜೊತೆಗೆ ಅವುಗಳನ್ನು ಮುಂದಿನ ತಲೆಮಾರಿಗೆ ದಾಖಲಿಸಿಡುವ ಉದ್ದೇಶವನ್ನು ಪ್ರಮುಖವಾಗಿ ಹೊಂದಲಾಗಿದೆ. ಹಾಗೆಯೇ ಈ ಕಲೆಯ ಬೆಳವಣಿಗೆಯ ಕುರಿತು ಗಂಭೀರವಾದ ಚರ್ಚೆಗೆ ಪ್ರಬಂಧದಲ್ಲಿ ಪ್ರಾಶಸ್ತ್ಯ ನೀಡಲಾಗಿದೆ. ಹೀಗೆ ಹಲವಾರು ಉದ್ದೇಶಗಳ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಈ ಅಧ್ಯಯನದ ವ್ಯಾಪ್ತಿ ಹೆಸರೇ ಸೂಚಿಸುವಂತೆ ಕಿನ್ನಾಳಕ್ಕೆ ಮಾತ್ರ ಸೀಮಿತಗೊಂಡಿದ್ದರೂ ಕಿನ್ನಾಳದಿಂದ ಆಚೆಗೆ ಸಂಗ್ರಹಿಸಿಲ್ಪಟ್ಟ ಕಲಾಕೃತಿಗಳು, ಈ ಊರಿಂದ ವಲಸೆ ಹೋದ ಕಲಾವಿದರ ಕುಟುಂಬ, ಅವರ ಸ್ಥಿತಿಗತಿ ಮುಂತಾದವುಗಳು ಅಧ್ಯಯನವು ಇದರ ವ್ಯಾಪ್ತಿಗೆ ಬರುತ್ತವೆ.

ಜನಪದ ಕಲೆಗಳು ಧರ್ಮಮೂಲವಾಗಿ ಬೆಳೆದುಬಂದಿವೆ. ಚಿತ್ರಕಲೆ ಎಂದೊಡನೆ ಬಣ್ಣದ ಕುಂಚದ ಪ್ರಪಂಚವೆಂಬಂತಹ ಸಾಮಾನ್ಯ ಅನಿಸಿಕೆ ಸಹಜ. ಅಥವಾ ಬಣ್ಣದೊಡನೆ ಆಟವಾಡುವ ಈ ಕಲೆಯ ಮಹತ್ವವೇನಿದ್ದಿತ್ತು ಎಂದು ಕಡೆಗಣಿಸಿದರೂ ವರ್ಷದ ಅನೇಕ ದಿನಗಳನ್ನು ನಾವು ಬಣ್ಣದ ಜೀವಿಗಳಾಗಿಯೇ ಕಳೆಯುತ್ತೇವೆ. ಬದುಕು ಯಾಂತ್ರಿಕ ಚಟುವಟಿಕೆಯಾಗುವದರಿಂದ ಅದರ ಮಹತ್ವ ಕಂಡು ಬರುವದಿಲ್ಲ.

ಜನಪದ ಕಲೆಯೆಂದರೆ ಕೇವಲ ಬಣ್ಣವಲ್ಲ ರೇಖೆಯಲ್ಲ, ಸುಣ್ಣಕಾವಿಗಳ ಬೊಟ್ಟುಗಳಲ್ಲ,ಧಾರ್ಮಿಕ ಸಂಪ್ರದಾಯಗಳು, ಪ್ರಕೃತಿಯ ಶಕ್ತಿ ಮೂಲಗಳು, ಮನುಷ್ಯನ ಸುಪ್ತಶಕ್ತಿಗಳು ಅಡಕಗೊಂಡಿರುವ, ಸೌಂದರ್ಯ ತುಂಬಿರುವ ವೃತ್ತಿಮೂಲವಾಗಿರುವ ದೈನಂದಿನ ಬದುಕೇ ಆಗಿರುವ ಕಲೆ ಈ ಕಿನ್ನಾಳ ಕಲೆ. ಈ ಅರ್ಥದಲ್ಲಿ ಜನಪದ ಕಲೆ ಎಂದರೆ ಜನಪದರ ಜೀವನದ ಅಧ್ಯಯನವೇ ಆಗಿದೆ ಎಂಬ ಮಾತು ತುಂಬ ಅರ್ಥಪೂರ್ಣವಾದುದಾಗಿದೆ.[೮]

ಕುಶಲ ಕಲೆಗಳಲ್ಲಿ ಪ್ರತಿಭೆಯ ಚಮತ್ಕಾರ, ಶ್ರದ್ಧೆ, ಶ್ರಮಗಳಿಂದ ಜ್ಞಾನವೊಂದರ ಸಂಪರ್ಕದಿಂದ ಮೂರ್ತಸ್ವರೂಪ ಪಡೆದು ನಾಡಿನ ತುಂಬಾ ಬಹುಬೇಡಿಕೆಯಿಂದ ಜೀವಂತ ಕಲೆಗಳಾಗಿ ಆಕರ್ಷಣದ ಮೂಲ ಸ್ವರೂಪದಿಂದ ಅರಳುತ್ತಾ ನಿಂತಿವೆ.[೯] ಜ್ಞಾನ ಬುದ್ದಿ ಕರಕುಶಲತೆ ಮುಪ್ಪುರಿಗೊಂಡು ಅನೇಕ ಪ್ರಾಕೃತಿಕ ಹಾಗೂ ಕೈಗಾರಿಕಾ ಕ್ರಾಂತಿಗಳ ಫಲವಾಗಿ ಎಡರು ತೊಡರುಗಳನ್ನು, ಆರ್ಥಿಕ ದಬ್ಬಾಳಿಕೆಯನ್ನು, ಯಂತ್ರಗಳ ಪೈಪೋಟಿಯನ್ನು ಮೆಟ್ಟಿ ನಿಂತು ಹೆದರದೇ ಕಳೆಗುಂದದೇ ಇರುವ ಕಿನ್ನಾಳ ಕಲೆ ಕುರಿತು ಅಧ್ಯಯನ ಮಾಡಲಾಗಿದೆ.



೧೭. ಡಾ.ಶಿವಾನಂದ ಬಂಟನೂರ : ಕರ್ನಾಟಕ ಜನಪದ ಶಿಲ್ಪಕಲೆ, ಅಪ್ರಕಟಿತ ಪಿಹೆಚ್.ಡಿ.ಮ.ಪ್ರ. ಪುಟ ೪
೧೮. ಡಾ.ಎಸ್.ಸಿ.ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ ಪುಟ ೩
೧೯. ಗವಿಸಿದ್ಧ ಎನ್ ಬಳ್ಳಾರಿ : ಕಿನ್ನಾಳ ಗೊಂಬೆಗಳು, ಪುಟ ೫

ಪರಂಪರೆಯಿಂದ ಪರಂಪರೆಗೆ ಹರಿದು ಬಂದ ಇಂತಹ ಕಲೆಗಳು ಜನರ ಮತ್ತು ದೇಶದ ಮೂಲ ಸಂಸ್ಕೃತಿಯನ್ನು ತಿಳಿಸುವುದರಿಂದ ಸರಿಯಾದ ರೀತಿಯಲ್ಲಿ ಉಳಿದು ಬೆಳೆದುಕೊಂಡು ಮುಂದಿನ ತಲೆಮಾರಿಗೂ ರವಾನಿಸುವ ಜವಾಬ್ದಾರಿ ಪ್ರತಿಯೊಬ್ಬ ಪ್ರಜ್ಞಾವಂತನದ್ದೂ ಆಗಿರುತ್ತದೆ. ಈ ಕಲೆಗಳನ್ನು ಪ್ರದರ್ಶಿಸುವ ಕಲಾಕಾರರ ಆರ್ಥಿಕ ಮಟ್ಟ ಸುಧಾರಿಸಿದರೆ ಹಳ್ಳಿಯ ಕಲೆಗಳಿಗೆ ಪ್ರೋತ್ಸಾಹವಿಟ್ಟರೆ ನಿಜಕ್ಕೂ ಕಲೆಗಳು ಉಳಿಯುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಮಹತ್ವಪೂರ್ಣವಾಗಿರುತ್ತದೆ.

ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು

ಕರ್ನಾಟಕದ ಸಂದರ್ಭದ ಚಿತ್ರಕಲಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನಾ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ಏಕೆಂದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಗಳ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರಕಿದ್ದು ತೀರ ಇತ್ತೀಚೆಗಷ್ಟೆ. ೯೦ರದಶಕದಲ್ಲಿ ಈ ಅಧ್ಯಯನಗಳು ತೀವ್ರಗೊಂಡು ಈಗ ಪ್ರೌಢಾವಸ್ಥೆಗೆ ಬಂದು ತಲುಪಿವೆ. ೧೯೮೦ರ ದಶಕದಿಂದ ಕರ್ನಾಟಕದಲ್ಲಿ ನಡೆದ ದೃಶ್ಯಕಲಾ ಅಧ್ಯಯನಗಳ ಸ್ಥೂಲವಾದ ವಿವರವನ್ನು ಈ ಕೆಳಗೆ ಸಮೀಕ್ಷಿಸಿ ಕೊಡಲಾಗಿದೆ.

೧೯೮೦ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲಬಾರಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆ ಕುರಿತು ಸಂಶೋಧನಾತ್ಮಕ ಅಧ್ಯಯನ ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. ಡಾ.ಎಸ್.ಸಿ.ಪಾಟೀಲರು ೧೯೮೩ರಲ್ಲಿ ಕರ್ನಾಟಕ ವಿ.ವಿ.ಯ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ ಒಂದು ಅಧ್ಯಯನ**[೧೦] ಎಂಬ ಸಂಶೋಧನ ಕಿರು ಪ್ರಬಂಧವು ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ. ೧೯೮೭ರಲ್ಲಿ ಡಾ.ಬಿ.ಕೆ.ಹಿರೇಮಠರವರು **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ**[೧೧] ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಕಲೆ ಕುರಿತಂತೆ ಕೆಲವು ಅಧ್ಯಾಯಗಳು ಮೀಸಲಾಗಿಟ್ಟ ಅಧ್ಯಯನ ಮಾಡಿದ್ದಾರೆ. ಇದರ ನಂತರ ೧೯೯೧ರಲ್ಲಿ ಕರ್ನಾಟಕದಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿ.ವಿ.ಗೆ ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧ **ಕರ್ನಾಟಕದ ಜನಪದ ಚಿತ್ರಕಲೆ**[೧೨] ಈ ಮಹಾಪ್ರಬಂಧವನ್ನು ಡಾ.ಎಸ್.ಸಿ.ಪಾಟೀಲರು ಸಿದ್ಧಪಡಿಸಿದ್ದು ನಮ್ಮ ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ರಲ್ಲಿ ಡಾ. ಅ.ಲ.ನರಸಿಂಹನ್ ಅವರು ಬೆಂಗಳೂರು ವಿ.ವಿ.ಗೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು,**[೧೩] ೧೯೯೭ರಲ್ಲಿ ಡಾ.ಸಂಪದಾ ಭಟ್ ಅವರ **ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು,**[೧೪] ಬೆಂಗಳೂರು ವಿಶ್ವವಿದ್ಯಾಲಯಕ್ಕೆ ೧೯೯೭ರಲ್ಲಿ ಡಾ.ಪುಷ್ಪಾ ದ್ರಾವಿಡ ಇವರು ಮಂಡಿಸಿದ **ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ ಜೀವನ ಮತ್ತು ಕಲಾಕೃತಿಗಳು,**[೧೫] ೨೦೦೧ ರಲ್ಲಿ ಡಾ.ಯಾದಪ್ಪ ಪರದೇಶಿಯವರ **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಒಂದು ಅಧ್ಯಯನ,**[೧೬] ೨೦೦೨ರಲ್ಲಿ ಡಾ.ಶಿವಾನಂದ ಬಂಟನೂರು ಇವರ **ಕರ್ನಾಟಕದ ಜನಪದ ಶಿಲ್ಪಕಲೆ, ಒಂದು ಅಧ್ಯಯನ,**[೧೭] ೨೦೦೨ರಲ್ಲಿ ಡಾ.ಗಿರೀಶ ಅವರ **ಬುಡಕಟ್ಟು ಚಿತ್ರಕಲೆ,**[೧೮] ೨೦೦೨ರಲ್ಲಿ ಡಾ.ಲಕ್ಷ್ಮಿದೇವಿಗವಾಯಿಯವರ **ಕಲಾವಿದ ಎಂ.ಎ.ಚೆಟ್ಟಿಯವರ ಜೀವನ, ಕಲಾಕೃತಿಗಳು– ಒಂದು ಅಧ್ಯಯನ,**[೧೯] ೨೦೦೨ರಲ್ಲಿ ಶರಣಪ್ಪ ಕೋಲ್ಕಾರ ಅವರ **ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ**

---

೧೦. ಡಾ. ಎಸ್.ಸಿ.ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿ.ವಿ.,೧೯೮೩

೧೧. ಡಾ. ಬಿ.ಕೆ.ಹಿರೇಮಠ : ಕನ್ನಡ ಹಸ್ತಪ್ರತಿಗಳು, ಪಿಹೆಚ್.ಡಿ.ಮ.ಪ್ರ. ಕರ್ನಾಟಕ ವಿ.ವಿ.,೧೯೮೭

೧೨. ಡಾ. ಎಸ್.ಸಿ.ಪಾಟೀಲ : ಜನಪದ ಚಿತ್ರಕಲೆ, ಪಿಹೆಚ್.ಡಿ.,ಮ.ಪ್ರ,೧೯೯೧

೧೩. ಡಾ. ಅ.ಲ.ನರಸಿಂಹನ್ ; ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಹೆಚ್.ಡಿ.,ಮ.ಪ್ರ., ಬೆಂಗಳೂರು ವಿ.ವಿ.೧೯೯೮

೧೪. ಡಾ. ಸಂಪದಾ ಭಟ್ : ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ.೧೯೯೮

೧೫. ಡಾ. ಪುಷ್ಪಾ ದ್ರಾವಿಡ : ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ ಜೀವನ ಮತ್ತು ಕಲಾಕೃತಿಗಳು,ಪಿಹೆಚ್.ಡಿ., ಮ.ಪ್ರ., ಬೆಂಗಳೂರು ವಿ.ವಿ., ೧೯೯೭

೧೬. ಡಾ.ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ. ೨೦೦೦

೧೭. ಡಾ.ಶಿವಾನಂದ ಬಂಟನೂರು : ಕರ್ನಾಟಕದ ಜನಪದ ಶಿಲ್ಪಕಲೆ, ಒಂದು ಅಧ್ಯಯನ.ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ.೨೦೦೨

೧೮. ಡಾ.ಗಿರೀಶ : ಬುಡಕಟ್ಟು ಚಿತ್ರಕಲೆ.ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ.೨೦೦೨

೧೯. ಡಾ.ಲಕ್ಷ್ಮಿದೇವಿ ಗವಾಯಿ : ಕಲಾವಿದ ಎಂ.ಎ.ಚೆಟ್ಟಿಯವರ ಜೀವನ, ಕಲಾಕೃತಿಗಳು–ಒಂದು ಅಧ್ಯಯನ. ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ.೨೦೦೨

ಕಾಲದ ಕಲೆ.[೨೦] ೨೦೦೨ರಲ್ಲಿ ಡಾ.ಸೌಮ್ಯ ಅವರ **ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್**[೨೧] ೨೦೦೨ರಲ್ಲಿ ಡಾ.ಪ್ರಮೀಳಾ ಲೋಚನ ಅವರ **ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್ಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್**[೨೨] ೨೦೦೩ರಲ್ಲಿ ಡಾ.ವೀಣಾ ಶೇಖರ್ ಮಂಡಿಸಿದ **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ** (೧೭೮೦-೧೮೨೦),[೨೩] ೨೦೦೩ರಲ್ಲಿ ಡಾ.ಸಿದ್ಧಲಿಂಗಸ್ವಾಮಿ ಹಿರೇಮಠ ಅವರ **ಕಲಾವಿದ ಆರ್.ಎಮ್.ಹಡಪದ, ಒಂದು ಅಧ್ಯಯನ,**[೨೪] ೨೦೦೩ರಲ್ಲಿ ಡಾ.ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿಗೆ ಮಂಡಿಸಿದ **ಎಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯಕೇಶನ್ ಎಟ್ ಸ್ಕೂಲ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ,**[೨೫] ೨೦೦೪ರಲ್ಲಿ ಡಾ.ವಿ.ಎಮ್.ಬಾಗಾಯತ್ ಅವರ **ಕರ್ನಾಟಕ ಮುಸ್ಲಿಂ ಅರಸರ ಕಾಲದ** ಚಿತ್ರಕಲೆ, ಒಂದು ಅಧ್ಯಯನ(೧೪೦೦-೧೮೦೦),[೨೬] ೨೦೦೪ರಲ್ಲಿ ಡಾ.ಶಿವಕುಮಾರ ಎ.ಓ. ಅವರ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು.**[೨೭] ೨೦೦೫ರಲ್ಲಿ ಡಾ.ಶಶಿಕಲಾ ಹೂಗಾರ ಅವರ **ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ**[೨೮] ೨೦೦೫ರಲ್ಲಿ ಡಾ.ಶಿವಪ್ರಕಾಶ ತುಕ್ಕಣ್ಣವರ ಅವರ **ಕರ್ನಾಟಕ ರಥ ಶಿಲ್ಪಕಲೆ**[೨೯] ೨೦೦೫ರಲ್ಲಿ ಡಾ.ಎಂ.ಎನ್.ಚಿತ್ರಗಾರ ಅವರ **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**[೩೦] ವಿಶ್ವೇಶ್ವರಿ ತಿವಾರಿ ಅವರ **ರಂಗೋಲಿ ಕಲೆ**[೩೧] ಕುರಿತ ಬಂದ ಪಿಹೆಚ್.ಡಿ.ಮಹಾಪ್ರಬಂಧಗಳು. ೨೦೦೫ರಲ್ಲಿ ಡಾ. ಆನಂದ ಪೂಜಾರ ಅವರ **ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ**[೩೨] ಡಿ.ಲಿಟ್. ಮಹಾಪ್ರಬಂಧವಾಗಿದೆ.

೨೦೦೨ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರು ಎಂ.ಫಿಲ್. ಪದವಿಗಾಗಿ ಮಂಡಿಸಿದ **ಚಿತ್ರಕಲಾವಿದ ಜೆ.ಎಸ್.ಖಂಡೇರಾವ-ಒಂದು ಅಧ್ಯಯನ,**[೩೩] ಮತ್ತು ೨೦೦೩ರಲ್ಲಿ ಎ.ಎಸ್.ವಿಶ್ವನಾಥ ಅವರ **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ,**[೩೪] ೨೦೦೫ರಲ್ಲಿ ಶಂಕರಪ್ಪ ಎಂ. ಕುಂದಗೋಳ ಅವರ **ಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು.**[೩೫] ಮತ್ತು ಸಿ.ಡಿ.ಜಟ್ಟೆಣ್ಣವರ ಅವರ **ಕಲಾವಿದ ಡಾ.ಎಂ.ವಿ.ಮಿಣಜಗಿಯವರ ಜೀವನ ಮತ್ತು ಕಲಾಕೃತಿಗಳು**[೩೬] ಈ ಪ್ರಬಂಧಗಳು ಕರ್ನಾಟಕ ದೃಶ್ಯಕಲೆಯ ಕುರಿತಾಗಿ

---

೨೦. ಡಾ. ಶರಣಪ್ಪ ಕೋಲ್ಕಾರ : ಅವರ ಕೊಪ್ಪಳ-ಹಂಪಿ ಪ್ರದೇಶದ ಪ್ರಾಗಿತಿಹಾಸಿಕ ಕಾಲದ ಕಲೆ,ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ.೨೦೦೨

೨೧. ಡಾ. ಸೌಮ್ಯ : ಯಂತ್ರಾ ದಿ ಯುಜುಮ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರನ್ಸ್ ಟು ಕಾಂಟೆಂಪರರಿ ತಾಂತ್ರಿಕಾ ಆರ್ಟಿಸ್ಟ, ಪಿಹೆಚ್.ಡಿ., ಮ.ಪ್ರ., ಬೆಂಗಳೂರು ವಿ.ವಿ. ೨೦೦೨

೨೨. ಡಾ. ಪ್ರಮೀಳಾ ಲೋಚನ : ಮೈಡ್ ಮ್ಯೂಜಿಕ್ ಅಂಡು ಕಲರ್ ಎಕ್ಷಪೋಜಿಸ್ ಅಂಡ್ ಡೆವೆಲಪ್ಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್, ಪಿಹೆಚ್.ಡಿ., ಮ.ಪ್ರ., ಬೆಂಗಳುರು ವಿ.ವಿ. ೨೦೦೨

೨೩. ಡಾ.ವೀಣಾ ಶೇಖರ್ : ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦- ೧೮೨೦) ಪಿಹೆಚ್.ಡಿ.,ಮ.ಪ್ರ.,ಬೆಂಗಳೂರು ವಿ.ವಿ., ೨೦೦೩

೨೪. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್.ಎಮ್.ಹಡಪದ, ಒಂದು ಅಧ್ಯಯನ,ಪಿಹೆಚ್.ಡಿ., ಮ.ಪ್ರ..ಕನ್ನಡ ವಿ.ವಿ.೨೦೦೩

೨೫. ಡಾ. ಎಸ್.ಸಿ.ಪಾಟೀಲ : ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯಕೇಶನ್ ಆಟ್ ಸ್ಕೂಲ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ,ಕರ್ನಾಟಕ ವಿ.ವಿ., ೨೦೦೩

೨೬. ಡಾ. ವಿ.ಎಮ್.ಬಾಗಾಯತ್ : ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ(೧೪೦೦-೧೮೦೦), ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ.೨೦೦೪

೨೭. ಡಾ.ಶಿವಕುಮಾರ ಎ.ಓ. : ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಹೆಚ್.ಡಿ. ಮ.ಪ್ರ., ಗು.ವಿ.ಗು. ೨೦೦೪

೨೮. ಡಾ.ಶಶಿಕಲಾ ಹೂಗಾರ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, ಪಿಹೆಚ್.ಡಿ.ಮ.ಪ್ರ.ಕನ್ನಡವಿ.ವಿ.,೨೦೦೫

೨೯. ಡಾ.ಶಿವಪ್ರಕಾಶ ತುಕ್ಕಣ್ಣವರ : ಕರ್ನಾಟಕ ರಥ ಶಿಲ್ಪಕಲೆ, ಪಿಹೆಚ್.ಡಿ.ಮ.ಪ್ರ.ಕನ್ನಡವಿ.ವಿ.,೨೦೦೫

೩೦. ಡಾ.ಎಚ್.ಎನ್.ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಹೆಚ್.ಡಿ.ಮ.ಪ್ರ.ಕನ್ನಡವಿ.ವಿ.,೨೦೦೫

೩೧. ವಿಶ್ವೇಶ್ವರಿ ತಿವಾರಿ : ರಂಗೋಲಿ ಚಿತ್ರಕಲೆ, ಪಿಹೆಚ್.ಡಿ.ಮ.ಪ್ರ. ಗು.ವಿ.ವಿ.,೨೦೦೬

೩೨. ಡಾ.ಆನಂದ ಕೆ. ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್. ಮ.ಪ್ರ.ಕನ್ನಡವಿ.ವಿ.,೨೦೦೫

೩೩. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ-ಒಂದು ಅಧ್ಯಯನ,ಎಂ.ಫಿಲ್. ಪ್ರ. ಕ.ವಿ.ವಿ.ಹಂ. ೨೦೦೨

೩೪. ಎ.ಎಸ್.ವಿಶ್ವನಾಥ :ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ, ಎಂ.ಫಿಲ್.ಪ್ರ. ಕ.ವಿ.ವಿ.ಹಂ. ೨೦೦೩

೩೫. ಶಂಕರಪ್ಪ ಎಂ. ಕುಂದಗೋಳ : ಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರ. ಕ.ವಿ.ವಿ.ಹಂ. ೨೦೦೫

೩೬. ಸಿ.ಡಿ.ಜಟ್ಟೆಣ್ಣವರ : ಕಲಾವಿದ ಡಾ.ಎಂ.ವಿ.ಮಿಣಜಗಿಯವರ ಜೀವನ ಮತ್ತು ಕಲಾಕೃತಿಗಳುಎಂ.ಫಿಲ್. ಪ್ರ., ಕ.ವಿ.ವಿ.ಹಂ. ೨೦೦೫

ಬಂದ ಸಂಶೋಧನಾ ಅಧ್ಯಯನಗಳಾಗಿದ್ದು, ಈಗ ಗುಲ್ಬರ್ಗಾ, ಬೆಂಗಳೂರು, ಕರ್ನಾಟಕ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ.ಅಧ್ಯಯನಕ್ಕೆ ಹಲವಾರು ವಿದ್ಯಾರ್ಥಿಗಳು ಸೇರ್ಪಡೆಯಾಗಿ ಅಧ್ಯಯನ ನಿರತರಾಗಿದ್ದಾರೆ. ಇದಲ್ಲದೇ ಅನೇಕ ಬಿ.ಎಫ್.ಎ.ಪದವಿ ಹಾಗೂ ಎಮ್.ವಿ.ಎ. ಪದವಿ, ಎಮ್.ಎಫ್.ಎ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು ಅವುಗಳ ಸಂಖ್ಯೆ ನೂರೈವತ್ತಕ್ಕೂ ಮಿಕ್ಕಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆ ತೀವ್ರವಾಗಿ ಮುನ್ನಡೆಯುತ್ತಲಿದೆ.

ಕಿನ್ನಾಳ ಕಲೆಯ ಕುರಿತು ಇದುವರೆಗೆ ನಡೆದ ಅಧ್ಯಯನಗಳು

ಕಿನ್ನಾಳ ಕಲೆಯ ಬಗ್ಗೆ ಎರಡು ಸಣ್ಣ ಪುಸ್ತಕಗಳು ಮತ್ತು ಕೆಲವು ಕಲಾ ಗ್ರಂಥಗಳಲ್ಲಿ ಕಿನ್ನಾಳ ಹಲವು ಲೇಖನಗಳು ಬಂದಿವೆ. ಹಾಗೆಯೇ ಕನ್ನಡ ಇಂಗ್ಲೀಷ ದಿನಪತ್ರಿಕೆಗಳಲ್ಲಿ ಮತ್ತು ವಾರ ಪತ್ರಿಕೆ, ಗೆಝೆಟಿಯರಗಳಲ್ಲಿ ಕಿನ್ನಾಳ ಕಲೆಯ ಬಗ್ಗೆ ಅಲ್ಪ ಸ್ವಲ್ಪ ಮಾಹಿತಿ ಇದೆ.

ಗೆಜೆಟೀಯರ್ ಆಫ್ ಇಂಡಿಯಾ, ಮೈಸೂರ ಸ್ಟೇಟ್, ರಾಯಚೂರ ಡಿಸ್ಟ್ರಿಕ್ಟ್[೩೭] ಈ ಗ್ರಂಥದಲ್ಲಿ ರಾಯಚೂರ ಜಿಲ್ಲೆಯ ಕಿನ್ನಾಳದ ಚಿತ್ರಗಾರರು ರಚಿಸುವ ಗೊಂಬೆಗಳು ಮತ್ತು ಆಟಿಕೆ ಸಾಮಾನುಗಳ ವೈವಿಧ್ಯತೆಯನ್ನು ವಿವರಿಸುವುದರೊಂದಿಗೆ ಕಿನ್ನಾಳ ಕಲಾವಿದರ ವಂಶಾವಳಿಯ ಕುರಿತು ಮಾಹಿತಿ ಇದೆ. ಆರ್.ಎಚ್. ಕುಲಕರ್ಣಿಯವರ **ಕಿನ್ನಾಳ ಚಿತ್ರಕಲೆ**[೩೮] ಕಿರು ಪುಸ್ತಕವು ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ೧೯೯೨ ರಲ್ಲಿ ಪ್ರಕಟಗೊಂಡಿದೆ. ಈ ಪುಸ್ತಕದಲ್ಲಿ ಕಿನ್ನಾಳ ಸಾಂಪ್ರದಾಯಕ ಚಿತ್ರ ಶೈಲಿಯ ಐತಿಹಾಸಿಕ ಹಿನ್ನೆಲೆ ಬೆಳವಣಿಗೆ ಹಾಗೂ ಇಂದಿನ ಸ್ಥಿತಿಗತಿಯ ಬಗ್ಗೆ ಚರ್ಚಿಸಿದ್ದಾರೆ. ಅಲ್ಲದೆ ಈ ಶೈಲಿಯನ್ನು ಹಲವಾರು ತಲೆಮಾರುಗಳಿಂದ ಕುಲಕಸಬನ್ನಾಗಿ ಮಾಡಿಕೊಂಡು ಬಂದಿರುವ ಚಿತ್ರಗಾರ ಕುಟುಂಬಗಳ ಬಗೆಗೂ ಮಾಹಿತಿ ಇದೆ. ಕಿನ್ನಾಳ ಕಲೆಯ ತಾಂತ್ರಿಕ ಬೆಳವಣಿಗೆ, ಪ್ರಭಾವ ಶೈಲಿಯ ವಿಶ್ಲೇಷಣೆ, ವೃತ್ತಾಂತ ಮತ್ತು ಕುಶಲ ಕಲೆಯ ಬೆಳವಣಿಗೆಯ ಬಗ್ಗೆ ಮಾಹಿತಿ ಸಿಗುತ್ತದೆ.

ಗವಿಸಿದ್ದ ಎನ್.ಬಳ್ಳಾರಿಯವರ **ಕಿನ್ನಾಳ ಗೊಂಬೆಗಳು**[೩೯] ಶೀರ್ಷಿಕೆಯ ಪುಸ್ತಕವು ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯದಿಂದ ೧೯೯೬ರಲ್ಲಿ ಪ್ರಕಟಣೆಗೊಂಡಿದೆ. ಕರಕುಶಲಕಲೆಯ ಹಿನ್ನೆಲೆ, ಮುನ್ನಲೆ, ಕಿನ್ನಾಳ ಗೊಂಬೆಗಳು ಕಿನ್ನಾಳ ಕಲೆಯ ಇತಿಹಾಸ, ಕಿನ್ನಾಳ ಶೈಲಿಗೆ ನೀರೆರೆದು ಪೋಷಿಸಿದವರು, ಕಲೆಯ ಮೇಲಾದ ಪ್ರಭಾವ,ವಿಶೇಷತೆ, ಕಲಾವಿದರು ಬಳಸುವ ಕಚ್ಚಾ ಸಾಮಾಗ್ರಿಗಳ ಬಗ್ಗೆ ವಿವರಿಸಿದ್ದಾರೆ. ಕಿನ್ನಾಳ ಚೌಕಿ, ಫಲಕಗಳನ್ನು ಮಾಡುವ ವಿಧಿ ವಿಧಾನ, ವರ್ಣಸಂಯೋಜನೆ ಮತ್ತು ಕಿನ್ನಾಳ ಕಲಾವಿದರ ಬಗ್ಗೆ ಮಾಹಿತಿ ಇದೆ. ಕಲಾವಿದರು ಬಳಸುವ ನೈಸರ್ಗಿಕ ಬಣ್ಣಗಳ ಬಗ್ಗೆ ಮತ್ತು ಲಜಾವರ ಬಣ್ಣ ತಯಾರಿಸುವ ವಿಧಾನದ ಬಗ್ಗೆ ಮಾಹಿತಿ ಸಿಗುತ್ತದೆ.

ಕನ್ನಡಮ್ಮ ದಿನಪತ್ರಿಕೆಯಲ್ಲಿ "ಗುಡಿಗಾರರು ಚಿತ್ತಾರದ ಕಲೆಯ ದಿಗ್ಗಜರು"[೪೦] (೨೩-೦೪-೧೯೯೨) ಎಂಬ ಶಿರ್ಷಿಕೆಯುಳ್ಳ ಲೇಖನವನ್ನು ವ್ಹಿ.ಎ. ಇನಾಮದಾರ ಬರೆದಿದ್ದಾರೆ. ೧೯೯೧ರಲ್ಲಿ ರಾಜ್ಯ ಪ್ರಶಸ್ತಿ ಪಡೆದ ಚಿತ್ರಗಾರರ ಒಂದೇ ಕುಟುಂಬದಲ್ಲಿ ಮೂರು ರಾಜ್ಯ ಪ್ರಶಸ್ತಿ ಪಡೆದ ಕಲಾವಿದರು ಇರುವುದನ್ನು ಸ್ಥೂಲವಾಗಿ ಚರ್ಚಿಸಿದ್ದಾರೆ.

ಸಂಯಕ್ತ ಕರ್ನಾಟಕದಲ್ಲಿ ಮಹಾಂತೇಶ ಮಲ್ಲನಗೌಡರು "ಕರಕೌಶಲ್ಯದ ಜೀವಂತ ಸೆಲೆ"[೪೧](೧೦-೦೫-೧೯೯೨) ಎಂಬ ಶಿರ್ಷಿಕೆಯಲ್ಲಿ ಕಿನ್ನಾಳ ಕಲೆಗೆ ರಾಜಾಶ್ರಯ ನೀಡಿದ ವಿಜಯನಗರದ ಅರಸರು, ನವಾಬ ಸಾಲಾರಜಂಗ, ಕಿನ್ನಾಳ ಕಲೆಯ ಪುನರುತ್ಥಾನಕ್ಕೆ ಸಾಕಷ್ಟು ಪ್ರೋತ್ಸಾಹ ನೀಡಿರುವುದನ್ನು, ಆಧುನಿಕ ಕಾಲದಲ್ಲಿ ಕಿನ್ನಾಳದ ಕಲೆಗೆ ಯೋಗ್ಯ ಪ್ರೋತ್ಸಾಹವಿಲ್ಲದೆ ಅವನತಿಯ ಅಂಚಿಗೆ ತಲುಪಿರುವುದನ್ನು ಸೋದಾಹರಣವಾಗಿ ವಿವರಿಸಿದ್ದಾರೆ.

ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ (೨೨-೦೫-೧೯೯೨) "ರಾಜ್ಯ ಪ್ರಶಸ್ತಿ ವಿಜೇತ ಸೋಮಣ್ಣ"[೪೨] ಎಂಬ ಶೀರ್ಷಿಕೆಯಡಿಯಲ್ಲಿ ಸೋಮಣ್ಣನವರು ಬೆಳೆದು ಬಂದ ರೀತಿ, ಪಡೆದ ಶಿಕ್ಷಣದ ಬಗ್ಗೆ ಮಾಹಿತಿಯನ್ನು

---

೩೭. ರಾಯಚೂರ ಜಿಲ್ಲಾ ಗೆಜೆಟಿಯರ್ : ೧೯೭೦
೩೮. ಆರ್.ಎಚ್. ಕುಲಕರ್ಣಿ : ಕಿನ್ನಾಳ ಚಿತ್ರಕಲೆ, ಕ.ಲಕ.ಅ., ೧೯೯೨
೩೯. ಗವಿಸಿದ್ಧ ಎನ್. ಬಳ್ಳಾರಿ : ಕಿನ್ನಾಳದ ಗೊಂಬೆಗಳು, ಪ್ರಸಾರಾಂಗ, ಗು.ವಿ.ಗು. ೧೯೯೬
೪೦. ವಿ.ಎ.ಇನಾಮದಾರ : ಗುಡಿಗಾರರು ಚಿತ್ತಾರದ ಕಲೆಯ ದಿಗ್ಗಜರು, ಕನ್ನಡಮ್ಮ, ೨೩.೪.೧೯೯೨
೪೧. ಮಹಾಂತೇಶ ಮಲ್ಲನಗೌಡ : ಕರಕೌಶಲ್ಯದ ಜೀವಂತಸೆಲೆ, ಸಂಯುಕ್ತ ಕರ್ನಾಟಕ, ೧೦.೫.೧೯೯೨
೪೨. ಸಂಪಾದಕೀಯ : ರಾಜ್ಯ ಪ್ರಶಸ್ತಿ ವಿಜೇತ ಸೋಮಣ್ಣ, ಸಂಯುಕ್ತ ಕರ್ನಾಟಕ, ೨೨.೦೫.೧೯೯೨

ಹಾಗೂ ಕಿನ್ನಾಳ ಕಲೆಯ ಐತಿಹಾಸಿಕ ಹಿನ್ನೆಲೆಯ ಬಗ್ಗೆ ಲೇಖಕರು ವಿವರಿಸಿದ್ದಾರೆ. ಅಲ್ಲದೆ ಇವರು "ಕಿನ್ನಾಳ ಚೌಕಿ"ಕಲಾಕೃತಿಗೆ ರಾಜ್ಯ ಪ್ರಶಸ್ತಿಯನ್ನು ಕರ್ನಾಟಕದ ರಾಜ್ಯಪಾಲರಾದ ಶ್ರೀ ಖುರ್ಷಿದ್ ಆಲಂಖಾನ್ ಅವರಿಂದ ಸ್ವೀಕರಿಸಿದ್ದನ್ನು ಈ ಲೇಖನದಲ್ಲಿ ಮೂಡಿದೆ.

ಸುದ್ದಿಮೂಲ ದಿನಪತ್ರಿಕೆ (೨೩-೦೭-೧೯೯೨) "ಕಿನ್ನಾಳ ಕಲೆಯ ಜೀವಂತಿಕೆ ಸೋಮಣ್ಣ ವಿ. ಚಿತ್ರಗಾರ"[೪೩] ಎಂಬ ಲೇಖನದಲ್ಲಿ ಎಚ್.ಎನ್. ಚಿತ್ರಗಾರರು ಸೋಮಣ್ಣನವರಿಗೆ ರಾಜ್ಯ ಪ್ರಶಸ್ತಿ ಪಡೆದ ವಿಷಯ ಮತ್ತು ಎಂ.ವೈ. ಘೋರ್ಪಡೆಯವರು ತಮ್ಮ ಕರಕುಶಲ ಕೇಂದ್ರದಲ್ಲಿ ಕಿನ್ನಾಳ ಕಲೆಯ ತರಬೇತಿ ಕೇಂದ್ರವನ್ನು ಸೋಮಣ್ಣನವರ ತಂದೆಯವರಾದ ವೆಂಕಣ್ಣನವರ ನೇತೃತ್ವದಲ್ಲಿ ಸ್ಥಾಪಿಸಿ ಪ್ರೋತ್ಸಾಹಿಸಿದ್ದರ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.

ಅಮಚಿ ಚಿತ್ರಗಾರರು (ಸಪ್ಟೆಂಬರ್ ೧೯೯೨) "ರಾಜ್ಯ ಪ್ರಶಂಸೆ ಪಡೆದ ವಿಶಿಷ್ಟ ಕಲಾವಿದ, ಕೊಪ್ಪಳ ಬಂಧು ಶ್ರೀ ಎಸ್.ವಿ.ಚಿತ್ರಗಾರ"[೪೪] ಈ ಲೇಖನದಲ್ಲಿ ಸಹ ಸೋಮಣ್ಣನವರಿಗೆ ರಾಜ್ಯ ಪ್ರಶಸ್ತಿ ಸಿಕ್ಕ ವಿಷಯ ಮತ್ತು ಅವರ ಕುಟುಂಬದ ಬಗ್ಗೆ ಮಾಹಿತಿ ಇದೆ.

ಸುಧಾವಾರ ಪತ್ರಿಕೆ (೨೨-೧೧-೧೯೯೨)ಯಲ್ಲಿ "ಕಿನ್ನಾಳ ಕಲೆ ಇತಿಹಾಸ ಭವ್ಯ, ಭವಿಷ್ಯ ಭೀಕರ"[೪೫] ಎಂಬ ಲೇಖನವನ್ನು ಟಿ.ವಿ.ಮಾಗಳರವರು ಬರೆದಿದ್ದಾರೆ. ಕಿನ್ನಾಳ ಗ್ರಾಮದ ಮಣ್ಣಿನ ಕಣಕಣದಲ್ಲೂ ಕಲೆ ನೆಲೆಗೊಂಡಿದೆ. ಐದು ರಾಜ್ಯ ಪ್ರಶಸ್ತಿಯನ್ನು ಕಿನ್ನಾಳ ಕಲಾವಿದರು ಪಡೆದಿದ್ದಾರೆ. ಕಿನ್ನಾಳ ಕಲೆಯ ಇತಿಹಾಸ ಹಿನ್ನೆಲೆ ಅವರು ರಚಿಸುವ ಕಲಾಕೃತಿಗಳ ಬಗ್ಗೆ ಸ್ಥೂಲವಾಗಿ ವಿವರಿಸಿದ್ದಾರೆ. ಈ ಲೇಖನದಲ್ಲಿ ವಿಶೇಷವಾಗಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ರೂಪಿಸಿದ ಡಚ್ ಸರಕಾರದ ನೆರವಿನ ಯೋಜನೆಯನ್ನು ಅಖಿಲ ಭಾರತ ಕರಕುಶಲ ಮಂಡಳಿ ೧೯೫೮-೫೯ ರಲ್ಲಿ ಮಂಜೂರಾತಿ ನೀಡಿತ್ತು. ಇದರ ಮುಖ್ಯ ಉದ್ದೇಶ ಕಲಾವಿದರಿಗೆ ವೈವಿಧ್ಯಮಯವಾದ ತರಬೇತಿ ನೀಡುವದಾಗಿತ್ತು. ಆದರೆ ಈ ಯೋಜನೆ ಜಾರಿಗೆ ಬರಲೇ ಇಲ್ಲ. ಕಲಾವಿದರಿಗೆ ಏಳಿಗೆಯ ಇನ್ನೊಂದು ಯತ್ನವಾಗಿ ೧೯೫೮ರಲ್ಲಿ "ಚಿತ್ರಗಾರ ಕೋ ಆಪರೇಟಿವ್ ಸೊಸೈಟಿ" ತನ್ನ ೨೯ ಸದಸ್ಯರೊಂದಿಗೆ ಅಸ್ಥಿತ್ವಕ್ಕೆ ಬಂದಿತು. ಇದಕ್ಕೆ ಅಂದಿನ ಮೈಸೂರು ಸರಕಾರ ೬೮೦೦ ಸಾಲ ಹಾಗೂ ೭೩೦೦ ರೂ ನೆರವನ್ನು ನೀಡಿತ್ತು. ಕರಕುಶಲ ಮಂಡಳಿಯು ಸಹ ನೆರವನ್ನು ನೀಡಿತು.ಇವುಗಳ ಸ್ಥೂಲವಿವರವಿದೆ. ದೇಶ ವಿದೇಶಗಳಲ್ಲಿ ಕಿನ್ನಾಳ ಕಲಾಕೃತಿಗಳು ಸಂಗ್ರಹಣೆಯಾಗಿರುವುದು ಹೆಮ್ಮೆಯ ವಿಷಯ, ಸುಪ್ರಸಿದ್ಧ ಕಲಾ ವಿಮರ್ಶಕ ಇ.ಬಿ.ಹ್ಯಾವೆಲ್‌ರು ಕಿನ್ನಾಳ ಕಲೆಯ ಸೌಂದರ್ಯಕ್ಕೆ ಮನಸೋತು ಪ್ರಶಂಸೆಯ ಮಾತುಗಳನ್ನು ದಾಖಲಿಸಿದ್ದಾರೆ. ದಿ ಹ್ಯಾಂಡಿಕ್ರಾಫ್ಟ್ ಸರ್ವೆ ಆಫ್ ಮಾನೋಗ್ರಾಫ್‌ನಲ್ಲಿ ೧೯೬೧ರಲ್ಲಿ ವರದಿ ಮಾಡಿರುವ ಉಲ್ಲೇಖವನ್ನು ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

ಡಾ.ಎಸ್.ಸಿ.ಪಾಟೀಲರ ಕರ್ನಾಟಕ ಜನಪದ ಚಿತ್ರಕಲೆ[೪೬] ಸಂಶೋಧನಾ ಗ್ರಂಥದಲ್ಲಿ ಕಿನ್ನಾಳ ಕಲೆಯ ಬಗ್ಗೆ ಮಾಹಿತಿ ಇದೆ. ಕಲಾವಿದರು ಬಳಸುವ ಕಚ್ಚಾ ಸಾಮಗ್ರಿಗಳ ಬಗ್ಗೆ ಮತ್ತು ವಿಶೇಷವಾಗಿ ಲಜಾವರ ಬಣ್ಣ ಬಳಪದ ಬಣ್ಣದ ಬಗ್ಗೆ ವಿವರಿಸಿದ್ದಾರೆ. ಕಿನ್ನಾಳ ಗ್ರಾಮದಲ್ಲಿ ೨೭ ಕುಟುಂಬಗಳು ಈ ಕೆಲಸ ನಿರ್ವಹಿಸುತ್ತಿವೆ.

ತಿರುಳ್ಗನ್ನಡ ಸವಿಸಂಚಿಕೆಯಲ್ಲಿ (ಅಖಿಲ ಭಾರತ ೬೨ನೇ ಕನ್ನಡ ಸಾಹಿತ್ಯ ಸಮ್ಮೇಳನ ಕೊಪ್ಪಳ ೧೯೯೩) "ಕಿನ್ನಾಳ ಗೊಂಬೆಗಳು"[೪೭] ಎಂಬ ಲೇಖನವನ್ನು ಗವಿಸಿದ್ಧ ಎನ್. ಬಳ್ಳಾರಿಯವರು ಕಿನ್ನಾಳ ಕಲಾವಿದರಿಗೆ ವಿಜಯನಗರ ಪತನದ ನಂತರ ನವಾಬ್ ಸಾಲಾರ್‌ಜಂಗ ಪ್ರೋತ್ಸಾಹ ನೀಡಿರುವ, ಕಿನ್ನಾಳದ ಇತಿಹಾಸ, ಹಿನ್ನೆಲೆ, ಕಲಾಕೃತಿಗಳನ್ನು ರಚಿಸುವ ವಿಧಿ ವಿಧಾನ, ಕಲಾವಿದರ ಗ್ರಾಮದೇವತೆಗಳ ಭವ್ಯ ಕಲಾಕೃತಿಗಳು ನೋಡಲು ಸುಂದರವಾಗಿರುತ್ತವೆ ಎಂಬ ಅಂಶಗಳನ್ನು ತಮ್ಮ ಲೇಖನದಲ್ಲಿ ಅಭಿವ್ಯಕ್ತಪಡಿಸಿರುತ್ತಾರೆ. ಇದೇ ಸಂಚಿಕೆಯಲ್ಲಿ "ಕಿನ್ನಾಳ ಚೌಕಿ"[೪೮] ಎಂಬ ಲೇಖನವನ್ನು ಮಹಾಂತೇಶ ಮಲ್ಲನಗೌಡರು ಕಿನ್ನಾಳದ ಇತಿಹಾಸ, ಅವನತಿಯ ಅಂಚಿನಲ್ಲಿದ್ದ ಕಿನ್ನಾಳ ಕಲೆಗೆ ಶ್ರೀಮತಿ ಕಮಲಾದೇವಿಯವರು ಹಲವಾರು ಯೋಜನೆಗಳನ್ನು ರೂಪಿಸುವುದರ ಮೂಲಕ ಕಿನ್ನಾಳ ಕಲಾವಿದರಿಗೆ ಹೇಗೆ ನೆರವಾದರು ಎಂಬುದರ ಮಾಹಿತಿಯನ್ನು ನೀಡಿರುತ್ತಾರೆ.

---

೪೩. ಎಚ್.ಎನ್.ಚಿತ್ರಗಾರ : ಕಿನ್ನಾಳ ಕಲೆಯ ಜೀವಂತಿಕಸೋಮಣ್ಣ ವಿ.ಚಿತ್ರಗಾರ, ಸುದ್ದಿಮೂಲ, ೨೩.೭.೧೯೯೨
೪೪. ಸಂಪಾದಕೀಯ : ರಾಜ್ಯ ಪ್ರಶಂಸೆ ಪಡೆದ ವಿಶಿಷ್ಟ ಕಲಾವಿದ ಕೊಪ್ಪಳ ಬಂದು ಶ್ರೀ ಎಸ್.ವಿ.ಚಿತ್ರಗಾರ, ಅಮಚಿ ಚಿತ್ರಗಾರ, ಸೆಪ್ಟಂಬರ ೧೯೯೨
೪೫. ಟಿ.ವಿ.ಮಾಗಳದ : ಕಿನ್ನಾಳ ಕಲೆಯ ಇತಿಹಾಸ ಭವ್ಯ ಭವಿಷ್ಯ ಭೀಕರ, ಸುಧಾ, ೨೨.೧೧.೧೯೯೨
೪೬. ಡಾ.ಎಸ್.ಸಿ.ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ೧೯೯೩
೪೭. ಗವಿಸಿದ್ಧ ಎನ್.ಬಳ್ಳಾರಿ : ಕಿನ್ನಾಳ ಗೊಂಬೆಗಳು, ತಿರುಳ್ಗನ್ನಡ ಸವಿ ಸಂಚಿಕೆ, ೧೯೯೩
೪೮. ಮಹಾಂತೇಶ ಮಲ್ಲನಗೌಡ : ಕಿನ್ನಾಳ ಚೌಕಿ, ತಿರುಳ್ಗನ್ನಡ ಸವಿ ಸಂಚಿಕೆ, ೧೯೯೩

ಸಮರಸ ಮಾಸ ಪತ್ರಿಕೆ (೧೫-೦೩-೧೯೯೩) ಸ.ಮ.ಶಿರಹಟ್ಟಿಯವರು "ಕಿನ್ನಾಳದ ಸಂಪ್ರದಾಯ ಕಲೆಯ ಮಹಾನ್ ಕಲಾವಿದ ಸೋ.ವಿ.ಚಿತ್ರಗಾರ"[೪೯] ಎಂಬ ಲೇಖನದಲ್ಲಿ ಸೋಮಣ್ಣನವರ ವ್ಯಕ್ತಿಪರಿಚಯವನ್ನು ಮಾಡಿದ್ದಾರೆ.

ಕನ್ನಡ ಪ್ರಭ ದಿನಪತ್ರಿಕೆ (೧೮-೦೩-೧೯೯೩) "ಹೊನ್ನಾವರದಲ್ಲಿ ಕೊನರಿದ ಸಾಂಪ್ರದಾಯಿಕ ಕಲೆಗಳು"[೫೦] ಎಂಬ ಲೇಖನದಲ್ಲಿ ಮಾರ್ಚ ಒಂದರಿಂದ ಏಳರವರೆಗೆ ಹೊನ್ನಾವರದಲ್ಲಿ ಸೇಂಟ್ ಅಂಟೋನಿ ಪ್ರೌಢ ಶಾಲೆ ಸಭಾಂಗಣದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಸಾಂಪ್ರದಾಯಿಕ ಕಲೆಗಳ ಶಿಬಿರ ನಡೆಯಿತು. ಶಿಬಿರದಲ್ಲಿ ೧೧ ಕಲಾವಿದರು ಭಾಗವಹಿಸಿದ್ದರು. ಇವರಲ್ಲಿ ಹೆಚ್ಚಿನವರು ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪಡೆದ ಕಲಾವಿದರಾಗಿದ್ದರು. ಕಿನ್ನಾಳ ಕಲೆಯ ಕಲಾವಿದ ಸೋಮಣ್ಣ ಚಿತ್ರಗಾರರು ಈ ಶಿಬಿರದಲ್ಲಿ ತಮ್ಮ ನೆಚ್ಚಿನ ಕಿನ್ನಾಳ ಚೌಕಿಯನ್ನು ರಚಿಸಿದರು. ದೇಶಿಯವಾಗಿ ತಯಾರಿಸಿದ ಲಜಾವರ ಬಣ್ಣದ ಬಂಗಾರದ ಹೊಳಪುಗಳಿಂದ ಎಲೆ, ಹೂವು, ಬಳ್ಳಿಗಳ ನಕ್ಷೆಗಳಿಂದ ಮೆರಗು ನೀಡಿದ ಮಾಹಿತಿ ಇದೆ.

ಉದಯವಾಣಿ ದಿನಪತ್ರಿಕೆ (೧೭-೦೭-೧೯೯೩) ಆರ್.ಜಿ.ಶ್ಯಾನಭಾಗರವರು "ಕಿನ್ನಾಳದ ನೆಲದ ಮೇಲೆ ಹೂವಾಗಿ ಅರಳಿದ ಕಲೆ"[೫೧] ಎಂಬ ಲೇಖನದಲ್ಲಿ ವಿಜ್ಞಾನ, ತಂತ್ರಜ್ಞಾನಗಳಿಂದಾಗಿ ಹೆಚ್ಚಿನ ಕಲೆಗಳು ಯಾಂತ್ರಿಕ ನೆರವಿನೊಂದಿಗೆ ಅರಳುತ್ತವೆ. ಸೃಜನಶೀಲ ಕಲಾತ್ಮಕತೆ ಮೂಲೆ ಗುಂಪಾಗುತ್ತಿವೆ. ಕಿನ್ನಾಳ ಚೌಕಿ ಕಲೆ ಈ ಮಾತಿಗೆ ನಿದರ್ಶನೀಯ. ಈ ಕಲೆಯ ಕೌಶಲ್ಯ ಅನುಪಮ. ಕಿನ್ನಾಳ ಕಲೆಗೆ ವಿಜಯನಗರದ ಅರಸರು ಪೋಷಕರಾಗಿದ್ದರು. ರಾಜನ ಅರಮನೆ, ಗುರುಮನೆ, ಅಂತಃಪುರ ಕಿನ್ನಾಳ ಕಲೆಯಿಂದ ಶೃಂಗಾರಗೊಂಡ ಮಾಹಿತಿ ಇದೆ.

ಸಂಜೆವಾಣಿ ದಿನಪತ್ರಿಕೆಯಲ್ಲಿ (೨೧-೧೧-೧೯೯೩) ವಿಠ್ಠಪ್ಪ ಗೋರಂಟ್ಲಿಯವರು "ಅಪೂರ್ವ ಚಿತ್ರಕಲಾವಿದ ಸೋಮಣ್ಣ ಚಿತ್ರಗಾರ"[೫೨] ಎಂಬ ಲೇಖನ ಸಹ ಸೋಮಣ್ಣ ಚಿತ್ರಗಾರರ ವ್ಯಕ್ತಿ ಪರಿಚಯವನ್ನು ಮಾಡಿದ್ದಾರೆ,

ಕನ್ನಡಪ್ರಭದಲ್ಲಿ(೦೨-೧೦-೧೯೯೪) "ಕಿನ್ನಾಳ ಕಲೆ ಸೋಮಣ್ಣ ಚಿತ್ರಗಾರ"[೫೩] ಶೀರ್ಷಿಕೆಯ ಲೇಖನದಲ್ಲಿ ಒಂದು ಊರಿನ ಹೆಸರೇ ಒಂದು ಕಲಾ ಪ್ರಕಾರದ ಹೆಸರಾಗಿ ಪ್ರಸಿದ್ಧವಾಗುವುದು ಅಪರೂಪದ ಸಂಗತಿ ಎಂದು ಉಲ್ಲೇಖಿಸಲಾಗಿದೆ.

"ಕಲಾಕೋಶ" ಈ ಗ್ರಂಥದಲ್ಲಿ ಕಿನ್ನಾಳ ಕಲೆಯ ಕುರಿತ ಲೇಖನವನ್ನು ಡಾ.ಎಸ್.ಸಿ.ಪಾಟೀಲರವರು ಬರೆದಿದ್ದು, ಕಿನ್ನಾಳ ಕಲೆಯ ರಚನಾ ವಿಧಾನ ಮತ್ತು ಕಲಾಕೃತಿಗಳ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದ್ದಾರೆ.[೫೪]

ಸಂಯುಕ್ತ ಕರ್ನಾಟಕದಲ್ಲಿ (೩೧-೦೧-೧೯೯೫) ಲಕ್ಷ್ಮೀಕಾಂತ ದುದ್ದುಣಿಗಿಯವರು "ವಿಜಯನಗರ ವೈಭವಕ್ಕೆ ಮೆರಗು ನೀಡಿದ ಕಿನ್ನಾಳ ಕಲೆ"[೫೫] ಎಂಬ ಲೇಖನದಲ್ಲಿ ಕಿನ್ನಾಳವು ಮೊದಲು ವಿಜಯನಗರ, ನಂತರ ಕೊಪ್ಪಳದ ನವಾಬರ ಆಡಳಿತದಲ್ಲಿತ್ತು. ಕಿನ್ನಾಳ ಕುಟುಂಬದ ಮೂಲ ಪುರುಷನಾದ ಸಂಜೀವಪ್ಪ ಚಿತ್ರಗಾರ ವಿಜಯನಗರ ಪತನದ ನಂತರ ಕಿನ್ನಾಳಕ್ಕೆ ಬಂದನೆಂದು ಪ್ರತೀತಿ ಇದೆ. ಅಂದರೆ ಸುಮಾರು ೧೮೦ ಅಥವಾ ೨೦೦ ವರ್ಷಗಳ ಇತಿಹಾಸ ಸಿಗುತ್ತದೆ. ವಿಜಯನಗರ ಪತನದ ನಂತರ ಇವರಿಗೆ ಆಶ್ರಯವನ್ನು ನೀಡಿದವರು ಕೊಪ್ಪಳ ನವಾಬ್ ಕಿನಾಳ ದೇಸಾಯಿ ಮತ್ತು ಹೈದ್ರಾಬಾದ ನಿಜಾಮರಿಂದ ಪೋಷಣೆ, ಪ್ರೇರಣೆ ದೊರೆಯಿತೆಂದು ಹೇಳಲಾಗುತ್ತದೆ. ಸಂಜೀವಪ್ಪನ ಮೊಮ್ಮಗ ಶೀನಪ್ಪನ ಆರು ಮಕ್ಕಳಿಂದ ಮುಂದುವರೆದ ಈ ಕಲೆ ಈಗ ಒಟ್ಟು ೨೫ ಕುಟುಂಬಗಳು ತಮ್ಮ ಕೆಲಸದಲ್ಲಿ ನಿರತರಾಗಿರುತ್ತಾರೆ. ಮೊದಲು ಕೇವಲ ದೇವಸ್ಥಾನದ ಅಲಂಕಾರದ ಚಟುವಟಿಕೆಗಳಿಗೆ ಮೀಸಲಾಗಿದ್ದ ಈ ಕಲೆ ಹೊಸ ಅಭಿರುಚಿ ಬದಲಾದ ಕಾಲಕ್ಕೆ ತಕ್ಕಂತೆ ಹೊಸ ಮಾದರಿಯ ಕಲಾಕೃತಿಗಳನ್ನು ನಿರ್ಮಿಸುವ ವಿವರ ಇದೆ.

---

೪೯. ಸ.ಮ.ಶಿರಹಟ್ಟಿ : ಕಿನ್ನಾಳ ಸಂಪ್ರದಾಯ ಕಲೆಯ ಮಹಾನ್ ಕಲಾವಿದರು ಸೋ.ವಿ.ಚಿತ್ರಗಾರ, ಸಮರಸ, ೧೫.೩.೧೯೯೩

೫೦. ಸಂಪಾದಕೀಯ : ಹೊನ್ನಾವರದಲ್ಲಿ ಕೊನರಿದ ಸಾಂಪ್ರದಾಯಿಕ ಕಲೆಗಳು, ಕನ್ನಡಪ್ರಭ, ೧೮.೦೩.೧೯೯೩

೫೧. ಆರ್.ಜಿ.ಶಾನಭಾಗ : ಕಿನ್ನಾಳ ನೆಲದ ಮೇಲೆ ಹೂವಾಗಿ ಅರಳಿದ ಕಲೆ, ಉದಯವಾಣಿ, ೧೭.೭.೧೯೯೩

೫೨. ವಿಠ್ಠಪ್ಪ ಗೋರಂಟ್ಲಿ : ಅಪೂರ್ವ ಚಿತ್ರ ಕಲಾವಿದ ಸೋಮಣ್ಣ ಚಿತ್ರಗಾರ, ಸಂಜೆವಾಣಿ, ೨೧.೧೧.೧೯೯೩

೫೩. ಸಂಪಾದಕೀಯ : ಕಿನ್ನಾಳ ಕಲೆಯ ಸೋಮಣ್ಣ ಚಿತ್ರಗಾರ, ಕನ್ನಡಪ್ರಭ, ೨.೧೦.೧೯೯೪

೫೪. ಡಾ.ಎಸ್.ಸಿ.ಪಾಟೀಲ : ಕಲಾಕೋಶ, ಕ.ಲ.ಕ.ಅ.೧೯೯೪

೫೫. ಲಕ್ಷ್ಮೀಕಾಂತ ದುದ್ದಣಗಿ : ವಿಜಯನಗರ ವೈಭವಕ್ಕೆ ಮೆರಗು ನೀಡಿದ ಕಿನ್ನಾಳ ಕಲೆ, ಸಂಯುಕ್ತ ಕರ್ನಾಟಕ, ೩೧.೧.೧೯೯೫

ಸಂಯುಕ್ತ ಕರ್ನಾಟಕ (೦೫-೦೨-೧೯೯೫) ವಾಸ್ತು ದೇವಾಚಾರ್ಯರು "ಕಿನ್ನಾಳ ಕಲೆಯ ಜೀವನಾಡಿ ಸೋಮಣ್ಣ ಚಿತ್ರಗಾರ"[೫೬] ಕಿನ್ನಾಳ ಕಲೆ ಬೆಳೆದು ಬಂದ ಇತಿಹಾಸ, ಪ್ರೋತ್ಸಾಹ, ಪ್ರಭಾವ, ಮತ್ತು ದೇಶಿಯವಾಗಿ ತಯಾರಿಸುವ ಲಜಾವರ ಬಣ್ಣದಿಂದ ಕಲಾವಿದರು ಹಲವಾರು ನಮೂನೆಯ ಕಲಾಕೃತಿಗಳನ್ನು ನಿರ್ಮಿಸಿ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಸರಕಾರದಿಂದ ಇವರ ಕಲಾಕೃತಿಗಳಿಗೆ ಸೂಕ್ತ ಮಾರುಕಟ್ಟೆ ದೊರೆತರೆ ಇವರ ಸ್ಥಿತಿ ಸುಧಾರಿಸಿಬಹುದು. ಸೋಮಣ್ಣನವರು ಕಿನ್ನಾಳ ಚೌಕಿ ನಿರ್ಮಿಸುವಲ್ಲಿ ಪರಿಣಿತರಾಗಿದ್ದಾರೆ. ಇವರು ರಚಿಸಿದ ಅಷ್ಟಭುಜಾಕೃತಿಗೆ (ಸಿಂಹಾಸನ ಚೌಕಿ) ರಾಜ್ಯ ಪ್ರಶಸ್ತಿ ಸಂದಿದೆ. ಇವರ ಅಜ್ಜ ದಿ. ಕೃಷ್ಣಪ್ಪ ಚಿತ್ರಗಾರ, ದಿ. ತಂದೆ ವೆಂಕೋಬಪ್ಪ ಚಿತ್ರಗಾರ ಈ ಕಲೆಗಾಗಿ ರಾಜ್ಯ ಪ್ರಶಸ್ತಿಯನ್ನು ಪಡೆದಿರುತ್ತಾರೆ ಎಂಬುದಾಗಿ ವಿವರಿಸುತ್ತಾರೆ.

ಪ್ರಜಾವಾಣಿಯಲ್ಲಿ (೨೯-೦೬-೧೯೯೬) ವಿದ್ಯಾ ಕೊಡ್ಲಕೆರೆ "ಕಿನ್ನಾಳ ಚಿತ್ತಾರ ಕಲೆಯ ಹೆಮ್ಮೆಯ ಚಿತ್ರಗಾರ ಸೋಮಣ್ಣ"[೫೭] ಎಂಬ ಲೇಖನದಲ್ಲಿ ಅಷ್ಟಕೋನಾಕೃತಿಯ ಹಲಗೆಯ ಮೇಲೆ ಎಲೆಯ ಹೂ ಬಳ್ಳಿಗಳ ಚಿತ್ತಾರ ಬಿಡಿಸಿ ಪರ್ಷಿಯನ್ ಹೊಂಬಣ್ಣಗಳಿಂದ ಅಲಂಕೃತವಾದ ಕಿನ್ನಾಳ ಚೌಕಿ ಹಿಂದೂ ಮುಸ್ಲಿಂ ಸಂಗಮದ ವಿಶಿಷ್ಟ ಸಾಂಪ್ರದಾಯಕ ಕಲೆ. ಸೋಮಣ್ಣ ಅವರದು ಮನಮೋಹಕ ಕಿನ್ನಾಳ ಚೌಕಿಗಳನ್ನು ವಿವಿಧ ಮಾದರಿಗಳಲ್ಲಿ ರಚಿಸುವದರಲ್ಲಿ ಪರಿಣಿತರು ಎಂದು ವಿವರಿಸಿದ್ದಾರೆ.

ಜನತಾವಾಣಿಯಲ್ಲಿ (೨೭-೦೭-೧೯೯೭) ಶ್ರೀಧರ ಶೆಣೈ ಅವರು "ಪುರಾತನ ಜನಪದ ಕಿನ್ನಾಳ ಕಲೆಯ ನಿಪುಣ ಸೋಮಣ್ಣ ಚಿತ್ರಗಾರ"[೫೮] ಮತ್ತು ಕನ್ನಡ ನಾಡು ದಿನಪತ್ರಿಕೆಗಳಲ್ಲಿ (೨೮-೦೭-೧೯೯೭) ಶ್ರೀಧರ ಶೆಣೈ ಅವರು "ಪುರಾತನ ಜನಪದ ಕಿನ್ನಾಳ ಕಲೆಯ ನಿಪುಣ ಸೋಮಣ್ಣ ಚಿತ್ರಗಾರ"[೫೯] ಎಂಬ ಲೇಖನಗಳಲ್ಲಿ ಕಿನ್ನಾಳದ ಐತಿಹಾಸಿಕ ಹಿನ್ನೆಲೆ ಬೆಳೆದು ಬಂದ ರೀತಿ ಪ್ರೊತ್ಸಾಹ, ಪ್ರಭಾವಗಳ ಬಗ್ಗೆ ವಿವರಿಸಿದ್ದಾರೆ. ಕಿನ್ನಾಳ ಕರ್ನಾಟಕದ ಕುಗ್ರಾಮ ಒಂದರ ಹೆಸರು ಈ ಕಲೆಗೆ ಐತಿಹಾಸಿಕ ಮಹತ್ವವಿದೆಯೆಂದು ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

ಉತ್ತರ ಕರ್ನಾಟಕ ದಿನಪತ್ರಿಕೆಯಲ್ಲಿ (೧೦-೦೮-೧೯೯೭) "ಪುರಾತನ ಜನಪದ ಕಿನ್ನಾಳ ಕಲೆಯ ನಿಪುಣ ಸೋಮಣ್ಣ ಚಿತ್ರಗಾರ"[೬೦] ಈ ಲೇಖನದಲ್ಲಿ ಸಹ ಸೋಮಣ್ಣ ದೇಶಿಯವಾಗಿ ತಾವೇ ತಯಾರಿಸುವ ಲಜಾವರ ಬಣ್ಣದಿಂದ ಕಿನ್ನಾಳ ಚೌಕಿಗಳಿಗೆ ಮೆರಗನ್ನು ನೀಡುವ ಕುರಿತು ಮತ್ತು ಕಲಾಶಿಕ್ಷಕರಾಗಿ ಸೇವೆ ಸಲ್ಲಿಸಿದ ವಿವರಗಳು ಇವೆ. ಆಂದೋಲನ ದಿನಪತ್ರಿಕೆಯಲ್ಲಿ (೨೫-೧೨-೧೯೯೭) ಸೋಮಣ್ಣನವರಿಗೆ ರಾಮ್ಸನ್ ಶಿಲ್ಪ ಶ್ರೀ ಕಲಾ ಪ್ರಶಸ್ತಿ ದೊರಕಿಸಿಕೊಟ್ಟ ಪ್ರಭಾವಳಿ ಚೌಕಿ (ಸಿಂಹಾಸನ ಚೌಕಿ)ಯ[೬೧] ಚಿತ್ರ ಸಮೇತ ಪ್ರಕಟಗೊಂಡಿದೆ.

ಮಂಗಳ ವಾರ ಪತ್ರಿಕೆಯಲ್ಲಿ (೨೭-೦೪-೧೯೯೮) ಶ್ರೀ ಮತಿ ಕಿರಣಪ್ರಸಾದ ಆರ್. ಇವರು "ಪುರಾತನ ಜನಪದ ಕಲೆ ಕಿನ್ನಾಳ ಕಲೆ"[೬೨] ಎಂಬ ಲೇಖನದಲ್ಲಿ ಕಿನ್ನಾಳದ ಐತಿಹಾಸಿಕ ಹಿನ್ನೆಲೆ, ಪ್ರಭಾವ, ಪ್ರೋತ್ಸಾಹ ನೀಡಿದ ಬಗ್ಗೆ ಮತ್ತು ಅಪ್ಪಟ ಜನಪದ ಕಲೆಯಾದ ಕಿನ್ನಾಳ ಕಲೆ ವಿಜಯನಗರ ಅರಸರ ಕಾಲದಲ್ಲಿ ತುಂಬಾ ಹೆಸರುವಾಸಿಯಾಗಿತ್ತು ಎಂಬ ವಿವರಗಳು ಇವೆ.

ಜನಪದ ಮಾಸ ಪತ್ರಿಕೆಯಲ್ಲಿ (ಜೂನ ೧೯೯೮) ಕಿರಣಪ್ರಸಾದ ಆರ್. ಇವರು " ಕಿನ್ನಾಳ ಕಲೆಯ ಜಾದೂಗಾರ ಸೋಮಣ್ಣ"[೬೩] ಎಂಬ ಲೇಖನ ಪ್ರಕಟವಾಗಿದ್ದು, ಪತ್ರಿಕೆಯ ಮುಖ ಪುಟದಲ್ಲಿ ಅಷ್ಟ ಭುಜಾಕೃತಿ ಕಿನ್ನಾಳ ಚೌಕಿಯ ಚಿತ್ರದೊಂದಿಗೆ ಮಾಹಿತಿ ಇದೆ.

ಪ್ರಜಾವಾಣಿ ದಿನಪತ್ರಿಕೆಯಲ್ಲಿ (೦೯-೦೮-೧೯೯೮) ಎನ್. ಗೋಪಿಚಂದ ಅವರು "ಮನಮೋಹಕ ಕಿನ್ನಾಳ ಕಲೆ ಪುನಶ್ಚೇತನಕ್ಕೆ ಪ್ರಯತ್ನ"[೬೪] ಎಂಬ ಲೇಖನದಲ್ಲಿ ದೇಶ ವಿದೇಶಗಳಲ್ಲಿ ಜನಪ್ರಿಯವಾಗಿರುವ ಮನಮೋಹಕ ಕಿನ್ನಾಳ ಕಲೆಯು ವಿಜಯನಗರ ಅರಸರ ಕಾಲದಿಂದಲೂ ಹೆಸರುವಾಸಿಯಾಗಿದೆ. ಹೈದ್ರಾಬಾದಿನ

---

೫೬. ವಾಸುದೇವಾಚಾರ್ಯ : ಕಿನ್ನಾಳ ಕಲೆಯ ಜೀವನಾಡಿ ಸೋಮಣ್ಣ ಚಿತ್ರಗಾರ, ಸಂಯುಕ್ತ ಕರ್ನಾಟಕ, ೫.೨.೧೯೯೫

೫೭. ವಿದ್ಯಾ ಕೊಡ್ಲಕೆರೆ : ಕಿನ್ನಾಳ ಚಿತ್ರಕಲೆಯ ಚಿತ್ರಗಾರ ಸೋಮಣ್ಣ, ಪ್ರಜಾವಾಣಿ ೨೯.೬.೧೯೯೬

೫೮. ಶ್ರೀಧರ ಶೆಣೈ : ಪುರಾತನ ಜನಪದ ಕಿನ್ನಾಳ ಕಲೆಯ ನಿಪುಣ ಸೋಮಣ್ಣ ಚಿತ್ರಗಾರ, ಜನತಾವಾಣಿ, ೨೦.೭.೧೯೯೭

೫೯. ಶ್ರೀಧರ ಶೆಣೈ : ಪುರಾತನ ಜನಪದ ಕಿನ್ನಾಳ ಕಲೆಯ ನಿಪುಣ ಸೋಮಣ್ಣ ಚಿತ್ರಗಾರ, ಕನ್ನಡನಾಡು, ೨೮.೭.೧೯೯೭

೬೦. ಸಂಪಾದಕೀಯ : ಪುರಾತನ ಜನಪದ ಕಿನ್ನಾಳ ಕಲೆಯ ನಿಪುಣ ಸೋಮಣ್ಣ ಚಿತ್ರಗಾರ, ಉತ್ತರ ಕರ್ನಾಟಕ, ೧೦.೮.೧೯೯೭

೬೧. ಸಂಪಾದಕೀಯ : ಟ.ಕೆ.ಮೂರ್ತಿಗೆ ಶಿಲ್ಪಶ್ರೀ ಪ್ರಶಸ್ತಿ, ಆಂದೋಲನ, ೨೫.೧೨.೧೯೯೭

೬೨. ಕಿರಣ ಪ್ರಸಾದ ಆರ್. : ಪುರಾತನ ಜನಪದ ಕಲೆ ಕಿನ್ನಾಳ ಕಲೆ, ಮಂಗಳ, ೨೭.೪.೧೯೯೮

೬೩. ಕಿರಣ ಪ್ರಸಾದ ಆರ್. : ಕಿನ್ನಾಳ ಕಲೆಯ ಜಾದೂಗಾರ ಸೋಮಣ್ಣ, ಜನಪದ, ಜೂನ ೧೯೯೮

೬೪. ಎನ್.ಗೋಪಿಚಂದ : ಮನಮೋಹಕ ಕಿನ್ನಾಳ ಕಲೆ ಪುನಶ್ಚೇತನಕ್ಕೆ ಪ್ರಯತ್ನ, ಪ್ರಜಾವಾಣಿ, ೯.೮.೧೯೯೮

ನವಾಬ ಸಾಲಾರಜಂಗ ಅರಸರ ಕಾಲದಲ್ಲಿ ಮಹತ್ವ ಪಡೆದುಕೊಂಡ ಈ ಕಲೆಯಲ್ಲಿ ಹಿಂದೂ ಮುಸ್ಲಿಂ ಶೈಲಿಯ ಸಂಗಮ ಕಾಣಬಹುದು ಎಂದು ವಿವರಿಸಿದ್ದಾರೆ.

ವಿಜಯನಗರ ಅಧ್ಯಯನ ಸಂಪುಟ ೩ರಲ್ಲಿ[೧೫] ಈ ಸಂಪುಟದಲ್ಲಿ ವಿಜಯನಗರ ಚಿತ್ರ ಶೈಲಿಯ ಕಿನ್ನಾಳದ ರೇಖಾಚಿತ್ರಗಳು ಎಂಬ ಲೇಖನವನ್ನು ಆರ್. ಎಚ್.ಕುಲಕರ್ಣಿಯವರು ಬರೆದಿದ್ದಾರೆ. ರೇಖಾಚಿತ್ರಗಳ ಕುರಿತಾದ ವಿವರಣೆ ಇದೆ.

ಕರ್ಮವೀರ ವಾರಪತ್ರಿಕೆಯಲ್ಲಿ (೨೮-೦೩-೧೯೯೯) ಕಿರಣ ಆರ್. ಪ್ರಸಾದ ಅವರು "ಕಿನ್ನಾಳ ಕಲೆ ಕುಸುರಿ ಕೆಲಸದ ಪವಾಡ"[೧೬] ಎಂಬ ಲೇಖನದಲ್ಲಿ ಕಿನ್ನಾಳ ಚೌಕಿಗಳನ್ನು ವಿವಿಧ ಮಾದರಿಗಳಲ್ಲಿ ರಚಿಸುವ ಕಲಾವಿದ ಸೋಮಣ್ಣನವರ ಕುರಿತು ಪರಿಚಯದ ವಿವರಗಳಿವೆ.

ಅಕ್ಷಯ ಮಾಸ ಪತ್ರಿಕೆಯಲ್ಲಿ (ಎಪ್ರಿಲ್ ೧೯೯೯, ಮುಂಬೈ) ಕಿರಣ ಆರ್. ಪ್ರಸಾದರು "ಕಿನ್ನಾಳ ಕಲೆಯ ಅದ್ಭುತಕಲಾವಿದ ಸೋಮಣ್ಣ ಚಿತ್ರಗಾರ"[೧೭] ಎಂಬ ಲೇಖನದಲ್ಲಿ ಕಿನ್ನಾಳದ ಐತಿಹಾಸಿಕ ಹಿನ್ನೆಲೆಯೊಂದಿಗೆ ರಾಜ್ಯ ಪ್ರಶಸ್ತಿ ವಿಜೇತ ಕಲಾವಿದ ಸೋವಣ್ಣನವರ ಪರಿಚಯ ಮತ್ತು ಪ್ರಶಸ್ತಿ ಸಮಾರಂಭದ ಚಿತ್ರಗಳು ಈ ಲೇಖನದ ಆಶಯಗಳಾಗಿವೆ.

ಪ್ರಜಾವಾಣಿಯಲ್ಲಿ(೧೦-೦೪-೧೯೯೯) ಆನಂದ ತೀರ್ಥ ಪ್ಯಾಟಿ ಇವರು ಕಿನ್ನಾಳ ಕಲೆಯಲ್ಲಿ ಬೆಡಗು ಬಿನ್ನಾಣ"[೧೮] ಎಂಬ ಲೇಖನದಲ್ಲಿ ಕಿನ್ನಾಳ ಚೌಕಿ ಚಿತ್ರ ಮುದ್ರಿತವಾಗಿದೆ.

ಕನ್ನಡ ಪ್ರಭ ಪತ್ರಿಕೆಯಲ್ಲಿ (೩೦-೦೧-೨೦೦೦) ವಿ.ಹನಮಂತಪ್ಪ ಅವರು " ಕಿನ್ನಾಳ ಚೌಕಿ ಎಂಥ ಕಲೆ ಅಂತೀರಿ"[೧೯] ಶೀರ್ಷಿಕೆಯ ಲೇಖನದಲ್ಲಿ ಕಿನ್ನಾಳ ಚೌಕಿ ರಚಿಸುವ ವಿಧಿ ವಿಧಾನಗಳ ಬಗ್ಗೆ ವಿವರದೊಂದಿಗೆ ಸುಂದರ ಚೌಕಿಗಳ ಛಾಯಾಚಿತ್ರಗಳು ಮುದ್ರಿತವಾಗಿವೆ.

ಕರಕುಶಲ ಕಲೆ (ಪ್ರಸಾರಾಂಗ ಕನ್ನಡ ವಿ.ವಿ.೨೦೦೦ ಸಂ. ಕರೀಗೌಡ ಬೀಚನಹಳ್ಳಿ) ಈ ಪುಸ್ತಕದಲ್ಲಿ "ಕಿನ್ನಾಳ ಸಾಂಪ್ರದಾಯಕ ಕಲೆ"[೨೦] ಎಂಬ ಲೇಖನವನ್ನು ವಿರೇಶ ಬಡಿಗೇರರು ಬರೆದಿದ್ದಾರೆ. ಲೇಖನದಲ್ಲಿ ಕಿನ್ನಾಳ ಐತಿಹಾಸಿಕ ಹಿನ್ನೆಲೆ, ಪ್ರಭಾವ, ತಾಂತ್ರಿಕ ಹಿನ್ನೆಲೆ, ತಯಾರಿಸುವ ಕುಶಲ ವಸ್ತುಗಳು ಮತ್ತು ಕಿನ್ನಾಳ ಕಲೆಯ ವೈಶಿಷ್ಟ್ಯಗಳ ಬಗ್ಗೆ ವಿವರಿಸಿದ್ದಾರೆ.

ವಿಜಯನಗರ ಅಧ್ಯಯನ-ಸಂಪುಟ ೬[೨೧] ಈ ಗ್ರಂಥದಲ್ಲಿ ವಿಜಯನಗರ ಚಿತ್ರಶೈಲಿಯ ಕಿನ್ನಾಳದ ಮತ್ತಷ್ಟು ರೇಖಾಚಿತ್ರಗಳು ಎಂಬ ಲೇಖನವನ್ನು ಆರ್.ಎಚ್.ಕುಲಕರ್ಣಿ ಬರೆದಿದ್ದು ಹೆಚ್ಚಿನ ರೇಖಾಚಿತ್ರಗಳು ಪ್ರಕಟಗೊಂಡಿವೆ.

ಕರ್ನಾಟಕ ಜನಪದ ಶಿಲ್ಪ ಕಲೆ ಒಂದು ಅಧ್ಯಯನ (ಪಿಎಚ್.ಡಿ ಮ.ಪ್ರ ಕ.ವಿ.ವಿ.ಹಂಪಿ. ೨೦೦೨)[೨೨] ಡಾ.ಶಿವಾನಂದ ಬಂಟನೂರು ಇವರು ಈ ಪ್ರಬಂಧದಲ್ಲಿ ಕಿನ್ನಾಳ ಕಲೆಯ ಕಲಾವಿದರು ರಚಿಸಿದ ಕಲಾಕೃತಿಗಳ ಬಗ್ಗೆ ಮತ್ತು ಬಣ್ಣಗಳ ಬಗ್ಗೆ ಚಿತ್ರ ಸಮೇತ ಮಾಹಿತಿ ನೀಡಿದ್ದಾರೆ.

'ನಿಜದ ನೆಲೆ'[೨೩] ಗ್ರಂಥದಲ್ಲಿ ಕಿನ್ನಾಳದ ವರ್ಣಚಿತ್ರಕಲೆ ಲೇಖನವನ್ನು ಡಾ.ವೀರೇಶ ಬಡಿಗೇರರವರು ಐತಿಹಾಸಿಕ, ತಾಂತ್ರಿಕ ಹಿನ್ನೆಲೆಯೊಂದಿಗೆ ಮಾಧ್ಯಮಗಳ ಬಗ್ಗೆ ವಿವರಿಸಿದ್ದಾರೆ. ಬಿ.ಎಫ್.ಎ ಪದವಿಗಾಗಿ ಸಲ್ಲಿಸಿದ

---

೧೫. ಆರ್.ಎಚ್.ಕುಲಕರ್ಣಿ : ವಿಜಯನಗರ ಅಧ್ಯಯನ ಸಂಪುಟ ೩, ಪ್ರಾಚ್ಯ ವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೮

೧೬. ಕಿರಣ ಆರ್. ಪ್ರಸಾದ : ಕಿನ್ನಾಳ ಕಲೆಯ ಕುಸುರಿ ಕೆಲಸದ ಪವಾಡ, ಕರ್ಮವೀರ, ೨೮.೦೩.೧೯೯೯

೧೭. ಕಿರಣ ಆರ್. ಪ್ರಸಾದ : ಕಿನ್ನಾಳ ಕಲೆಯ ಅದ್ಭುತ ಕಲಾವಿದ ಸೋಮಣ್ಣ ಚಿತ್ರಗಾರ, ಅಕ್ಷಯ ಎಪ್ರಿಲ್ ೧೯೯೯

೧೮. ಆನಂದ ತೀರ್ಥ ಪ್ಯಾಟಿ, ಕಿನ್ನಾಳ ಕಲೆಯಲ್ಲಿ ಬೆಡಗು ಬಿನ್ನಾಣ, ಪ್ರಜಾವಾಣಿ ೧೦.೪.೧೯೯೯

೧೯. ವಿ.ಹನುಮಂತಪ್ಪ : ಕಿನ್ನಾಳ ಚೌಕಿ ಎಂಥಾ ಕಲೆ ಅಂತೀರಿ, ಕನ್ನಡಪ್ರಭ, ೩೦.೧.೨೦೦೦

೨೦. ಕರೀಗೌಡ ಬೀಚನಹಳ್ಳಿ (ಸಂ):ಕರಕುಶಲಕಲೆ, ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೦

೨೧. ಆರ್.ಎಚ್.ಕುಲಕರ್ಣಿ : ವಿಜಯನಗರ ಅಧ್ಯಯನ ಸಂಪುಟ ೬, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೧

೨೨. ಡಾ.ಶಿವಾನಂದ ಬಂಟನೂರ : ಕರ್ನಾಟಕ ಜನಪದ ಶಿಲ್ಪಕಲೆ, ಒಂದು ಅಧ್ಯಯನ, ಪಿಹೆಚ್.ಡಿ., ಅ.ಪ್ರ.ಮ.ಪ್ರ., ಕ.ವಿ.ವಿ.ಹಂ. ೨೦೦೨

೨೩. ಡಾ.ಎಸ್.ಸಿ.ಪಾಟೀಲ(ಸಂ) : ನಿಜದ ನೆಲೆ, ಬಾಗಲಕೋಟೆ, ೨೦೦೩

ಕಿರು ಪ್ರಬಂಧ (ಕ.ವಿ.ವಿ.ಹಂಪಿ, ಬಾದಾಮಿ ೨೦೦೪) "ಕಿನ್ನಾಳ ಸಾಂಪ್ರದಾಯಕ ಕಲೆ"[೭೪] ಜಿ.ಬಿ.ವೀರಾಚಾರ್ಯರ ಯೋಜನಾ ವರದಿಯಲ್ಲಿ ಕಿನ್ನಾಳದ ಐತಿಹಾಸಿಕ ನೆಲೆ-ಹಿನ್ನೆಲೆ, ಮರಮಾಧ್ಯಮದ ಶಿಲ್ಪಕಲೆ, ಸಂಕೀರ್ಣ ಮಾಧ್ಯಮದ ಕಲೆ ಮತ್ತು ಕಿನ್ನಾಳ ಚಿತ್ರಕಲಾ ಶೈಲಿಯ ತಂತ್ರಗಾರಿಕೆ ಮತ್ತು ಪ್ರಭಾವ, ಪ್ರೇರಣೆ ಬಗ್ಗೆ ಮತ್ತು ಕಿನ್ನಾಳ ಕಲಾವಿದರ ಇಂದಿನ ಸ್ಥಿತಿಗತಿಗಳ ಬಗ್ಗೆ ಚಿತ್ರಗಳ ಸಹಿತ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಸಂಯಕ್ತ ಕರ್ನಾಟಕ ಪತ್ರಿಕೆಯಲ್ಲಿ (೨೧-೧೨-೨೦೦೫) ರಾಜೇದ್ರ ಪಾಟೀಲರು "ಕಿನ್ನಾಳ ಕಲೆ ಚಿತ್ತಾರ ಮೂಡಿಸುವವರ ಬದುಕು ಮಾತ್ರ ಚಿಂದಿ"[೭೫] ಎಂಬ ಲೇಖನದಲ್ಲಿ ನಮ್ಮ ಬಹುತೇಕ ಗುಡಿಕೈಗಾರಿಕೆಗಳು ಕುಶಲ ಕಲೆಗಳು ಪಾರಂಪರಿಕ ವಿದ್ಯೆಗಳು ವಿನಾಶದ ಅಂಚಿಗೆ ಬಂದು ತಲುಪಿವೆ. ಇಲ್ಲವೆ ಈಗಾಗಲೇ ವಿನಾಶ ಹೊಂದಿವೆ. ಇಂಥ ವಿನಾಶದ ಅಂಚಿಗೆ ತಲುಪುತ್ತಿರುವ ಕಲೆಗಳಲ್ಲೊಂದು ಕಿನ್ನಾಳ ಕಲೆ. ಒಂದು ಕಾಲದಲ್ಲಿ ಕಿನ್ನಾಳ ಕಲೆಗೆ ಅತ್ಯಂತ ಹೆಚ್ಚು ಪ್ರೊತ್ಸಾಹ ನೀಡಿದ ಜಿಲ್ಲಾಡಳಿತ ಈಗ ಅದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಇಲ್ಲಿನ ಕಲಾವಿದರು ಅನೇಕ ರಾಷ್ಟ್ರ ಮಟ್ಟದ ಶಿಬಿರ ಪ್ರದರ್ಶನಗಳಲ್ಲಿ ತಮ್ಮ ಕೃತಿಗಳನ್ನು ಪ್ರದರ್ಶಿಸಿದ ವಿವರವಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನದ ಸ್ವರೂಪವು ಒಂಭತ್ತು ಅಧ್ಯಾಯಗಳಲ್ಲಿ ಹರಡಿಕೊಂಡಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ ಕುರಿತು ಅಧ್ಯಯನ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನದ ಸಮೀಕ್ಷೆಯನ್ನು ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕಿನ್ನಾಳದ ಕಲೆಯ ನೆಲೆ - ಹಿನ್ನೆಲೆ ಮತ್ತು ಸಾಂಸ್ಕೃತಿಕ ಪರಿಸರ, ಕಿನ್ನಾಳ ಕಲೆ ಬೆಳೆದು ಬಂದ ರೀತಿ ಇವುಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕಿನ್ನಾಳದ ಕಲಾವಿದರು ರೇಖಾ ಚಿತ್ರಗಳ ಹಸ್ತಪ್ರತಿಗಳನ್ನು ಸಿದ್ಧಪಡಿಸಿಕೊಂಡು, ಆ ರೇಖಾ ಚಿತ್ರಗಳನ್ನು ನಕಲನ್ನು ಕಿನ್ನಾಳ ಕಲೆಯಲ್ಲಿ ಅಭಿವ್ಯಕ್ತಪಡಿಸುತ್ತಾರೆ. ಈ ರೇಖಾಚಿತ್ರಗಳ ಹಸ್ತಪ್ರತಿಗಳಲ್ಲಿ ದೇವಾನುದೇವತೆಗಳ ಚಿತ್ರಗಳೊಂದಿಗೆ, ವಿವಿಧ ಸ್ತರದ, ವಿಷಯಗಳ ಸಾಂಪ್ರದಾಯಿಕ ಚಿತ್ರಗಳನ್ನು ಸಂಗ್ರಹಿಸಿಟ್ಟುಕೊಂಡಿರುತ್ತಾರೆ. ಕಿನ್ನಾಳ ಕಲೆಯಲ್ಲಿ ಪುರಾಣಗಳಿಗೆ ಸಂಬಂಧಪಟ್ಟ ವಿಷಯಗಳನ್ನೇ ಚಿತ್ರಿಸುತ್ತಾರೆ. ವೈಷ್ಣವ, ಶೈವ, ಧರ್ಮಗಳಿಗೆ ಸಂಬಂಧಪಟ್ಟ ದೇವ ದೇವತೆಯರನ್ನು ಚಿತ್ರಿಸುತ್ತಾರೆ. ಜೊತೆಗೆ ಜನಪದಿಯ ಸೊಬಗನ್ನು, ಸೊಗಡನ್ನು ಈ ಚಿತ್ರಗಳಲ್ಲಿ ತುಂಬುತ್ತಾರೆ. ಹೀಗೆ ಇಲ್ಲಿ ಕಿನ್ನಾಳ ಚಿತ್ರಕಲೆ ಕುರಿತು ವಿವರವಾಗಿ ಅಧ್ಯಯನ ಮಾಡಲಾಗಿದೆ. ಈ ರೀತಿಯಲ್ಲಿ ಸಂಗ್ರಹಿಸಿದ್ದ ರೇಖಾ ಚಿತ್ರಗಳ ಹಸ್ತಪ್ರತಿಗಳನ್ನು ಸಂಗ್ರಹಿಸಿ ಇಲ್ಲಿ ವಿಶೇಷವಾಗಿ ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಕಿನ್ನಾಳ ಮರದ ಶಿಲ್ಪಗಳ, ಚೌಕಿಗಳ, ಅಡ್ಡಪಲ್ಲಕ್ಕಿಗಳ ರಚನೆಯ ಕುರಿತು ಈಲ್ಲಿ ಚರ್ಚಿಸಲಾಗಿದೆ. ಮೂರ್ತಿ ಶಿಲ್ಪಗಳಲ್ಲಿ ದ್ವಾರಪಾಲಕರ ಶಿಲ್ಪ, ದೇವತಾ ಶಿಲ್ಪಗಳು, ದೇವರ ವಾಹನಗಳ ಶಿಲ್ಪಗಳು, ಪ್ರಾಣಿಶಿಲ್ಪಗಳು, ರಥದ ಅಲಂಕಾರದಲ್ಲಿ ಬಳಸುವ ಕಮಾನಿನ ಬಾಗಿಲು, ಹಣ್ಣು ಹಂಪಲಗಳು, ಚೌಕಿಗಳು, ಚೌಕಟ್ಟುಗಳು ಹೀಗೆ ಹಲವಾರು ರೀತಿಯಲ್ಲಿ ವಿಂಗಡಿಸಿ ಇಲ್ಲಿ ಅಧ್ಯಯನ ಮಾಡಲಾಗಿದೆ. ಕಿನ್ನಾಳ ಕಲಾವಿದರು ತಾವು ರಚಿಸುವ ಶಿಲ್ಪಗಳಿಗೆ ಸುಂದರವಾಗಿ ವರ್ಣ ವಿನ್ಯಾಸವನ್ನು ಮಾಡಿರುತ್ತಾರೆ. ಅವರ ಈ ವರ್ಣ ವಿನ್ಯಾಸದ ವಿಶೇಷತೆಯನ್ನು ಕುರಿತು ಸಹ ಇಲ್ಲಿ ಪೂರಕವಾಗಿ ಚರ್ಚೆ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಸಂಕೀರ್ಣ ಕಲಾಕೃತಿಗಳಾದ ಆಟಿಕೆಯ ವಸ್ತುಗಳು, ಸೆಗಣಿ ಗೊಂಬೆಗಳು, ಕಿನ್ನಾಳ ಚೌಕಿಗಳು, ಗೃಹೋಪಯೋಗಿ ವಸ್ತುಗಳು ಮತ್ತು ನೆನಪಿನ ಕಾಣಿಕೆಗಳಿಗಾಗಿ ರಚಿಸುವ ಕಲಾಕೃತಿಗಳ ಬಗ್ಗೆ ಇಲ್ಲಿ ಕೂಲಂಕುಶವಾಗಿ ಅಧ್ಯಯನ ಮಾಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಕಿನ್ನಾಳ ಕಲೆಯ ಮೇಲಾದ ಪ್ರಭಾವ, ಪ್ರೇರಣೆ ತಂತ್ರಗಾರಿಕೆ, ಶೈಲಿಯ ಕುರಿತು ಅಧ್ಯಯನ ಮಾಡಲಾಗಿದೆ.

ಏಳನೆಯ ಅಧ್ಯಾಯದಲ್ಲಿ ರಾಜ್ಯ ಪ್ರಶಸ್ತಿ ಪಡೆದ ಕಿನ್ನಾಳ ಕಲಾವಿದರ ಮತ್ತು ಇತರೆ ಕಲಾವಿದರ ಪರಿಚಯ, ಪ್ರೊತ್ಸಾಹ ಮತ್ತು ಸಮಕಾಲೀನ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.

ಎಂಟನೆಯ ಅಧ್ಯಾಯವು ಸಮಾರೋಪವಾಗಿದೆ. ಪ್ರಸ್ತುತ ಅಧ್ಯಯನದಿಂದ ಹೊರಬಂದ ಏಳೂ ಅಧ್ಯಾಯಗಳ ಒಟ್ಟು ಫಲಿತಗಳ ಹಾಗೂ ಪ್ರಮುಖ ಸಂಗತಿಗಳ ಸಮೀಕ್ಷೆ ಈ ಕೊನೆಯ ಅಧ್ಯಾಯದಲ್ಲಿ ಇದೆ.

೭೪. ಜಿ.ಬಿ.ವೀರಾಚಾರಿ : ಕಿನ್ನಾಳ ಸಾಂಪ್ರದಾಯಿಕ ಕಲೆ, ಕಿರುಶೋಧ ಪ್ರಬಂಧ, ಕ.ವಿ.ವಿ.ಹಂ. ೨೦೦೪

೭೫. ರಾಜೇಂದ್ರ ಪಾಟೀಲ : ಕಿನ್ನಾಳ ಕಲೆ ಚಿತ್ತಾರ ಮೂಡಿಸುವವರ ಬದುಕು ಮಾತ್ರ ಚಿಂದಿ, ಸಂಯುಕ್ತ ಕರ್ನಾಟಕ.

ಅಧ್ಯಯನದ ವಿಧಾನ

ಈ ಪ್ರಬಂಧದ ರಚನೆಗೆ ಮುಖ್ಯವಾಗಿ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ ೨. ಆನುಷಂಗಿಕ ಆಕರ ಸಾಮಗ್ರಿ

ಈ ಎರಡೂ ಮೂಲಗಳಿಂದ ವಿಷಯ ಸಂಗ್ರಹ ಮಾಡಲಾಗಿದೆ.

೧. ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದು ಕ್ಷೇತ್ರಕಾರ್ಯ. ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯ ಅತ್ಯಂತ ಮಹತ್ವ ಪೂರ್ಣದ್ದಾಗಿದೆ. ಕ್ಷೇತ್ರಕಾರ್ಯವಿಲ್ಲದೆ ಕಿನ್ನಾಳ ಕಲೆಯ ಅಧ್ಯಯನ ಸಾಧ್ಯವಿಲ್ಲ. ಕ್ಷೇತ್ರವೇ ಈ ಅಧ್ಯಯನದ ಮೂಲ ಆಕರ ಮತ್ತು ಕ್ಷೇತ್ರಾಧ್ಯಯನವೇ ಇದರ ಗುರಿ ಎಂದರೆ ತಪ್ಪಾಗಲಾರದು. ಈ ಕ್ಷೇತ್ರಕಾರ್ಯದಲ್ಲಿ ೧.ಸಂದರ್ಶನ ೨.ಸಂಭಾಷಣೆ ೩.ಧ್ವನಿ ಮುದ್ರಣ ೪.ಛಾಯಾಚಿತ್ರಣ ೫.ಶಿಲ್ಪದ ರಚನೆಗೆ ಬಳಸಲಾಗುವ ಮಾಧ್ಯಮಗಳ ವಿವರಣೆ ೬.ಸಂಗ್ರಹಿತ ವಿಷಯದ ಪ್ರತಿಗಳನ್ನು ಸಿದ್ಧಪಡಿಸುವಿಕೆ ಹೀಗೆ ವಿವಿಧ ಸ್ವರೂಪದಲ್ಲಿ ಅಧ್ಯಯನ ಮಾಡಲಾಗಿದೆ.


೨. ಆನುಷಂಗಿಕ ಆಕರ ಸಾಮಗ್ರಿ

ಪ್ರಕಟಿತ ಅಪ್ರಕಟಿತ ಸಾಹಿತ್ಯ ಕೃತಿಗಳು, ಗೆಜೆಟಿಯಿರ್, ಗ್ರಂಥಗಳು, ಸಂಚಿಕೆಗಳು, ಪತ್ರಿಕೆಗಳು, ಮುಂತಾದವುಗಳನ್ನು ಈ ಅಧ್ಯಯನಕ್ಕೆ ಆನುಷಂಗಿಕ ಆಕರ ಸಾಮಗ್ರಿಯನ್ನಾಗಿ ಬಳಸಿಕೊಂಡು ಅಧ್ಯಯನವನ್ನು ರೂಪಿಸಲಾಗಿದೆ.

*****

ಅಧ್ಯಾಯ : ಎರಡು

ಕಿನ್ನಾಳ ಕಲೆಯ ನೆಲೆ-ಹಿನ್ನೆಲೆ







ಕಿನ್ನಾಳ
ಕೊಪ್ಪಳ ಜಿಲ್ಲೆ

ಕೊಪ್ಪಳ ಪರ್ವತ ಪ್ರದೇಶದಲ್ಲಿರುವ ಬಂಡೆ ವರ್ಣ ಚಿತ್ರಗಳು ಮತ್ತು ಕಲ್ಗೋರಿಗಳು ಈ ಕೊಪ್ಪಳವನ್ನು ಸುಮಾರು ಕ್ರಿ.ಪೂ. ೨೦೦೦ ವರ್ಷಗಳಾಚೆ ಒಯ್ಯುತ್ತವೆ. ಕದಂಬ ಮಯೂರ ವರ್ಮನ ೪ನೇ ಶತಮಾನದ ಚಂದ್ರವಳ್ಳಿಯ ಶಾಸನದಲ್ಲಿ ಈ ಕೊಪ್ಪಳಕ್ಕೆ ಕುಪಣವೆಂದು ಉಲ್ಲೇಖವಿದೆ.[೧] ಶಾಸನವನ್ನು ಕೆತ್ತಿದ ಚಾಮನ ಕುಪಣದವನು. ಸಾಮಾನ್ಯವಾಗಿ ಲಿಪಿಕಾರರು ವಿದ್ಯಾಕೇಂದ್ರಗಳಾದ ನಗರದಲ್ಲಿರುತ್ತಿದ್ದರು. ಇದು ೪ನೇ ಶತಮಾನದ ಹೊತ್ತಿಗೆ ದೊಡ್ಡ ನಗರವಾಗಿದ್ದಿರಬೇಕಾದರೆ ಎಷ್ಟೋ ಶತಮಾನಗಳು ಗತಿಸಿರಬೇಕು. ಆದುದರಿಂದ ಈ ಕೂಪಣ ಸುಮಾರು ೧ನೇ ಶತಮಾನದ ಆರಂಭದಲ್ಲಿ ಒಂದು ನಗರವಾಗಿದ್ದಿರಬೇಕು.[೨] ಎಂಬ ಅಭಿಪ್ರಾಯವಿದೆ.

ಮಳಿಮಲ್ಲಪ್ಪನ ಗುಡ್ಡದಲ್ಲಿರುವ ಪಾಲ್ಕಿಗುಂಡಿನ ಮತ್ತು ಗವಿಮಠದ ಗುಡ್ಡದ ನೆಲೆಗಳಲ್ಲಿ ಮೌರ್ಯಚಕ್ರವರ್ತಿ ಅಶೋಕನ ಸುಮಾರು ಕ್ರಿ.ಪೂ.೨೩೪ರಿಂದ೨೨೩ರವರೆಗಿನ ಕಿರುಬಂಡೆ ಶಾಸನಗಳು ಶೋಧಿಸಲ್ಪಟ್ಟಿವೆ. ಆದ್ದರಿಂದ ಆ ಪ್ರದೇಶವು ಮೌರ್ಯ ಸಾಮ್ರಾಜ್ಯದ ದಕ್ಷಿಣ ಭಾರತದ 'ಇಸಿಲ' ಪ್ರದೇಶದಲ್ಲಿತ್ತು. ಆಗಿನಿಂದಲೂ ಈ ಸ್ಥಳದ ಹೆಸರು ಕುಪಣವೆಂದಿರಬೇಕು.[೩] ಎಂಬ ಅಭಿಪ್ರಾಯ ಸರಿಯೆನಿಸುತ್ತದೆ.

ಕುಪಣನಗರವನ್ನು ಕವಿರಾಜ ಮಾರ್ಗಕಾರನ ವಿದಿತ "ಮಹಾ ಕೂಪಣನಗರ" ಎಂದಿರುವುದರಿಂದ ಇದು ಆಗಲೇ ಬಹಳ ಪ್ರಸಿದ್ಧಿಯನ್ನು ಪಡೆದ ಮಹಾ ನಗರವಾಗಿತ್ತೆಂದು ಊಹಿಸಬಹುದು. ಕುಪಣ, ಕೊಪಣ, ಕುಪಣತೀರ್ಥ ಎಂಬ ಹೆಸರಗಳಿಂದ ಶಾಸನಗಳಲ್ಲಿ ಕಾಣಿಸಿಕೊಳ್ಳುವ ಈ ಊರು ಅಥವಾ ನಗರ ಕೊಪಣಾದ್ರಿಯನ್ನು ಹೊಂದಿದೆ. ರನ್ನನ ಅಜಿತ ಪುರಾಣದಲ್ಲಿ "ನಗವ್ದಿ ಕೊಣಂಚಳದಂತೆ ಪವಿತ್ರಮತ್ತಿಪಚ್ಚಿಯಚರಿತಂ" ಎಂದಿರುವುದು ಕೊಪ್ಪಳದ ಪರ್ವತದ ಮಹತ್ವವನ್ನು ಎತ್ತಿ ಹಿಡಿಯುತ್ತದೆ. ಕೊಪ್ಪಳದಲ್ಲಿ ಪ್ರಾಚೀನಕಾಲದಲ್ಲಿ ೭೭೨ಜೈನ ಬಸದಿಗಳಿದ್ದವೆಂಬ ಐತಿಹ್ಯವಿದೆ.[೪] ಕುಪಣ ನಗರ ಎಂದು ಪ್ರಸಿದ್ಧಿ ಪಡೆದಿದ್ದ ಈಗಿನ ಕೊಪ್ಪಳ ಪ್ರಾಚೀನ ಕಾಲದಲ್ಲಿ ಬೌದ್ಧ ಜೈನ ಧರ್ಮಗಳ ವಾಸ ಸ್ಥಳವಾಗಿದ್ದು, ತರುವಾಯ ಶೈವ ವೀರಶೈವ ಧರ್ಮಗಳಿಗೆ ಭೀಮಬಲವಾಗಿ ನಿಂತ ಈ ಸ್ಥಳ ಕ್ರಿಪೂ ೩ನೇ ಶತಮಾನದಷ್ಟು ಪ್ರಾಚೀನವಾಗಿದೆ.

ಪುರಾಣಗಳ ಕಲ್ಪನಾ ಲೋಕ ಬಿಟ್ಟು ಐತಿಹ್ಯಗಳ ನಿಜ ಲೋಕಕ್ಕೆ ಬಂದರೆ ಇಲ್ಲಿ ದೊರೆತ ತಲೆ ಬುರುಡೆ ಮಣ್ಣಿನ ಪಾತ್ರೆ, ಆಯುಧ, ವಿಶೇಷ ಮೊದಲಾದವು ಈ ಸ್ಥಳ ಪ್ರಾಚೀನ ಕಾಲದಿಂದ ಮಾನವರ ವಾಸಸ್ಥಳವಾಗಿತ್ತೆಂಬುದಕ್ಕೆ ಸಾಕ್ಷಿ ಹೇಳುತ್ತಿವೆ. ಇಲ್ಲಿಯ ಸುಪ್ರಸಿದ್ಧ ಗವಿಸಿದ್ದೇಶ್ವರ ಮಠದ ಮೇಲಿನ ಗುಹೆಗಳಲ್ಲಿ



೦೧. ಬಿ.ಸಿ.ಪಾಟೀಲ : ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ ೧೩
೦೨. -ಅದೇ-
೦೩. -ಅದೇ- ಪುಟ ೧೪
೦೪. ಎಚ್.ಎಸ್.ಪಾಟೀಲ (ಸಂ) : ತಿರುಳ್ಗನ್ನಡ ಸವಿ ಸಂಚಿಕೆ, ಪುಟ ೬

ಶಿಲಾಯುಗದ ಆದಿಮಾನವನ ವರ್ಣರಂಜಿತ ಚಿತ್ರಗಳು ದೊರೆತಿವೆ. ಮೋರೇರ ಅಂಗಡಿ, ಮೋರೇರ ಅಗಸಿ, ಮಿಂಚರ ಬಂಡೆಯಬಯಲು ಮೊದಲಾದವುಗಳು ಈ ಸ್ಥಳದ ಇತಿಹಾಸವನ್ನು ಕ್ರಿಸ್ತ ಪೂರ್ವದತ್ತ ಒಯ್ಯುತ್ತವೆ.

ಕರ್ನಾಟಕದಲ್ಲಿ ದೊರೆಯುವ ಮೊಟ್ಟ ಮೊದಲ ಶಾಸನಗಳು "ದೇವನಾಂಪ್ರಿಯ ಪ್ರಿಯದರ್ಶಿ" ಎಂದು ಪ್ರಸಿದ್ಧಿ ಪಡೆದ ಅಶೋಕನ ಧರ್ಮ ಶಾಸನಗಳು ಅವುಗಳಲ್ಲಿ ಎರಡು ಕೊಪ್ಪಳದಲ್ಲಿಯೇ ಇರುವುದು ಅಂದಿನ ಕಾಲದಲ್ಲಿ ಈ ಸ್ಥಳ[೫] ಪಡೆದಿದ್ದ ಪ್ರಸಿದ್ಧಿಯನ್ನು ಮಹತ್ವವನ್ನು ಸಾರುತ್ತಿವೆ.

ಮೌರ್ಯರ ತರುವಾಯ ಈ ನಾಡು ಶಾತವಾಹನರ ಆಳ್ವಿಕೆಗೆ ಒಳಪಟ್ಟಿತು. ಇವರು ಈ ನಾಡನ್ನು ಸುಮಾರು ಕ್ರಿ.ಪೂ. ೫೫೦ ವರ್ಷಗಳ ಕಾಲ ಆಳಿದರು. ಎರಡು ಅಶ್ವಮೇಧಯಾಗಗಳನ್ನು ಒಂದು ರಾಜಸೂಯಿಯಾಗವನ್ನು ಮಾಡಿದ ಈ ವಂಶದ ಕನ್ನ ಅಥವಾ ಕೃಷ್ಣ ಮಹಾರಾಷ್ಟ್ರದಿಂದ ಪೂರ್ವತೀರದ ಕಳಿಂಗದವರೆಗೆ ಆಳಿದನೆಂದು ತಿಳಿದು ಬರುತ್ತದೆ. ಕೊಪ್ಪಳ ತಾಲೂಕಿನ ಚಿಕ್ಕಸಿಂಡೋಗಿಯಲ್ಲಿ ಈ ವಂಶಕ್ಕೆ ಸಂಬಂಧಿಸಿದ ೫೫೩೪ ಬೆಳ್ಳಿಯ ಮುದ್ರಾಂಕಿತ ನಾಣ್ಯಗಳ ರಾಶಿ ದೊರೆತಿರುವುದನ್ನು ಇಲ್ಲಿ ಸ್ಮರಿಸಬಹುದು. ಕದಂಬ ವಂಶದ ಸ್ಥಾಪಕ ಮಯೂರವರ್ಮನ ಶಾಸನದಲ್ಲಿ 'ಕುಪಣಚಮ'[೬] ಎಂಬ ಹೆಸರಿನಲ್ಲಿ ಕೊಪ್ಪಳದ ಉಲ್ಲೇಖವಿರುವುದನ್ನು ಕಾಣಬಹುದಾಗಿದೆ.

ಶಿಲ್ಪಕಲೆಯ ದೃಷ್ಟಿಯಿಂದಲೂ ಕೊಪ್ಪಳ ಮಹತ್ವದ ಕೊಡುಗೆಯನ್ನಿತ್ತಿದೆ. ಜನಸಾಮಾನ್ಯರು ಈ ನಾಡನ್ನು "ಊರಾಗ ೭೭೨ ಬಸ್ತಿ, ಬಾಚೀನ ಕಲ್ಲ ಮೇಲೊಂದು ಕಿಸ್ತಿ"[೭] ಎಂದಾಡಿಕೊಳ್ಳುತ್ತಿದ್ದ ಮಾತಿನಿಂದ ಇದು ಜಿನಾಲಯಗಳ ಬೀಡಾಗಿದ್ದಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಪ್ರವಾಸಕ್ಕೆ ಬಂದ ಚೀನಾ ದೇಶದ ಪ್ರವಾಸಿ ಹ್ಯೂ ಎನ್ ತ್ಸಾಂಗ್, ಕನ್ನಡ ನಾಡಿನ ಪ್ರಸಿದ್ಧ ಸ್ಥಳಗಳನ್ನು ಹೆಸರಿಸುವಾಗ ಈ ಸ್ಥಳವನ್ನು 'ಕೊಂಕಿನ ಪುಲೋವು' ಎಂದು ಉಲ್ಲೇಖಿಸಿದ್ದಾನೆ. ಸುಮಾರು ಕ್ರಿ.ಶ.೧೯೭೬ರಲ್ಲಿ ಕೊಪ್ಪಳ ನಗರದ ಬೆಟ್ಟದ ಪೂರ್ವದಲ್ಲಿಯ ಗುಹೆವೊಂದರಲ್ಲಿ ಡಾ.ಅ.ಸುಂದರ ಅವರು ಪ್ರಾಗ್ಯೈತಿಹಾಸಿಕ ಕಾಲದ ಬಂಡೆ ವರ್ಣಚಿತ್ರವೊಂದನ್ನು ಶೋಧಿಸಿದರು. ಮತ್ತೆ ವಿವಿಧಡೆಗಳಲ್ಲಿ ವಿವಿಧ ಬಣ್ಣದ ಬಂಡೆ ವರ್ಣಚಿತ್ರಗಳು ಮತ್ತು ಪಕ್ಷಿ ರೇಖಾಚಿತ್ರಗಳು ಇವೆ.[೮] ಹಿರೇಬೆನಕಲ್ಲಿನ ಗುಡ್ಡದ ಗುಹೆಯಲ್ಲಿರುವ ವರ್ಣಚಿತ್ರಗಳಲ್ಲಿ ಕುದುರೆ ಸವಾರನ ಚಿತ್ರವಿದೆ. ಗವಿಮಠದ ಗುಡ್ಡದಲ್ಲಿಯ ಗುಹೆಯ ಪ್ರಾಣಿಗಳ ಚಿತ್ರದಲ್ಲಿ ಕುದುರೆ ಚಿತ್ರವೊಂದಿದೆ. ಇನ್ನೊಂದು ವೈಶಿಷ್ಟ್ಯವೇನೆಂದರೆ ಈ ಹಂತದ ಜನರು ಬಳಸುತ್ತಿದ್ದ ಮಣ್ಣಿನ ಪಾತ್ರೆಗಳು ದ್ವಿವರ್ಣದವುಗಳಾಗಿದ್ದವು. ಅಳಿದುಳಿದ ಅವಶೇಷಗಳ ಅಧ್ಯಯನದ ಆಧಾರದ ಮೇಲೆ ಅಂದಿನ ಮಾನವನು ತನ್ನ ಬದುಕನ್ನು ನಿಸರ್ಗದ ಆಸರೆಯಲ್ಲಿ ಸಾಗಿಸುತ್ತಿದ್ದನೆಂದು ತಜ್ಞರ ಅಭಿಪ್ರಾಯ. ವಿವಿಧ ಶತಮಾನಗಳಲ್ಲಿ ಆತನು ಬಳಸಿದ ವಿವಿಧ ಆಕಾರದ ಕಲ್ಲಿನ ಆಯುಧಗಳು ಆಭರಣಗಳು, ಉಡುಪು, ಮಡಕೆಯ ತುಂಡುಗಳು, ರೇಖೆಗಳಲ್ಲಿ ಮತ್ತು ಬಣ್ಣಗಳಲ್ಲಿ ಬಿಡಿಸಿದ ಚಿತ್ರಗಳು ಲೋಹ ವಸ್ತು, ಶಿಲ್ಪ ಇವುಗಳು ಮಾನವನು ಹಂತ ಹಂತವಾಗಿ ಪ್ರಗತಿಯನ್ನು ಸಾಧಿಸಿ ಕಾಡು ಬದುಕಿನಿಂದ ನಾಡು ಬದುಕಿಗೆ ಬಂದದನ್ನು ತಿಳಿಸುತ್ತಿವೆ. ಇವೆಲ್ಲವುಗಳ ಆಗರವಾದ ಈ ಕೊಪ್ಪಳ ತನ್ನದೇ ಆದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಹೊಂದಿದ ನಾಡಾಗಿದೆ.

ಗುಹಾ ವರ್ಣಚಿತ್ರಗಳು

ಗವಿಮಠವಿರುವ ತಾಣದಿಂದ ಆಗ್ನೇಯ ದಿಕ್ಕಿಗಿರುವ ವಿಶಾಲವಾದ ನಿಸರ್ಗ ಹೊಂಡದ ಆಗ್ನೇಯ ದಿಕ್ಕೆಗೆ ಭೂಮಟ್ಟದಿಂದ ಸುಮಾರು ೬ಮೀಟರ ಎತ್ತರದಲ್ಲಿರುವ ವಿಶಾಲ ಮತ್ತು ಉದ್ದನೆಯ ಗವಿಯಲ್ಲಿ ಜಿಂಕೆ, ಆಕಳು, ಎತ್ತು ಕಾಡು ಕೋಣ, ಮೊಲ, ಟಗರು, ಕುದುರೆ ಮುಂತಾದ ವಿವಿಧ ಪ್ರಾಣಿಗಳ ಚಿತ್ರಗಳನ್ನು ಅಂದಿನ ಮಾನವನು ಕೆಮ್ಮಣ್ಣು (ಕೆಂಪು) ರೇಖೆಗಳಲ್ಲಿ ಬಿಡಿಸಿರುವನು. ಇಲ್ಲಿಯ ಚಿತ್ರಗಳಲ್ಲಿ ಮಾನವನ ಜೀವನದ ವಿವಿಧ ಹಂತಗಳಲ್ಲಿಯ ಪ್ರಗತಿಯನ್ನು ತೋರಿಸುತ್ತಿವೆ. ಈ ಚಿತ್ರಗಳು ಅಂದಿನ ಪ್ರಾಣಿಗಳ ಪ್ರಪಂಚವನ್ನು ಸಹ ಪರಿಚಯಿಸಿಕೊಡುತ್ತಿವೆ.

ಗವಿಮಠದ ಗಿರಿಯ ದಕ್ಷಿಣ ತುದಿಯಲ್ಲಿರುವ ಅಶೋಕ ಚಕ್ರವರ್ತಿಯ ಶಾಸನವಿರುವ ಸ್ಥಳದಿಂದ ಸನಿಹದಲ್ಲಿ ಅತಿ ಎತ್ತರದ ಗುಂಡಿನ ಸೀಳಿದ ಒಡಲಲ್ಲಿ ಕೆಮ್ಮಣ್ಣು ಬಣ್ಣದ ದೇಹದ ಮೇಲೆ ಸಮಾನಂತರವಾಗಿ ಎಳೆದು ಕಪ್ಪು ರೇಖೆಗಳು ನೀಳ ಮತ್ತು ಉದ್ದ ಬಾಲ ಮತ್ತು ನೆಗೆಯುತ್ತಿರುವ ಹುಲಿಯ ಚಿತ್ರವಾಗಿದೆ.



೦೫. ಎಚ್.ಎಸ್.ಪಾಟೀಲ (ಸಂ) : ತಿರುಳ್ಗನ್ನಡ ಸವಿ ಸಂಚಿಕೆ, ಪುಟ ೪
೦೬. -ಅದೇ- ಪುಟ ೪
೦೭. -ಅದೇ- ಪುಟ ೭
೦೮. ಬಿ.ಸಿ.ಪಾಟೀಲ : ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ ೧೪

ಇನ್ನೊಂದು ಬಂಡೆಗಳ ನಡುವೆ ಇರುವ ಚಿತ್ರವನ್ನು ಮೇಲ್ಮುಖವಾಗಿ ಮಲಗಿ ನೋಡಲು ಮಾತ್ರ ಸಾಧ್ಯ, ಬೇಟೆಗಾರನು ಬಿಟ್ಟ ಬಾಣ ಮುನ್ನಡೆದಿದೆ. ಗಾಯ ಗೊಂಡ ಜಿಂಕೆ ನೆಲಕಚ್ಚಿದ ಉಳಿದ ಪ್ರಾಣಿಗಳು ಪ್ರಾಣ ಭಯದಿಂದ ಓಡಾಡುತ್ತಿವೆ. ಈ ಚಿತ್ರದಲ್ಲಿ ಮಾನವನು ಕಲ್ಲಿನ ಕೊಡಲಿಗೆ ಪ್ರತಿಯಾಗಿ ಬಿಲ್ಲು ಬಾಣಗಳನ್ನು ಉಪಯೋಗಿಸಿರುವುದು ಅಂದಿನ ಅವನ ಬದುಕಿನ ವಿಕಾಸ ತಿಳಿಸುತ್ತಿದೆ. ಮತ್ತು ಶಿಲಾಯುಗದ ಮುಂದಿನ ಹಂತವನ್ನು ತಿಳಿಸುತ್ತಿದೆ.

ಸ್ಥಳಿಯರು ಕರೆಯುವ ಪಾಂಡವರ ವಠಾರದಲ್ಲಿ ಬಾಗಿದ ಬಂಡೆ ಕೆಳಗಿನ ಬಂಡೆಯನ್ನು ಸಂಧಿಸುವ ತಾಣದಲ್ಲಿ ಕೆಮ್ಮಣ್ಣು ಬಣ್ಣದಲ್ಲಿ ಸಮೂಹ ಕುಣಿತದ ಚಿತ್ರವಿದೆ. ಕುತ್ತಿಗೆಗಳನ್ನು ಒಂದೆಡೆ ಬಾಗಿಸಿ ಕೈಗಳನ್ನು ಮೇಲಕ್ಕೆತ್ತಿ ಕೈಜೋಡಿಸಿ, ಒಂದು ಕಾಲನ್ನು ಮೇಲೆತ್ತಿ, ಅದನ್ನು ಕೊಂಕಿಸಿ ಇನ್ನೊಂದು ಕಾಲ ಮೇಲೆನಿಂತು, ಹೆಜ್ಜೆಹಾಕುತ್ತಾ ಇರುವ ಚಿತ್ರ ಇದಾಗಿದೆ.

ಮಳೆಮಲ್ಲಪ್ಪನ ದೇವಾಲಯದ ದಕ್ಷಿಣಕ್ಕೆ ಮತ್ತು ವಿಶಾಲ ಹರವಿನ ಪಶ್ಚಿಮದ ಅಂಚಿನಲ್ಲಿ ಬೃಹದಾಕಾರದ ಸೀಳಿದ ಬಂಡೆಯಲ್ಲಿ ಮಶ್ರ ಬಣ್ಣದ ರೇಖೆಯಲ್ಲಿ ಸ್ತ್ರೀಯನ್ನು ಪ್ರತಿನಿಧಿಸುವ ಚಿತ್ರವಿದೆ ಇದನ್ನು ತ್ರಿಕೋನಾಕಾರದಲ್ಲಿ ಮುಂಚಾಚಿದ ರೇಖೆಗಳು ತಿಳಿಸುತ್ತಿವೆ. ಇಂತಹ ಪ್ರಾಗೈತಿಹಾಸಿಕ ಹಿನ್ನೆಲೆ ಹೊಂದಿರುವ ಕೊಪ್ಪಳದಿಂದ ಕೇವಲ ೧೦ ಕೀ.ಮಿ. ದೂರದಲ್ಲಿರುವ ಕಿನ್ನಾಳ ಹಸಿರು ಹೊಲ ಗದ್ದೆಗಳ ನಡುವೆ ಇರುವ ಪುಟ್ಟ ಗ್ರಾಮವಾಗಿದೆ.

ನಮ್ಮ ದೇಶ ಹಳ್ಳಿಗಳ ದೇಶ ಭಾರತದಲ್ಲಿ ಹಳ್ಳಿಗಳ ಪ್ರಾಮುಖ್ಯತೆ ಎಷ್ಟಿದೆಯಂದರೆ ಗಾಂಧೀಜಿಯವರ ಪ್ರಕಾರ ಭಾರತದ ಆತ್ಮ ಹಳ್ಳಿಗಳಲ್ಲಿದೆ. ಭೌಗೋಳಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಭಾರತವನ್ನು ಕಾಣಬೇಕೆಂದರೆ ಹಳ್ಳಿಗಳನ್ನು ಕಾಣಬೇಕು ಅಂದರೆ ಭಾರತ ಹಳ್ಳಿಗಳಿಂದ ತುಂಬಿಕೊಂಡಿದೆ. ಹಳ್ಳಿಗಳಲ್ಲಿ ಭಾರತ ತುಂಬಿಕೊಂಡಿದೆ. ಹಳ್ಳಿಗಳು ಪುರಾತನ ಕಾಲದಿಂದಲೂ ಮಾನವನ ವಸತಿ ಕೇಂದ್ರಗಳಾಗಿರುವಂತೆ ಸಂಸ್ಕೃತಿ ಉಗಮದ ಸ್ಥಾನಗಳೂ ಆಗಿವೆ.[೧೯]

ಭಾರತದ ಕರಕುಶಲ ಕಲೆಯನ್ನು ಕುರಿತು ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಹೀಗೆ ಹೇಳುತ್ತಾರೆ.– "ಒಂದು ವೇಳೆ ನನ್ನನ್ನು ಮಾನವನು ಸೃಷ್ಟಿಸಿದ ಈ ಹಸ್ತಶಿಲ್ಪದ ವೈಶಿಷ್ಟತೆ ಏನು ಎಂದು ಕೇಳಿದರೆ ನಾನು ಅದಕ್ಕೆ ಉತ್ತರವನ್ನು ಒಂದೇ ಒಂದು ಶಬ್ದದಲ್ಲಿ ಕೊಡಬಲ್ಲೆ ಅದು ಸೌಂದರ್ಯ. ಸೌಂದರ್ಯ ಬರಿ ಬಣ್ಣ ರೂಪಗಳಲ್ಲಿ ಅಷ್ಟೇ ಕಂಡುಬರುವ ವಸ್ತುವಲ್ಲ, ಅದು ನಮ್ಮ ಜೀವನದಲ್ಲಿ ಸರ್ವತ್ರ ವ್ಯಾಪಿಸಿಕೊಂಡಿರುವ ಅಂಶ. ನಮ್ಮ ದೇಶದಲ್ಲಿ ಸೌಂದರ್ಯವನ್ನು ಈಶ್ವರಿಯ ಸೂತ್ರವನ್ನಾಗಿ ಮಾಡಲಾಗಿದೆ. ಸತ್ಯಂ.ಶಿವಂ ಸುಂದರಂ, ಇವು ಜೀವನವನ್ನು ಅರ್ಥ ಪೂರ್ಣವಾಗಿ ಮಾಡಬಲ್ಲ ಮೂಲಭೂತ ತತ್ವಗಳು ಭಾರತದ ರೀತಿ ನೀತಿಗಳಲ್ಲಿ ಸದಾ ಕಾಲ ಸೌಂದರ್ಯದ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನ ಮಾಡಲಾಗಿದೆ. ದಿನನಿತ್ಯದ ಕಾರ್ಯಗಳಲ್ಲಿ ಅದರ ಪ್ರವೇಶವಾಗುತ್ತದೆ. ಪಶ್ಚಿಮ ದೇಶಗಳಲ್ಲಿಯಂತೆ ಕಲೆ ಬರೀ ಸಂಗ್ರಹಾಲಗಳಲ್ಲಿ ಇಡುವ ವಸ್ತುವಾಗಿಲ್ಲ, ಅದು ಮನುಷ್ಯನಷ್ಟೆ ಪ್ರಾಚೀನವಾಗಿದೆ. ಆತನ ಜೀವನದಲ್ಲಿ ಆತ್ಮಿಯ ರೂಪದಲ್ಲಿ ಹಾಸು ಹೊಕ್ಕಾಗಿ ಬೆಳೆದು ನಿರಂತರವಾಗಿ ಹರಿಯುತ್ತದೆ.[೧೦]ಎಂಬ ಮಾತು ಅರ್ಥಪೂರ್ಣವಾಗಿದೆ.

ಕರ್ನಾಟಕದಲ್ಲಿ ಹಲವಾರು ಚಿತ್ರ ಶೈಲಿಗಳು ಪ್ರಾಚೀನ ಪರಂಪರೆಯಿಂದ ಬೆಳದು ಬಂದಿವೆ. ಅವುಗಳಲ್ಲಿ ಕೆಲವು ಇಂದು ಕಣ್ಮರೆಯಾಗಿವೆ. ಇದಕ್ಕೆ ಸಾಮಾಜಿಕ ಸಾಂಸ್ಕೃತಿಕ ಬದಲಾವಣೆಗಳು ಕಾರಣವಿರಬಹುದು ಇಲ್ಲವೆ ವ್ಯತ್ಯಸ್ತ ಮೌಲ್ಯಗಳು ಬದಲಾದ ಅಭಿರುಚಿ ಕಾರಣವಿರಬಹುದು. ಹೀಗಾಗಿ ಇಂದು ಆಧುನಿಕ ಕಲಾತ್ಮಕ ಸಂಶೋಧನೆ ಆವಿಷ್ಕಾರಗಳನ್ನು ಮೈಗೂಡಿಸಿಕೊಳ್ಳಲು ಆಗದೆ ಅತ್ತ ಪರಂಪರೆಯಿಂದ ಬಂದ ಮೂಲಶೈಲಿಯನ್ನು ಬಿಡಲೂ ಸಾಧ್ಯವಾಗದೆ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಸಾಂಪ್ರದಾಯಿಕ ಚಿತ್ರ ಕಲಾವಿದರದು. ಪರಂಪರಾಗತವಾಗಿ ಬಂದ ಇಂತಹ ಚಿತ್ರ ಶೈಲಿಗಳ ಇತಿಹಾಸ ಆಶ್ಚರ್ಯ ಮೂಡಿಸುತ್ತದೆ, ಕುತೂಹಲ ಉಂಟುಮಾಡುತ್ತದೆ.

ಕಿನ್ನಾಳದ ಇತಿಹಾಸ ವಿಜಯನಗರ ಅರಸರ ಕಾಲದಷ್ಟು ಹಿಂದಿನದು ಕಿನ್ನಾಳ ಮೊದಲು ವಿಜಯನಗರ ಅರಸರ ಆಡಳಿತಕ್ಕೆ ಒಳಪಟ್ಟಿತು. ಆ ನಂತರ ಕೊಪ್ಪಳದ ನವಾಬರ ಆಡಳಿತ ಪರಿಧಿಗೆ ಬಂದಿತು. ಹೀಗಾಗಿ ಹಿಂದೂ ಮುಸ್ಲಿಂ ಸಾಮರಸ್ಯವನ್ನು ಅಲ್ಲಿನ ನಿತ್ಯ ಜೀವನದಲ್ಲಿ ಕಾಣಬಹುದು. ಅದೇ ರೀತಿ ದಖನಿ ಸುಲ್ತಾನರ ಮಿನಿಯೇಚರ್ ಶೈಲಿಯ ಅಂಶಗಳನ್ನು ಸಹ ಕಿನ್ನಾಳ ಚಿತ್ರಶೈಲಿಯಲ್ಲಿ ಗಮನಿಸಬಹುದು. ಇಲ್ಲಿನ ಚಿತ್ರಗಾರ ಕುಟುಂಬ ವಂಶಪಾರಂಪರ್ಯವಾಗಿ ಚಿತ್ರಶೈಲಿಯನ್ನು ರೂಢಿಸಿಕೊಂಡು ಬಂದಿದೆ. ಚಿತ್ರಕಲೆ ಅವರ ಕುಲಕಸುಬೂ

೧೯. ಗ್ರಾಮೀಣ ಸಾಂಸ್ಕೃತಿಕ ಪರಂಪರೆ ಮತ್ತು ರಾಷ್ಟ್ರೀಯ ಭಾವೈಕ್ಯ, ಪ್ರಸಾರಾಂಗ, ಕ.ವಿ.ವಿ.ಧಾ. ೧೯೯೪
೧೦. ಡಾ.ಕರೀಗೌಡ ಬೀಚನಹಳ್ಳಿ (ಸಂ) : ಕರಕುಶಲ ಕಲೆಗಳು ಪುಟ ೧೯

ಅಹುದು. ಇಂದಿಗೂ ಆ ಕುಟುಂಬದವರ ಚಿತ್ರಕಲೆಯನ್ನೇ ನಂಬಿ ಜೀವನ ನಡೆಸುತ್ತಿದ್ದಾರೆ. ವಿಜಯನಗರದ ಅರಸರ ಕಾಲದಲ್ಲಿ ದೇವಸ್ಥಾನಗಳ ಅಲಂಕಾರ ಮಾಡಿಕೊಂಡಿದ್ದ ಕಿನ್ನಾಳ ಕಲಾವಿದರು ವಿಜಯನಗರದ ಪತನಾನಂತರ ವಲಸೆ ಹೋಗಬೇಕಾಯಿತು. ಕಲೆಯನ್ನು ಪೋಷಿಸುವ ಪ್ರೋತ್ಸಾಹಿಸುವ ಆಶ್ರಯದಾತರು ಇಲ್ಲದೆ ಸೂಕ್ತ ಅವಕಾಶಗಳ ಅಭಾವದಿಂದಾಗಿ ಕಿನ್ನಾಳ ಚಿತ್ರಗಾರ ಕಲಾವಿದರು ಗುಂಪು ಗುಂಪಾಗಿ ಬೇರೆ ಬೇರೆ ಭಾಗಗಳಿಗೆ ಹೋದರು. ಕೆಲವರು ಆಂಧ್ರಪ್ರದೇಶದ ಅನಂತಪುರ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಕೊಟ್ಟೂರು, ಕನಕಗಿರಿ ಮುಂತಾದ ಭಾಗಗಳಲ್ಲಿ ನೆಲೆಸಿದರು. ಹಾಗೇ ವಲಸೆ ಬಂದು ನೆಲೆಸಿದವರಲ್ಲಿ ಕಿನ್ನಾಳ ಕಲಾವಿದರು ಸೇರುತ್ತಾರೆ. ಇವರು ಚಿತ್ರಗಾರ ಕುಟುಂಬದವರೆಂದೇ ಖ್ಯಾತರಾಗಿದ್ದಾರೆ. ಈ ವೃತ್ತಿಯನ್ನು ಮಾಡುವ ಬೇರೆ ಬೇರೆ ಭಾಗಗಳ ಕಲಾವಿದರನ್ನು ಸಹ ಚಿತ್ರಗಾರ ಹೆಸರಿನಿಂದಲೇ ಕರೆಯುವುದು ರೂಢಿಯಲ್ಲಿ ಬಂದಿದೆ. ಕಲಾತ್ಮಕ ಕಾರ್ಯಗಳ ನಿರ್ವಹಣೆ ಚಿತ್ರರಚನೆ ಅವರ ಬದುಕಿನ ಆಧಾರವಾಗಿ, ಭಾಗವಾಗಿ ಇಂದಿಗೂ ಉಳಿದು ಬಂದಿದೆ.

ಪುರಾತನ ಕಾಲದಿಂದಲೂ ಪ್ರಸಿದ್ಧಿ ಪಡೆದು ಕರಕೌಶಲ್ಯದ ಜೀವಂತ ಸೆಲೆಯಾಗಿ ಇಂದಿಗೂ ನಮ್ಮೊಂದಿಗಿರುವ ಕಲೆ ಕಿನ್ನಾಳ ಕಲೆ. ಅಪ್ಪಟ ಜನಪದ ಕಲೆಯಾದ ಕಿನ್ನಾಳ ಕಲೆ ವಿಜಯನಗರ ಅರಸರ ಕಾಲದಲ್ಲಿ ಹೆಸರು ವಾಸಿಯಾಗಿತ್ತು. ಕಿನ್ನಾಳ ಗುಡಿಕಾರರು ಕೃಷ್ಣದೇವರಾಯನ ಸನ್ನಿಧಿಯ ಚಿತ್ರಕಾರರೆಂದು ಕರೆಯಲ್ಪಡುತ್ತಿದ್ದರು. ಕೃಷ್ಣದೇವರಾಯನ ಅರಮನೆಯಲ್ಲಿ ಅಂತಃಪುರ ಶಯ್ಯಾಗಾರಗಳನ್ನು ಶೃಂಗರಿಸಲು ಕಿನ್ನಾಳದ ಗುಡಿಗಾರರು ಹೆಚ್ಚು ಶ್ರಮಿಸುತ್ತಿದ್ದರೆಂದು ಇತಿಹಾಸ ಹೇಳುತ್ತದೆ.

ಕಿನ್ನಾಳದ ಇತಿಹಾಸ ವಿಜಯನಗರ ಕಾಲದಷ್ಟು ಹಿಂದಿನದು ಕಿನ್ನಾಳ ಮೊದಲು ವಿಜಯನಗರ ಅರಸರ ಆಡಳಿತಕ್ಕೆ ಒಳಪಟ್ಟಿತ್ತು. ಆ ನಂತರ ಕೊಪ್ಪಳದ ನವಾಬರ ಆಡಳಿತ ಪರಿಧಿಗೆ ಬಂದಿತು. ಅದೇ ರೀತಿ ದಖನಿ ಸುಲ್ತಾನರ ಮಿನಿಯೇಚರ್ ಶೈಲಿಯ ಅಂಶಗಳನ್ನು ಸಹ ಕಿನ್ನಾಳ ಚಿತ್ರಶೈಲಿಯಲ್ಲಿ ಗಮನಿಸಬಹುದು. ಇಲ್ಲಿನ ಚಿತ್ರಗಾರ ಕುಟುಂಬ ವಂಶಪಾರಂಪರ್ಯವಾಗಿ ಚಿತ್ರಶೈಲಿಯನ್ನು ರೂಢಿಸಿಕೊಂಡು ಬಂದಿದೆ. ಇಂದಿಗೂ ಆ ಕುಟುಂಬದವರು ಈ ಕಲೆಯನ್ನೇ ನಂಬಿ ಜೀವನ ನಡೆಸುತ್ತಿದ್ದಾರೆ.

ಐತಿಹಾಸಿಕವಾಗಿ ಕಿನ್ನಾಳ ಕಲೆಯ ಬೆಳವಣಿಗೆಯನ್ನು ನಾವು ಕ್ರಿ.ಶ.೧೫೪೦ರಿಂದ ಗುರುತಿಸಬಹುದು. ವಿಜಯನಗರದಲ್ಲಿ(ಕ್ರಿ.ಶ.೧೫೪೦) ಅಚ್ಯುತದೇವರಾಯನ ಕಾಲ, ಅದೇ ಸಮಯದಲ್ಲಿ ಲೇಪಾಕ್ಷಿಯ ಮಂಟಪಗಳಲ್ಲಿ ಮತ್ತು ಹಂಪಿಯ ಪಂಪಾಪತಿ ದೇವಸ್ಥಾನದಲ್ಲಿನ ಚಿತ್ರಗಳನ್ನು ರಚಿಸಲಾಯಿತು. ಕ್ರಿ.ಶ.೧೫೪೦ರಿಂದ ಸುಮಾರು ೨೦೦ ವರ್ಷಗಳವರೆಗೆ ಯಾವುದೇ ತೆರನಾದ ಪುರಾವೆಗಳಾಗಲಿ ಕಿನ್ನಾಳ ಶೈಲಿಯ ಬಗ್ಗೆ ನಮಗೆ ಸಿಗುವುದಿಲ್ಲ, ಅದರೂ ಕೂಡಾ ಕಿನ್ನಾಳ ಕಲಾವಿದರ ಪೂರ್ವಜರು ಅಂದು ಹಂಪಿಯಲ್ಲಿ ಇದ್ದು ಕೆಲಸ ಮಾಡುತ್ತಿದ್ದರು ಎಂದು ಊಹಿಸಬಹುದಾಗಿದೆ. ಈ ಶೈಲಿಯ ಉಗಮ ಕ್ರಿ.ಶ. ೧೫೪೦ ಎಂದು ನಿಖರವಾಗಿ ಹೇಳಲಾಗುವುದಿಲ್ಲವಾದರೂ ಅವರ ಮೂಲಭೂತ ವೃತ್ತಿ ಬೆಳವಣಿಗೆ ಆ ಕಾಲದಲ್ಲಿ ಆಯಿತು ಎನ್ನಬಹುದು. ಆ ಕಾಲದ ಭಿತ್ತಿ ಚಿತ್ರಗಳು ಕಿನ್ನಾಳ ಶೈಲಿಯ ಮೂಲ.[೧೧] ಎಂದು ಅವುಗಳ ಲಕ್ಷಣಗಳಿಂದ ಅರಿಯಬಹುದು.

ವಿಜಯನಗರ ಕಾಲದಲ್ಲಿ ಹೊಸಪೇಟೆ ತಾಲೂಕಿನ ಹೊಸೂರಮ್ಮನ ಜಾತ್ರೆಯ ಸಂದರ್ಭದಲ್ಲಿ ವಿಜಯನಗರದಿಂದ ಒಬ್ಬ ಚಿತ್ರಗಾರ ಬಂದು ಹೊಸೂರಮ್ಮನಿಗೆ ಬಣ್ಣ ಮಾಡುತ್ತಿದ್ದನಂತೆ, ಇಂದಿಗೂ ಈ ಪರಂಪರೆ ಮುಂದುವರಿದಿರುವುದನ್ನು ಕಾಣಬಹುದು. ಇದು ಅಲ್ಲದೆ ಹೊಸೂರಿನಲ್ಲಿ ಶಾಸನವೊಂದು ದೊರೆತಿದೆ. ಇದು Annual Roports on Indian Epigraphy ೧೯೨೨-೨೫ ರಲ್ಲಿ ಪ್ರಕಟವಾಗಿದೆ. ಇದರಲ್ಲಿನ ವಿವರ ಹೀಗಿದೆ. Records a gift of land made by the temple managers (Sthanika) of the temple of the goddess Mahamayi at Hosuru, to katikam Mallaya of Vijaynagr, for doing ornamental work (chilvanya) to the lion Vehicle of the deity (ಕ್ರಿ.ಶ.೧೯೮೬ -೧೯೨೫) ಎನ್ನುವ ಅಂಶಗಳು ಕಿನ್ನಾಳ ಕಲೆ ವಿಜಯನಗರ ಕಾಲದ್ದು ಎನ್ನುವತ್ತ ನಮ್ಮ ಗಮನವು ಸೆಳೆಯುತ್ತದೆ.[೧೨]

ಕಿನ್ನಾಳದಲ್ಲಿ ರಚಿತವಾದ ಹಲವು ಹಳೆಯ ಚಿತ್ರಗಳು ನಾಶವಾಗಿ ಭಾಗಶಃ ಉಳಿದು ಬಂದಿರುವಂಥವು ದೊರೆತಿವೆ. ಇವು ಸುಮಾರು ೧೮೦-೨೦೦ ವರ್ಷಗಳಷ್ಟು ಹಿಂದಿನವು. ಈಗ ಉಳಿದಿರುವ ರೇಖಾಚಿತ್ರಗಳ ಆಧಾರದಿಂದ ಹಾಗೇ ಕಿನ್ನಾಳದ ಮೂಲ ಪುರುಷ ಸಂಜೀವಪ್ಪನ ಕಾಲದಲ್ಲಿ ರಚಿತವಾದ ಚಿತ್ರಗಳ ಆಧಾರದಿಂದ


೧೧. ಡಾ.ಕರೀಗೌಡ ಬೀಚನಹಳ್ಳಿ (ಸಂ) : ಕರಕುಶಲ ಕಲೆಗಳು ಪುಟ ೧೩೮
೧೨. ಆರ್.ಎಚ್.ಕುಲಕರ್ಣಿ : ಕಿನ್ನಾಳ ಚಿತ್ರಕಲೆ, ಪುಟ ೧೦

ಶೈಲಿಯ ಬೆಳವಣಿಗೆಯನ್ನು ಗುರುತಿಸಬಹುದು. ಈ ಚಿತ್ರಗಳಲ್ಲಿ ಇರುವ ವರ್ಣ ಸಂಯೋಜನೆ ರೇಖಾ ವಿನ್ಯಾಸ ಎಲ್ಲವೂ ಹಂಪೆಯ ಪಂಪಾಪತಿ ದೇವಸ್ಥಾನ ಮತ್ತು ಲೇಪಾಕ್ಷಿಯ ಕಲ್ಯಾಣ ಮಂಟಪದ ಭಿತ್ತಿ ಚಿತ್ರಗಳಲ್ಲಿ ತೀರ ಹತ್ತಿರವಾದುದು ಎನಿಸುತ್ತದೆ. ಕಿನ್ನಾಳ ಶೈಲಿ ವಿಜಯನಗರ ಶೈಲಿಯ ಆನಂತರದ ಬೆಳವಣಿಗೆ ಎಂಬುದು ಸ್ಪಷ್ಟವಾಗುತ್ತದೆ.

ಕ್ರಿ.ಶ. ೧೪ನೇ ಶತಮಾನದಲ್ಲಿ ವಿಜಯನಗರ ರಾಜ್ಯ ಸ್ಥಾಪಿತವಾದ ಮೇಲೆ ಮೊದಲು ಒಂದು ಶತಮಾನವನ್ನು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯ ಜೊತೆಗೆ ರಾಜ್ಯ ವಿಸ್ತಾರ ಇವುಗಳಿಗೆ ಮಾತ್ರ ಗಮನವನ್ನು ಕೇಂದ್ರಿಕರಿಸಿದ್ದು ಗೊತ್ತಾಗುತ್ತದೆ. ೧೫ನೇ ಶತಮಾನದಲ್ಲಿ ದೇವಸ್ಥಾನದ ಬೆಳವಣಿಗೆ ಕಲಾತ್ಮಕ ಚಟುವಟಿಕೆಗಳಿಗೆ ರಾಜರು ಗಮನವನ್ನು ಕೇಂದ್ರಿಕರಿಸಿದರು. ೧೫ನೇ ಶತಮಾನದಲ್ಲಿ ದೇವಸ್ಥಾನದ ಬೆಳವಣಿಗೆ ಕಲಾತ್ಮಕ ಚಟುವಟಿಕೆಗಳು ನಡೆದರೂ ಅವುಗಳೆಲ್ಲವೂ ಚೋಳರಿಂದ ಸ್ವೀಕರಿಸಿದ ಅಂಶಗಳ ಮೇಲೆ ಆಧರಿಸಿವೆ.[೧೩] ಐತಿಹಾಸಿಕವಾಗಿ ವಿಜಯನಗರದ್ದೇ ಶೈಲಿ ಎಂದು ಹೇಳುವಂತಹ ಬೆಳವಣಿಗೆಯನ್ನು ೧೬ನೇ ಶತಮಾನದ ಅರಂಭದಲ್ಲಿ ಕಾಣುತ್ತೇವೆ. ಕೃಷ್ಣದೇವರಾಯನ ಕಾಲದಲ್ಲಿ ಪಂಪಾಪತಿ ದೇವಸ್ಥಾನದ ಭಿತ್ತಿಚಿತ್ರಗಳು, ಅಚ್ಯುತರಾಯನ ಕಾಲದಲ್ಲಿ ಲೇಪಾಕ್ಷಿಯ ಭಿತ್ತಿಚಿತ್ರಗಳು ರಚಿತವಾದವು ಆ ಕಾಲದಲ್ಲಿಯೇ ದಖನಿ ಮಿನಿಯೇಚರ್‌ಗಳ ಚಿತ್ರಣವೂ ಆರಂಭವಾಗಿತ್ತು. ವಿಜಯನಗರದ ಚಿತ್ರಗಳು ಚೋಳರ ಪ್ರೇರಣೆಯಿಂದ ರಚಿತವಾಗಿದ್ದರೂ ಬೇರೆ ಅಂಶಗಳು ಕಾಣಿಸಿಕೊಳ್ಳುವುದನ್ನು ಗಮನಿಸಬಹುದು.[೧೪] ಇಲ್ಲಿ ಚಿತ್ರಗಾರ ಕುಟುಂಬದ ಕಲಾವಿದರು ಇದ್ದರೇ ಎಂಬ ಪ್ರಶ್ನೆ ಬರುತ್ತದೆ. 'ಚಿತ್ರಗಾರ' 'ಚಿತ್ರಕಾರ' ಎಂಬ ಹೆಸರು ಚಿತ್ರ ರಚಿಸುವವ ಎಂಬ ಅರ್ಥಕೊಡುತ್ತದೆ. ಇದೇ ಹೆಸರಿನಿಂದ ಉತ್ತರಭಾರತದಲ್ಲೂ ಹಲವಾರು ಮನೆತನಗಳು ಇದ್ದದ್ದು ಕಂಡುಬರುತ್ತದೆ. ದೇಶ ಕಾಲ ಇವುಗಳ ಭೇದವಿಲ್ಲದೆ ಆಯಾ ಪ್ರದೇಶದಲ್ಲಿ ಚಿತ್ರ ರಚನೆಯ ಕಲಾವಿದರನ್ನು ವಂಶಪರಂಪರೆಯಿಂದ ಚಿತ್ರರಚನೆಯನ್ನು ರೂಢಿಸಿಕೊಂಡು ಬಂದಿರುವುದರಿಂದ 'ಚಿತ್ರಗಾರ' ಎಂದು ಕರೆದಿರಬಹುದು. ವಿಜಯನಗರ ಕಾಲದಲ್ಲಿ ಕಿನ್ನಾಳ ಚಿತ್ರಗಾರ ಕಲಾವಿದರ ಪೂರ್ವಜರು ಇದ್ದು ಅಂದಿನ ಭಿತ್ತಿ ಚಿತ್ರಗಳ ನಿರ್ಮಾಣದಲ್ಲಿ ಕೆಲಸ ಮಾಡಿದ್ದರಬಹುದು ಮತ್ತು ಅಲಂಕಾರಿಕ ಕೆಲಸವನ್ನು ಮಾಡುತ್ತಾ ದೇವಸ್ಥಾನಗಳಿಗೆ ರಥಗಳಿಗೆ ಮತ್ತು ಉತ್ಸವಕ್ಕೆ ಬೇಕಾಗುವ ವಿಗ್ರಹಗಳನ್ನು ಒದಗಿಸುತ್ತಿದ್ದಿರಬಹುದು ಅಥವಾ ಹಲವಾರು ಭಿತ್ತಿ ಚಿತ್ರಗಳ ಚಿತ್ರಣದಲ್ಲಿ ಪಾಲ್ಗೊಂಡಿದ್ದಿರಬಹುದು.

ವಿಜಯನಗರ ಪತನದ ನಂತರದ ಒಂದು ಶತಮಾನ ನಮಗೆ ಸರಿಯಾಗಿ ಅವರ ಇತಿಹಾಸದ ಬಗ್ಗೆ ತಿಳಿಯುವುದಿಲ್ಲ. ಕಿನ್ನಾಳ ಕುಟುಂಬದ ಮೂಲ ಪುರುಷನಾದ ಸಂಜೀವಪ್ಪ ಚಿತ್ರಗಾರ ಎಂಬಾತನ ತಂದೆ ಕಿನ್ನಾಳಕ್ಕೆ ವಿಜಯನಗರ ಪತನದ ನಂತರ ಬಂದನೆಂದು ಪ್ರತೀತಿ ಇದೆ. ಅಂದರೆ ಸುಮಾರು ೧೮೦ ಅಥವಾ ೨೦೦ ವರ್ಷಗಳ ಇತಿಹಾಸ ನಮಗೆ ಸಿಗುತ್ತದೆ. ಕ್ರಿಶ ೧೬೬೫ ವಿಜಯನಗರದ ಪತನದ ನಂತರ ಈ ಕಲಾವಿದರುಗಳಿಗೆ ಆಶ್ರಯ ಸಿಗಲಿಲ್ಲ.[೧೫] ಹೀಗಾಗಿ ಹಲವಾರು ಭಾಗಗಳಿಗೆ ವಲಸೆ ಹೋಗಬೇಕಾಯಿತು. ಈ ರೀತಿ ಬಂದವರಲ್ಲಿ ಕಿನ್ನಾಳ ಹರಪನಹಳ್ಳಿ, ಕಂಪ್ಲಿ, ಕನಕಗಿರಿ ಈ ಊರುಗಳಲ್ಲಿ ನೆಲೆ ನಿಂತರು. ಇವರಿಂದ ಬೆಳೆದ ಚಿಕ್ಕ ಚಿಕ್ಕ ಕುಟುಂಬಗಳು ಕರ್ನಾಟಕದ ಹಲವಾರು ಭಾಗಗಳಲ್ಲಿ 'ಚಿತ್ರಗಾರ' ಎಂಬ ಹೆಸರಿನಿಂದಲೇ ಇಂದಿಗೂ ಇದ್ದಾರೆ. ಕಿನ್ನಾಳಕ್ಕೆ ಬಂದ ಕಲಾವಿದರಿಗೆ ಆಗ ಸಹಾಯ ಪೋಷಣೆ ಸಿಕ್ಕಿದ್ದು ಕೊಪ್ಪಳದ ನವಾಬರಿಂದ ಮತ್ತು ಕಿನ್ನಾಳದ ದೇಸಾಯಿರಿಂದ. ನಂತರದಲ್ಲಿ ಹೈದ್ರಾಬಾದ್ ನಿಜಾಮರ ಕಾಲದಲ್ಲಿ ಸಾಲರಜಂಗ್ ನಿಜಾಮಿಯವರ ಕಾಲದಲ್ಲಿ ಪೋಷಣೆ, ಪ್ರೇರಣೆ ದೊರೆಯಿತು.

ಆಗಿನ ಕೊಪ್ಪಳವು ಹೈದ್ರಾಬಾದ್ ನವಾಬರ ಆಡಳಿತದಲ್ಲಿದ್ದು ಹೈದ್ರಾಬಾದಿನ ನಿಜಾಮರ ಕಾಲದಲ್ಲಿ ನವಾಬ್‌ಸಾಲಾರ್ ಜಂಗ್‌ರವರಿಂದ ಕಿನ್ನಾಳ ಕಲಾವಿದರಿಗೆ ಪೋಷಣೆ ಪ್ರೇರಣೆ ದೊರೆಕಿತು. ಸ್ವತಃ ಕಲಾಪ್ರೇಮಿಯಾಗಿದ್ದ ನವಾಬಸಾಲಾರ ಜಂಗರವರು ಕಿನ್ನಾಳ ಕಲಾವಿದರನ್ನು ಹೈದ್ರಾಬಾದಿಗೆ ಕರೆಯಿಸಿಕೊಂಡು ಅವರಿಂದ ರಚಿತವಾದ ಕಲಾಕೃತಿಗಳನ್ನು ಅಲ್ಲಿಯ ವಸ್ತು ಸಂಗ್ರಹಾಲಯದಲ್ಲಿ ಕಾಯ್ದಿರಿಸಿಕೊಂಡನಲ್ಲದೇ ಕಿನ್ನಾಳ ಕಲಾವಿದರಿಗೆ ಬಂಗಾರ ಪದಕವನ್ನಿತ್ತು ಗೌರವಿಸಿ ಭೂಮಿಯನ್ನು ಜಹಗೀರ ಹಾಕಿ ಕೊಟ್ಟಿದ್ದು ಕಂಡುಬರುತ್ತದೆ. ಹೀಗಾಗಿ ಈ ಕಿನ್ನಾಳ ಕಲೆಯಲ್ಲಿ ಬಂಗಾರ ವರ್ಣದ ಪರ್ಶಿಯನ್ ಹೊಂಬಣ್ಣದ ಮೆರಗು ಇದ್ದು ಹಿಂದೂ ಮುಸ್ಲಿಂ ಶೈಲಿಯ ಸಾಮರಸ್ಯವಿರುವುದು ಎದ್ದು ಕಾಣುತ್ತದೆ. ಕಾಲಾನಂತರದಲ್ಲಿ ಆ ರಾಜಾಶ್ರಯ ತಪ್ಪಿತು.



೧೩. ಡಾ.ಎಸ್.ಸಿ.ಪಾಟೀಲ (ಸಂ) : ನಿಜದ ನೆಲೆ, ಪುಟ ೧೩೯

೧೪. ಆರ್.ಎಚ್.ಕುಲಕರ್ಣಿ : ಕಿನ್ನಾಳ ಚಿತ್ರಕಲೆ, ಪುಟ ೧೫

೧೫. ಆರ್.ಎಚ್.ಕುಲಕರ್ಣಿ : ಕಿನ್ನಾಳ ಚಿತ್ರಕಲೆ, ಪುಟ ೧೬

ಸಂಜೀವಪ್ಪನ ತಂದೆ ವಿಜಯನಗರದಿಂದ ಕಿನ್ನಾಳಕ್ಕೆ ಬಂದರು ಕೇವಲ ನಾಲ್ಕು ತಲೆಮಾರುಗಳ ಇತಿಹಾಸ ನಮಗೆ ಸಿಗುತ್ತದೆ. ಅಂದರೆ ಕ್ರಿ.ಶ.೧೬೬೫ರ ನಂತರ ಈ ಕಲಾವಿದರು ಸುಮಾರು ೧೦೦ವರ್ಷಗಳ ಕಾಲ ಎಲ್ಲಿ ಇದ್ದರು ಎಂಬುದು ಪ್ರಶ್ನೆ ಒಂದಂತೂ ನಿಜ. ಈ ಕಲಾವಿದರು ಬೇಡಿಕೆ ಇದ್ದ ವಸ್ತುಗಳನ್ನು ಮಾಡಿ ಮಾರಿ ಬಂದುದರಲ್ಲಿ ಜೀವನ ಸಾಗಿಸುತ್ತಿದ್ದರು. ಕೊನೆಗೆ ಎಂದೋ ಜಹಗೀರಾಗಿ ಕೊಟ್ಟಿದ್ದ ಈಗಿನ ಕಿನ್ನಾಳದಲ್ಲಿನ ಜಮೀನುಗಳನ್ನು ನೋಡಿಕೊಳ್ಳಲು ಬಂದು ಅಲ್ಲಿಯೇ ನೆಲೆಸಿದ್ದಿರಬಹುದು.[೧೬]

ಸಂಜೀವಪ್ಪನ ಮೂರು ಮಕ್ಕಳಲ್ಲಿ ರಂಗಪ್ಪ, ವೆಂಕಪ್ಪ, ಇಬ್ಬರಿಗೆ ಸಂತಾನವಾಗಿ ಇವರ ವಂಶ ಬೆಳೆಯಿತು. ಮತ್ತೆ ರಂಗಪ್ಪನಿಗೆ ಶೀನಪ್ಪ ಎಂಬ ಮಗನಿಂದ ಆರು ಮಕ್ಕಳಾದರು ಇವರ ಚಿತ್ರಗಾರಿಕೆಯಲ್ಲಿ ಪಸಿದ್ಧರಾಗಿದ್ದಾರೆ. ಅದೇ ರೀತಿ ವೆಂಕಪ್ಪನಿಗೆ ರಾಮಚಂದ್ರಪ್ಪ ಕೃಷ್ಣಪ್ಪ ಎಂಬ ಇಬ್ಬರು ಮಕ್ಕಳಾಗಿ ಮತ್ತೆ ರಾಮಚಂದ್ರನಿಗೆ ಮೂರು ಜನ ಕೃಷ್ಣಪ್ಪನಿಗೆ ಮೂರು ಜನ ಮಕ್ಕಳಾದರು, ಮತ್ತೆ ಇವರಿಗೆ ಸಂತತಿಯಾಗಿ ವಂಶ ಬೆಳೆಯುತ್ತಾ ಇಂದು ಕಿನ್ನಾಳ ಚಿತ್ರಗಾರ ವಂಶವಾಹಿನಿಯಲ್ಲಿ ಹೆಸರು ಮಾಡಿದ್ದಾರೆ. ಸಂಜೀವಪ್ಪನ ಫಲಶೃತಿಯಾಗಿ ಮಹತ್ವದ ಚಿತ್ರಗಾರಿಕೆಗೆ ಬೆಲೆ ತಂದ ನಾರಾಯಣಪ್ಪ, ಕಾಂತಪ್ಪ, ಸೋಮಣ್ಣ ಹಾಗೂ ರಾಮಚಂದ್ರಪ್ಪನ ಮಕ್ಕಳಾದ ಏಕಪ್ಪ, ವಾಸಪ್ಪ ಪ್ರಮುಖ ಕಲಾವಿದರಾಗಿದ್ದಾರೆ.

ಕಿನ್ನಾಳ ಶೈಲಿ ಕ್ರಿ.ಶ.೧೬೦೦ ರಿಂದ ಕ್ರಿ.ಶ.೧೮೦೦ ರ ಮಧ್ಯೆ ಬೆಳೆದು ಉತ್ತಮ ಸ್ಥಿತಿಯನ್ನು ಹೊಂದಿತೆಂದು ನಿರ್ಧರಿಸಬಹುದು. ಕ್ರಿ.ಶ.೧೮೦೦ ರ ನಂತರ ಹಲವಾರು ಬದಲಾವಣೆಗಳನ್ನು ಹೊಂದಿ ಬೆಳೆಯಿತು. ಕ್ರಿ.ಶ.೧೫೦೦ ರಿಂದ ಕ್ರಿ.ಶ.೧೫೪೦ರ ಅವಧಿಯಲ್ಲಿ ಪಂಪಾಪತಿ ಲೇಪಾಕ್ಷಿ ಭಿತ್ತಿಚಿತ್ರಗಳು ನಿರ್ಮಿತವಾದವು.[೧೭] ಆ ಭಿತ್ತಿಚಿತ್ರಗಳ ತದ್ರೂಪ ಆಕೃತಿಗಳು ಮರದ ಹಲಗೆಯ ಕಿನ್ನಾಳ ಶೈಲಿಯಲ್ಲಿ ಕಾಣಬರುತ್ತವೆ. ಹೀಗಾಗಿ ಕಿನ್ನಾಳ ಶೈಲಿ ವಿಜಯನಗರದಿಂದ ಬೆಳೆದು ಬಂದದ್ದು ಸ್ಪಷ್ಟವಾಗಿ ಹೇಳಬಹುದು. ಹೀಗೆ ಒಂದು ದೊಡ್ಡ ಪರಂಪರೆಯನ್ನು ಹೊಂದಿದ ಕಿನ್ನಾಳ ಕರಕುಶಲ ಸಂಪ್ರದಾಯ ೧೮ನೆಯ ಶತಮಾನದ ಹೊತ್ತಿಗೆ ಅನೇಕ ಏಳು ಬೀಳುಗಳನ್ನು ಹೊಂದಿ ಅಲ್ಲಲ್ಲಿ ಜೀವ ಹಿಡಿದುಕೊಂಡು ಬದುಕಿದೆ.

ಪ್ರಾಚೀನ ಕಾಲದಿಂದಲೂ ಶ್ರೀಮಂತವಾಗಿ ಬೆಳೆದುಕೊಂಡು ಬಂದ ಕರಕುಶಲಗಳ ಪರಂಪರೆಯು ಹೇಗೋ ಉಳಿದುಕೊಂಡು ಬರುತ್ತಿದ್ದದ್ದು ೧೮ನೇ ಶತಮಾನದ ಉತ್ತರಾರ್ಧದ ಹೊತ್ತಿಗೆ ಇನ್ನೂ ಶೋಚನೀಯ ಸ್ಥಿತಿಯನ್ನು ಕಾಣುವಂತಾಯಿತು. ಅದಕ್ಕೆ ಕೈಗಾರಿಕಾ ಕ್ರಾಂತಿ ಕಾರಣವಾಯಿತು. ಇದು ಕರಕುಶಲಿಗರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಮತಷ್ಟು ಹದಗೆಡಿಸಿತ್ತೆನ್ನಬಹುದು. ಭಾರತೀಯ ಅಷ್ಟೇಅಲ್ಲ ಪ್ರಪಂಚದ ಕರಕುಶಲ ಕಲೆಗಳ ಬೆಳವಣಿಗೆಯಲ್ಲಿ ಸಂದಿಗ್ಧತೆಯ ಅವಧಿಯಾಗಿದೆ. ಆಗಲೇ ಕುಶಲಕಲೆಗಳ ಉಳಿವಿಗಾಗಿ ಪ್ರಪಂಚದ ಅನೇಕ ದೇಶಗಳಲ್ಲಿ ಈ ಬಗೆಗೆ ಜಾಗೃತಿ ಉಂಟಾಗಿ ಅಲ್ಲಲ್ಲಿ ಚಳುವಳಿಯ ಸ್ವರೂಪವನ್ನು ಪಡೆಯಿತು. ಇದು ೨೦ನೇ ಶತಮಾನದ ಪ್ರಾರಂಭಕ್ಕೆ ವ್ಯಾಪಕವಾದ ಪ್ರಚಾರ ಪಡೆದು ಕೈಗಾರಿಕಾ ಸಂಘ ಸಂಸ್ಥೆಗಳ ಹುಟ್ಟಿಗೆ ಕಾರಣವಾಯಿತು.

ಕ್ರಿ.ಶ.೧೮೦೦ರ ನಂತರ ಆರಂಭ ಆದ ಬ್ರಿಟೀಷ ಕಲಾಶಿಕ್ಷಣದ ಅಭ್ಯಾಸ ಕಿನ್ನಾಳ ಕಲಾವಿದರುಗಳಿಗೆ ಇರಲಿಲ್ಲ. ಅಲ್ಲದೆ ಮೈಸೂರು ತಂಜಾವೂರಗಳಂತೆ ಈ ಶೈಲಿಯ ಕಲಾ ಅಭ್ಯಾಸದ ಶಾಲೆಗಳಿರಲಿಲ್ಲ. ಬ್ರಿಟಿಷರ ಆಡಳಿತ ಧೋರಣೆ ಯಂತ್ರೋಪಕರಣಗಳ ಬಳಕೆಯ ಹೆಚ್ಚಳಿಕೆ, ಯಂತ್ರನಿರ್ಮಿತ ವಸ್ತುಗಳ ಬಗೆಗೆ ಜನರಲ್ಲಿ ಬೆಳೆದು ಬಂದಮೋಹ ಇವು ಭಾರತದಲ್ಲಿನ ಕರಕುಶಲ ಕಲೆಗಳಿಗೆ ಮಾರಕವಾಗಿ ನಿಂತವು ಸ್ವಾತಂತ್ರ್ಯಪೂರ್ವದ ಅವಧಿಯಲ್ಲಿ ಕರಕುಶಲಕಲಾ ಪರಂಪರೆಗೆ ಪುನಶ್ಚೇತನ ಕಾರ್ಯಗಳು ಆರಂಭವಾಗಿದ್ದರೂ ಅದು ಸಫಲವಾಗಿಲ್ಲ. ಸ್ವತಂತ್ರ ನಂತರ ೧೯೫೧ರ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಪ್ರಾಶಸ್ತ್ಯ ಸಿಕ್ಕಿತು. ಆಗ ಕರಕುಶಲ ಕಲೆಗಳ ಅಭಿವೃದ್ಧಿಯ ಕಾರ್ಯವನ್ನು ಖಾದಿ ಗ್ರಾಮೋದ್ಯೋಗ ಮಂಡಳಿಗೆ ವಹಿಸಿಕೊಡಲಾಯಿತು.[೧೮]

ಆ ನಂತರದಲ್ಲಿ ಕರಕುಶಲ ಕಲೆಗಳ ಅಭಿವೃದ್ಧಿಗಾಗಿ ವಿಶೇಷ ಸಂಸ್ಥೆಗಳು ಸ್ಥಾಪನೆಗೊಂಡವು. ಗಾಂಧೀಜಿಯವರ ಸ್ವದೇಶಿ ಚಳುವಳಿಯು ಕುಶಲಕಲಾಪರಂಪರೆ ಹಾಗೂ ಕರಕುಶಲಿಗಳ ಸ್ಥಿತಿಗತಿಯತ್ತ ಲಕ್ಷ್ಯವನ್ನು ಸೆಳೆದಿತ್ತು, ಕಿನ್ನಾಳ ಕಲಾಶೈಲಿ ಇದೆ ಎಂದು ಎಷ್ಟೋ ಜನರಿಗೆ ಗೊತ್ತಿಲ್ಲ. ೧೯೫೨ರಲ್ಲಿ ಭಾರತ ಸರಕಾರವು

೧೬. ಆರ್.ಎಚ್.ಕುಲಕರ್ಣಿ : ಕಿನ್ನಾಳ ಚಿತ್ರಕಲೆ, ಪುಟ ೧೬
೧೭. ಆರ್.ಎಚ್.ಕುಲಕರ್ಣಿ : ಕಿನ್ನಾಳ ಚಿತ್ರಕಲೆ, ಪುಟ ೧೦
೧೮. ಡಾ.ಕರೀಗೌಡ ಬೀಚನಹಳ್ಳಿ (ಸಂ) : ಕರಕುಶಲ ಕಲೆಗಳು ಪುಟ ೯


ಅಖಿಲ ಭಾರತ ಕರಕುಶಲ ಮಂಡಳಿಯನ್ನು ಸ್ಥಾಪನೆ ಮಾಡಿತು ಕಮಲಾದೇವಿ ಚಟ್ಟೋಪಾಧ್ಯಾಯ ಅವರನ್ನು ಈ ಮಂಡಳಿಯ ಅಧ್ಯಕ್ಷರನ್ನಾಗಿ ಮಾಡಲಾಯಿತು. ಆಗ ಭಾರತದಾದ್ಯಂತ ಇದ್ದ ಕರಕುಶಲ ಕಲೆಗಳ-ಮತ್ತು ಕುಶಲ ಕರ್ಮಿಗಳ ಕುರಿತಾದ ಯಾವ ಮಾಹಿತಿಯು ಲಭ್ಯವಿರಲಿಲ್ಲ. ಇದನ್ನು ಲಕ್ಷಿಸಿದ ಅವರು ಭಾರತದುದ್ದಕ್ಕೂ ಸಮೀಕ್ಷೆ ಕೈಗೊಂಡಾಗ ಒಂದೊಂದು ಪ್ರದೇಶದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕರಕುಶಲಿಗರು ಮತ್ತು ಅನೇಕ ಕರಕುಶಲ ಕಲೆಗಳು ಇದ್ದದ್ದು ಕಂಡು ಬಂದಿತು. ಕಿನ್ನಾಳ ಕಲೆಯನ್ನು ಆಗ ಗುರುತಿಸಲಾಯಿತು. ಅಂದಿನಿಂದ ಈ ಕಲೆ ರಾಷ್ಟ್ರಮಟ್ಟದಲ್ಲಿ ಒಂದು ವಿಶಿಷ್ಟ ಕರಕುಶಲಕಲೆಯಾಗಿ ಪ್ರೋತ್ಸಾಹ ಪಡೆಯುತ್ತಿದೆ.

ಅನೇಕ ಪ್ರತಿಭಾವಂತ ಕಲಾವಿದರಿಗೆ ಪ್ರಶಸ್ತಿ ಗೌರವಗಳು ವೃತ್ತಿ ನಿರತರಿಗೆ ಆರ್ಥಿಕ ಸಹಾಯ ಸಹಕಾರಗಳು ಲಭಿಸಹತ್ತಿದವು. ರಾಜ್ಯ ಸರ್ಕಾರವು ಕೂಡ ಈ ಕಲಾವಿದರಿಗೆ ನೆರವು ನೀಡುವ ದಿಶೆಯಲ್ಲಿ ಯೋಜನೆಗಳನ್ನು ರೂಪಿಸಿ ಈ ಕಲೆಯ ಬೆಳವಣಿಗೆಗೆ ಮಾರುಕಟ್ಟೆ, ಕಚ್ಚಾ ಸಾಮಗ್ರಿಗಳ ಪೂರೈಕೆ ಸಾಲದ ಸೌಲಭ್ಯವನ್ನು ನೀಡಿ ಪ್ರೋತ್ಸಾಹಿಸುವ ಕಾರ್ಯ ನಡೆಯುತ್ತಿದೆ. ಆದರೆ ಅದು ಇನ್ನೂ ವ್ಯಾಪಕವಾಗಿ ಆಗಬೇಕಾದ ಕಾರ್ಯವಾಗಿದೆ.

*****

ಅಧ್ಯಾಯ : ಮೂರು

ಕಿನ್ನಾಳ ಹಸ್ತಪ್ರತಿ ಚಿತ್ರಗಳು



ಚಿತ್ರಕಲೆಯಲ್ಲಿ ರೇಖಾಚಿತ್ರಗಳದ್ದು ಅತ್ಯಂತ ಮುಖ್ಯ ಪಾತ್ರ. ಯಾವುದೇ ಒಂದು ಆಕೃತಿಯ ರಚನೆ ಆಗಬೇಕಾದರೆ ರೇಖೆಗಳೇ ಅದನ್ನು ನಿರ್ದೇಶಿಸಬೇಕು. ರೇಖೆಗಳ ವಿವಿಧ ರೂಪಗಳೊಡನೆ, ಭಾವ ಭಂಗಿಗಳೊಡನೆ ಲಾಲಿತ್ಯದಿಂದ ಕೂಡಿ ಆಕೃತಿಯನ್ನು ತಯಾರಿಸುತ್ತದೆ. ರೇಖೆಗಳಲ್ಲಿನ ಸತ್ವ ಮತ್ತು ಜೀವಂತಿಕೆ ಆಕೃತಿಗಳನ್ನು ಆಕರ್ಷಕವಾಗಿಸುವುದಲ್ಲಿ ಅವುಗಳಲ್ಲಿ ಅಘಾದವಾದ ಚಾಲನೆಯನ್ನು ತುಂಬುತ್ತವೆ. ಆದುದರಿಂದ ರೇಖಾಚಿತ್ರಗಳು ಯಾವುದೇ ಆಕೃತಿಗಳ ಜೀವಾಳವಾಗಿದೆ. ಚಿತ್ರಕಲೆಯ ಯಾವುದೇ ಮಾಧ್ಯಮವಿರಲಿ ಉದಾಹರಣೆಗೆ : ತೈಲ, ಜಲ, ಭಿತ್ತಿ, ಚಿಕಣಿ ಚಿತ್ರ ಇತ್ಯಾದಿ ಎಲ್ಲ ಮಾಧ್ಯಮಗಳಲ್ಲಿ ರಚಿತವಾಗುವ ಪ್ರತಿಯೊಂದು ಆಕೃತಿಗೂ ರೇಖಾಚಿತ್ರಗಳೇ ಮೂಲ ಆಧಾರ, ಹೀಗಾಗಿ ರೇಖೆಗೆ ರೇಖಾಚಿತ್ರಗಳ ಬೆಳವಣಿಗೆಯಲ್ಲಿ ಅತ್ಯಂತ ಮಹತ್ವದ ವೈಶಿಷ್ಟ್ಯತೆ ಇದೆ.

ಐತಿಹಾಸಿಕವಾಗಿ ಭಾರತದಲ್ಲಿ ಚಿತ್ರಕಲೆಯ ಬೆಳವಣಿಗೆಯನ್ನು ಗಮನಿಸಿದರೆ ಅವುಗಳಲ್ಲಿನ ವಿವಿಧ ಹಂತಗಳು ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ. ಪ್ರಾಚೀನ ಮಾನವನ ಗುಹಾಂತರ ಚಿತ್ರಗಳಿಂದ ಹಿಡಿದು ಅಜಂತಾ, ಭಾಗನಲ್ಲಿಯ ಬೌದ್ಧ ಧರ್ಮದ ಚಿತ್ರಗಳು, ಬಾದಾಮಿ, ಎಲ್ಲೋರಾಗಳಲ್ಲಿನ ವೈದಿಕ ಸಂಪ್ರದಾಯದ ಭಿತ್ತಿ ಚಿತ್ರಗಳು, ದಕ್ಷಿಣದ ತಂಜಾವೂರು, ಸಿತ್ತನವಾಸಲ್ ಇತ್ಯಾದಿ ಸ್ಥಳಗಳ ಭಿತ್ತಿ ಚಿತ್ರಗಳಲ್ಲಿಯ ಆಕೃತಿಗಳೆಲ್ಲವೂ ರೇಖಾ ಪ್ರಧಾನವಾದವುಗಳು. ಇನ್ನೂ ನಂತರದ ಕಾಲದಲ್ಲಿಯ ಮೊಘಲ್, ರಾಜಸ್ಥಾನಿ, ಪಹಾಡಿ ಚಿತ್ರಗಳು ಮತ್ತು ಜೈನ್ ತಾಳೆಗರಿ ಹಸ್ತಪ್ರತಿಗಳಲ್ಲಿನ ಚಿತ್ರಗಳು ಹಾಗೂ ವಿಜಯನಗರ ಕಾಲದ ಹಂಪಿ, ಲೇಪಾಕ್ಷಿ ಮತ್ತು ತಾಡಪತ್ರಿಗಳಲ್ಲಿನ ಭಿತ್ತಿಚಿತ್ರಗಳೆಲ್ಲವೂ ರೇಖಾ ಪ್ರಧಾನವಾದ ಚಿತ್ರಗಳೆ. ಈ ಮೇಲೆ ಹೆಸರಿಸಿದ ಉದಾಹರಣೆಗಳಲ್ಲಿ ಆಕೃತಿಗಳ ಬಾಹ್ಯರೇಖೆಗಳಾಗಿ ಅವುಗಳಲ್ಲಿನ ವಿವಿಧ ಅಂಶಗಳನ್ನು ತೋರಿಸುವ ಸಾಧನೆಗಳಾಗಿ ರೇಖೆಗಳೇ ಆಕೃತಿಗಳ ನಿರ್ದಿಷ್ಟರೂಪ ರೇಷೆಗಳನ್ನು ನಿರ್ದೇಶಿಸುತ್ತದೆ.

ರೇಖೆಗಳು ಚಿತ್ರಕಲೆಯ ತಾಯಿ ಬೇರು ಇದ್ದಂತೆ. ರೇಖೆಗಳಿಲ್ಲದೇ ಯಾವುದೇ ಚಿತ್ರಗಳು ಪೂರ್ಣಗೊಳ್ಳುವುದಿಲ್ಲ ಕಿನ್ನಾಳ ಚಿತ್ರಕಲಾವಿದರಲ್ಲಿ ಹಿಂದಿನಿಂದಲೂ ಉಳಿದುಕೊಂಡು ಬಂದಿರುವ ಅಭ್ಯಾಸ ಪುಸ್ತಕದಿಂದ ರೇಖಾ ಚಿತ್ರಗಳನ್ನು ಆಯ್ದುಕೊಳ್ಳಲಾಗಿದೆ. ಕಿನ್ನಾಳದ ಕಲಾವಿದರಲ್ಲಿ ಇರುವ ಪ್ರಸ್ತುತ ರೇಖಾ ಚಿತ್ರಗಳು ಕೆಲವು ತಲೆಮಾರಿನಿಂದ ಉಳಿದುಕೊಂಡು ಬಂದಿವೆ. ಈ ರೇಖಾ ಚಿತ್ರಗಳನ್ನು ನಾವು ಗಮನವಿಟ್ಟು ನೋಡಿದಾಗ ಅವುಗಳು ಕೇವಲ ಆಕೃತಿಗಳನ್ನು ರೂಪಿಸುವ ರೇಖೇಗಳೇ ಪ್ರಬುದ್ಧವಾದ ಮತ್ತು ತಾಂತ್ರಿಕವಾಗಿ ಉನ್ನತಿಹೊಂದಿದ ಚಿತ್ರಶೈಲಿಯ ಗುರುತಾಗಿವೆ. ರೇಖೆಗಳ ವಿನ್ಯಾಸ, ಅವುಗಳಲ್ಲಿನ ಸ್ಪಷ್ಟವಾದ ಮತ್ತು ನೇರವಾದ ಅಭಿವ್ಯಕ್ತ ರೂಪ, ನುರಿತ ಕಲಾವಿದನ ಕೈಯಿಂದ ಮೂಡಿ ಬಂದಿದೆ. ಆಕೃತಿಗಳನ್ನು ರಚಿಸುವಾಗ ಬೇರೆ ಬೇರೆ ಆಕೃತಿಗಳಲ್ಲಿನ ಆಂತರಿಕ ಸಂಬಂಧ ತಾಂತ್ರಿಕವಾಗಿ ಕಲಾವಿದ ಅವುಗಳನ್ನು ಸಂಯೋಜಿಸಿರುವ ರೀತಿ ಅತ್ಯಂತ ಸ್ಪಷ್ಟವಾಗಿ ಮೂಡಿ ಬಂದಿದೆ. ವಿಜಯನಗರ ಕಾಲದ ಕಲೆಯ ಅತ್ಯುತ್ತಮ ಮತ್ತು ಪ್ರೌಢವಾದ ಶೈಲಿಯನ್ನು



೧. ವಿಷ್ಣುವಿನ ದಶಾವತಾರದ ಚಿತ್ರ



೨. ರಾಮ-ರಾವಣರ ಯುದ್ಧ



೩. ಕಾಮ-ರತಿ

ಹೊಂದಿದ ಕೃತಿಗಳೆಂದರೆ ಹಂಪಿ ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದ ಒಳ ಮಾಳಿಗೆಯಲ್ಲಿನ ಭಿತ್ತಿ ಚಿತ್ರಗಳೇ ಎಂದು ಹೇಳಬಹುದು. ಅವುಗಳನ್ನು ಮೂಲ ದೃಷ್ಟಾಂತಗಳನ್ನಾಗಿಟ್ಟು ಕಿನ್ನಾಳದ ರೇಖಾಚಿತ್ರಗಳನ್ನು ತುಲನಾತ್ಮಕವಾಗಿ ನೋಡಿದರೆ ಅವುಗಳಲ್ಲಿನ ಸ್ಪಷ್ಟ ಸಂಬಂಧಗಳನ್ನು ಗುರುತಿಸಬಹುದು.

ಕಿನ್ನಾಳದ ರೇಖಾಚಿತ್ರಗಳು ವೈವಿಧ್ಯಮಯವಾದ ವಿಷಯ ವ್ಯಾಪ್ತಿಯನ್ನು ಹೊಂದಿವೆ. ದಶಾವತಾರ, ರಾಮಾಯಣ, ಮಹಾಭಾರತ, ರಾಜ – ರಾಣಿಯರ ಚಿತ್ರಗಳು ದೈನಂದಿನ ಬದುಕಿನ ವಿವಿಧ ಮಜಲುಗಳನ್ನು ಬಿಂಬಿಸುವ ಚಿತ್ರಗಳು. ಹಾಗೂ ಕಾಮ ರತಿಯರ ಮತ್ತು ಬಿಡಿ ಬಿಡಿಯಾಗಿ ಇನ್ನಿತರ ದೇವ ದೇವತಿಯರ ಚಿತ್ರಗಳು ರೇಖಾ ಕೃತಿಯಲ್ಲಿ ಮೂಡಿ ಬಂದಿವೆ. ಈ ಮೇಲಿನ ಚಿತ್ರಗಳು ಒಂದು ಭಾಗವಾದರೆ, ದೇವಾಲಯಗಳ ಗೋಡೆಗಳ, ಗರ್ಭಗೃಹದ ಬಾಗಿಲುಗಳು ಮತ್ತು ಉತ್ಸವ ಮೂರ್ತಿಗಳನ್ನು ಇಡುವ ಪಲ್ಲಕ್ಕಿ, ಕಿನ್ನಾಳ ಚೌಕಿ, ಗೋಡೆ ಫಲಕಗಳ ಹಲಗೆಗಳ ಮೇಲೆ ಅಲಂಕರಣಗಳಾಗಿ ಚಿತ್ರಣವಾಗಿವೆ. ಮೊದಲನೆಯ ಚಿತ್ರಗಳು ಚಿಕಣಿ ಚಿತ್ರಗಳ ಹಾಗೆ ಶಿಷ್ಟ ಶೈಲಿಯನ್ನು ಹೊಂದಿವೆ. ಈ ಚಿತ್ರಗಳೆಲ್ಲವು ವಿಭಿನ್ನ ವಿಷಯ ಮತ್ತು ಆ ಕಾಲದ ಶೈಲಿಗಳನ್ನು ಹೊಂದಿ ಬೆಳದಿವೆ. ಅವರ ಈಗಿನ ಕಲಾಕೃತಿಗಳನ್ನು ಮತ್ತು ಅವರಲ್ಲಿ ಸಂಗ್ರಹವಾಗಿರುವ ಕೆಲವೇ ಕೆಲವು ಕಲಾಕೃತಿಗಳನ್ನು ಗಮನಿಸಿದಾಗ ಮತ್ತು ಪ್ರಸ್ತುತವಾಗಿ ವಿಶ್ಲೇಷಣೆ ಮಾಡುತ್ತಿರುವ ರೇಖಾ ಚಿತ್ರಗಳನ್ನು ಅವುಗಳ ಶೈಲಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ವಿಜಯನಗರ ಕಾಲದ ಕಲಾತ್ಮಕ ಅಂಶಗಳನ್ನು ಸ್ಪಷ್ಟವಾಗಿ ಮೈಗೂಡಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ರೇಖಾಚಿತ್ರಗಳನ್ನು ಅಭ್ಯಸಿಸುವ ಮೊದಲು ಪ್ರಸ್ತುತ ಚಿತ್ರಗಳ ಕಲಾವಿದನ ಕುರಿತು ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಈ ಚಿತ್ರಗಳನ್ನು ರಚಿಸಿದ ಕಲಾವಿದನ ಹೆಸರು ಎಲ್ಲೂ ದಾಖಲಾಗಿಲ್ಲ. ಆದರೆ ಒಂದಂತು ನಿಜ. ಈ ಕಲಾಕೃತಿಗಳು ಮೂಲದಲ್ಲೇ ರಚಿತವಾದವು. ಈ ಪುಸ್ತಕ ಅವರ ಪೂರ್ವಜರಿಂದ ತಮಗೆ ದೊರಕಿತೆಂದು ತಿಳಿಸುತ್ತಾರೆ. ಶ್ರೀ ನಾರಾಯಣಪ್ಪ ಚಿತ್ರಗಾರ ಪ್ರತಿಯೊಂದು ರೇಖಾ ಚಿತ್ರಗಳ ಗುಣಮಟ್ಟ ರೇಖಾವಿನ್ಯಾಸದ ಶೈಲಿಯನ್ನು ಗಮನಿಸಿದಾಗ ಇವು ವಿಜಯನಗರದ ಪತನದ ನಂತರದಲ್ಲಿ ರಚಿತವಾದವು ಎಂದೂ ಸ್ಪಷ್ಟವಾಗಿ ಹೇಳಬಹುದು. ರೇಖಾ ಚಿತ್ರಗಳು ಚಿಕಣಿ ಚಿತ್ರಗಳ ಮಾದರಿಯಲ್ಲಿದೆ. ನೀಳವಾದ ಸ್ಪಷ್ಟವಾದ ಮತ್ತು ತೀಕ್ಷ್ಣವಾದ ರೇಖೆಗಳು ಆಕೃತಿಗಳನ್ನು ರಚಿಸುತ್ತವೆ. ನಯವಾದ ಮತ್ತು ಸೂಕ್ಷ್ಮವಾದ ರೇಖೆಗಳನ್ನು ಸ್ಪಷ್ಟವಾಗಿ ವಿವಿಧ ಭಂಗಿಗಳನ್ನು, ರೂಪಗಳನ್ನು, ರೂಪಗಳನ್ನು ಮತ್ತು ಅಂಗಗಳ ಭಾಗಗಳನ್ನು ಸಮರಸವಾಗಿ ನಿರ್ದೇಶಿಸುತ್ತವೆ. ರೇಖಾ ಚಿತ್ರಗಳು ಸೂಕ್ಷ್ಮವಾದ ಕುಂಚದಿಂದ ಅಥವಾ ಚೂಪಾದ ಲೇಖನಿಯಿಂದ ರಚಿತವಾಗಿವೆ.

ಆಕೃತಿಗಳು ರೇಖಾಕೃತಿಗಳಾಗಿದ್ದರೂ ರೇಖೆಗಳ ಪರಿಪೂರ್ಣತೆ ಅವುಗಳಲ್ಲಿ ಘನತ್ವವನ್ನು ಮತ್ತು ಚಾಲನ ಶಕ್ತಿಯನ್ನು ತುಂಬುತ್ತದೆ. ಆಕೃತಿಗಳ ನೇರವಾದ ಸಂಯೋಜನೆ ಹಾವ – ಭಾವಗಳ್ನನು ತುಂಬಿ, ಒಂದಕ್ಕೊಂದು ಸಂಭಾಷಿಸುವಂತಿವೆ. ಸಂಯೋಜನೆಯಲ್ಲಿ ಕಂಡುಬರುವ ಚಾಲನೆಯ ಸ್ಥಿರವನ್ನು ಗುರುತಿಸುವ ಮತ್ತು ನಿಯಂತ್ರಿಸುವ ಶಕ್ತಿ ಮತ್ತೊಂದು ಆಕೃತಿಯೊಂದಿಗಿನ ಸಂಬಂಧಗಳಲ್ಲಿ ಆಂತರಿಕ ಮತ್ತು ಬಾಹ್ಯವಾದ ನೇರ ಹೊಂದಾಣಿಕೆ ಕಂಡುಬರುತ್ತದೆ.

ಕಲಾಕೃತಿಗಳ ಕುರಿತ ಚರ್ಚೆ


೧. ವಿಷ್ಣುವಿನ ದಶಾವತಾರದ ರೇಖಾಚಿತ್ರ

ಈ ರೇಖಾಚಿತ್ರದಲ್ಲಿ ಒಂದಾದ ನಂತರ ಒಂದರಂತೆ ವಿಷ್ಣುವಿನ ಬೇರೆ ಬೇರೆ ಅವತಾರಗಳ ಸಾಲು ರೇಖಾಚಿತ್ರಗಳು ಒಂದೇ ಪಟ್ಟಿಯಲ್ಲಿ ಕಂಡು ಬರುತ್ತವೆ. ಮೈಭಾಗದಲ್ಲಿ ಯಕ್ಷ–ಯಕ್ಷಿಯರ ಪುಷ್ಪವೃಷ್ಟಿಯನ್ನು ಮಾಡುವ ಸನ್ನಿವೇಶ ಸೊಗಸಾಗಿದೆ. ಪ್ರತಿಯೊಂದು ಅವತಾರದ ಚಿತ್ರಗಳಿಗೂ ಮೇಲೆ ಕಮಾನಿನಂತೆ ರಚಿಸಿ ಚಿತ್ರಗಳು ಪ್ರತ್ಯೇಕವಾಗಿ ಕಾಣುವಂತೆ ಚಿತ್ರಿಸಿದ್ದಾರೆ. ಮೇಲ್ಭಾಗದಲ್ಲಿ ಮತ್ತು ಕೆಲಭಾಗದ ಪಟ್ಟಿಯಲ್ಲಿ ಅಲಂಕಾರಿಕ ನಕ್ಷೆಗಳನ್ನು ಸುರುಳಿಯಾಕಾರದಲ್ಲಿ ಚಿತ್ರಿಸಲಾಗಿದೆ.

ಒಂದನೆಯ ರೇಖಾ ಚಿತ್ರ ಮತ್ಸ್ಯಾವತಾರವನ್ನು ತೋರಿಸುತ್ತದೆ. ಕೆಳಗಿನ ಭಾಗ ಮೀನಿನಿಂದ ಕೂಡಿದ್ದು ಹಿಂದಿನ ಕೈಗಳು ಚಕ್ರಗಳಿಂದ ಕೂಡಿದೆ. ಮುಂದಿನ ಕೈ ವರದ ಹಸ್ತವಾಗಿದೆ. ನೀರಿನಲ್ಲಿ ಇರುವ ಹಾಗೆ ತೋರಿಸಲು ನೀರಿನ ಅಲೆಗಳನ್ನು ಚಿತ್ರಿಸಲಾಗಿದೆ.



೪. ಕುರುಕ್ಷೇತ್ರ ಯದ್ಧ



೫. ತ್ರಿಪುರ ಸುಂದರಿ



೬. ವಾಮನ ಅವತಾರ

ಎರಡನೆಯ ರೇಖಾಚಿತ್ರವು ಕೂರ್ಮಾವತಾರದ ಚಿತ್ರ ಇದೂ ಕೂಡಾ ಮೇಲಿನಂತೆ ದೇಹದ ಕೆಳಭಾಗವು ಆಮೆಯ (ಕೋರ್ಮ) ದೇಹವನ್ನು ಹೊಂದಿದ್ದು ಈ ಚಿತ್ರದಲ್ಲಿ ಸಹ ಕೈಗಳಲ್ಲಿ ಶಂಖ, ಚಕ್ರಗಳನ್ನು ರಚಿಸಲಾಗಿದೆ. ಮುಂದಿನ ಕೈಗಳು ವರದಹಸ್ತಗಳಿಂದ ಕೂಡಿದೆ.

ಮೂರನೆಯ ಅವತಾರವಾಗಿರುವ ವರಾಹವತಾರದ ರೇಖಾ ಚಿತ್ರವಾಗಿದೆ. ವಿಷ್ಣುವು ವರಾಹದ ಮುಖವನ್ನು ಹೊಂದಿದ ಕೈಗಳಲ್ಲಿ ಶಂಖ ಚಕ್ರಧಾರಿಯಾಗಿದ್ದಾನೆ. ವರಾಹಮುಖದಲ್ಲಿ ಕೋರೆಹಲ್ಲಿನಿಂದ ಪ್ರಥ್ವಿಯನ್ನು ಹಿಡಿದಿರುವ ದೃಶ್ಯ ಮತ್ತು ಎಡಗಾಲು ನಾಗರ ಹಾವಿನ ಹೆಡೆಯ ಮೇಲೆ ಇದೆ.

ನಾಲ್ಕನೆಯ ಚಿತ್ರ ಉಗ್ರನರಸಿಂಹನ ಅವತಾರವಾಗಿದೆ. ಈ ಅವತಾರದಲ್ಲಿ ವಿಷ್ಣುವು ಸಿಂಹದ ಮುಖವನ್ನು ಹೊಂದಿದ್ದು, ಉಗ್ರರೂಪ ತಾಳಿದ ವಿಷ್ಣುವಿನ ಕೈಗಳಲ್ಲಿ ಶಂಖ, ಚಕ್ರಧಾರಿಯಾಗಿದ್ದಾನೆ. ಮುಂದಿನ ಎರಡು ಕೈಗಳಲ್ಲಿ ಒಂದು ಅಭಯ ಹಸ್ತ, ಒಂದು ವರದ ಹಸ್ತದಿಂದ ಕೂಡಿದ ರೇಖಾಚಿತ್ರವಾಗಿದೆ. ಮುಖವು ಸಿಂಹ ಘರ್ಜನೆಯಿಂದ ಕೂಡಿದೆ. ಕಣ್ಣುಗಳ ವಿಶಾಲವಾಗಿವೆ.

ಐದನೆಯದಾಗಿ ವಾಮನವತಾರ. ಈ ಅವತಾರವು ಬಲಿಚಕ್ರವರ್ತಿಯ ಗರ್ವವನ್ನು ಹರಣ ಮಾಡುವ ಸಲುವಾಗಿ ಮಹಾವಿಷ್ಣುವು ಒಬ್ಬ ಬ್ರಾಹ್ಮಣ ಬಾಲಕನ ರೂಪದಲ್ಲಿ ಬಂದು ಬಲಿ ಚಕ್ರವರ್ತಿಗೆ ದಾನವನ್ನು ಕೇಳುತ್ತಾನೆ. ಕೇವಲ ಮೂರು ಪಾದ ಜಾಗವನ್ನು ಭಿಕ್ಷೆ ನೀಡು ಎಂದು ಕೇಳಿ ಒಂದು ಪಾದವನ್ನು ಭೂಮಿಗೆ ಇನ್ನೊಂದು ಪಾದವನ್ನು ಆಕಾಶಕ್ಕೆ ಇಡುತ್ತಾನೆ. ಈ ಚಿತ್ರದಲ್ಲಿ ಮುಖವು ಮುಗ್ಧ ಬಾಲಕನಂತಿದ್ದು ಒಂದು ಕೈಯಲ್ಲಿ ಕಮಂಡಲವನ್ನು ಹಿಡಿದಿದ್ದಾನೆ. ಇನ್ನೊಂದು ಕೈಯಲ್ಲಿ ಛತ್ರಿಯನ್ನು ಹಿಡಿದುಕೊಂಡಿದ್ದಾನೆ.

ಆರನೆಯದಾಗಿ ಪರುಶುರಾಮನ ಅವತಾರವಾಗಿದೆ. ಜಮದಗ್ನಿ ಮತ್ತು ರೇಣುಕಾ ದೇವಿಯ ಮಗನಾಗಿ ಜನಿಸಿ ತಂದೆಯ ಆಜ್ಞೆಯಂತೆ ತಾಯಿಯ ಶಿರವನ್ನು ಕಡಿದು ತಂದೆಯ ವರ ಪ್ರಸಾದದಿಂದ ಮತ್ತೆ ತಾಯಿಯನ್ನು ಮರಳಿ ಪಡೆದಿರುವ ಈ ಪರಶುರಾಮನ ಅವತಾರದ ಮುಂದೆ ಕಾರ್ತಿಕ ವೀರಾರ್ಜುನನ್ನು ಸಂಹರಿಸಿದ ಸಂದರ್ಭ ಅತ್ಯಂತ ಉಗ್ರವಾಗಿದೆ. ಬಲಗೈಯಲ್ಲಿ ಪರುಶವನ್ನು ಹಿಡಿದು ಎಡಗೈಯನ್ನು ಸೊಂಟದ ಮೇಲೆ ಇರಿಸಿ ನಿಂತ ಭಂಗಿ ಅತ್ಯಂತ ಗಂಭೀರವಾಗಿದೆ.

ಏಳನೆಯದಾಗಿ ಶ್ರೀರಾಮ ಅವತಾರವಾಗಿದೆ. ರಾಮನು ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಬಲಗೈ ವರದ ಹಸ್ತವನ್ನು ಹೊಂದಿದ್ದಾನೆ. ಬೆನ್ನಿಗೆ ಬಾಣ ಬತ್ತಳಿಕೆಯನ್ನು ಧರಿಸಿದ್ದಾನೆ.

ಎಂಟನೆಯದಾಗಿ ಕೃಷ್ಣಾವತಾರ. ಈ ಅವತಾರದ ಚಿತ್ರದಲ್ಲಿ ಕೃಷ್ಣನ ಬಲಗೈ ವರದ ಹಸ್ತವಾಗಿದೆ. ಎಡಗೈಯನ್ನು ಸೊಂಟದ ಮೇಲೆ ಇರಿಸಿಕೊಂಡ ಭಂಗಿಯಲ್ಲಿದೆ. ಶ್ರೀ ಕೃಷ್ಣನು ಈ ಅವತಾರದಲ್ಲಿ ಅಧರ್ಮಿಗಳಾದ ಕೌರವರನ್ನು ಪಾಂಡವರಿಂದ ನಾಶಪಡಿಸಿ ಧರ್ಮಕರ್ತರಾದ ಪಾಂಡವರಿಗೆ ರಾಜ್ಯವನ್ನು ದೊರಕಿಸಿ ಕೊಟ್ಟು ಅರ್ಜುನನಿಗೆ ಭಗವದ್ಗೀತೆಯನ್ನು ಬೋಧನೆ ಮಾಡಿದ ಅವತಾರವಾಗಿದೆ.

ಒಂಬತ್ತನೆಯದಾಗಿ ಬೌದ್ಧಾವತಾರವಾಗಿದೆ. ಮಹಾವಿಷ್ಣು ಈ ಅವತಾರದಲ್ಲಿ ಜ್ಞಾನ ಮುದ್ರೆಯ ಕೈಯನ್ನು ಹೊಂದಿದ್ದು ಇನ್ನೊಂದು ಕೈ ಯೋಗ ಮುದ್ರೆಯಲ್ಲಿದೆ. ತಲೆಯ ಮೇಲೆ ಗುಂಗುರು ಕೂದಲು ಕಾಣಬಹುದು.

ಹತ್ತನೆಯದು ಕಲ್ಕಿ ಅವತಾರವಾಗಿದೆ. ಕುದುರೆಯ ಮುಖವುಳ್ಳದ್ದಾಗಿದೆ. ಖಡ್ಗ ಗುರಾಣಿಯನ್ನು ಎರಡೂ ಕೈಯಲ್ಲಿ ಹಿಡಿದುಕೊಂಡು ನಿಂತಿರುವ ಭಂಗಿಯಲ್ಲಿದೆ. ಈ ಎಲ್ಲ ಅವತಾರಗಳಲ್ಲಿ ವಿಷ್ಣು ಕಿವಿಯಲ್ಲಿ ಕರ್ಣಕುಂಡಲವನ್ನು ಧರಿಸಿದ್ದಾನೆ. ಮತ್ತು ಹಣೆಯ ಮೇಲೆ ನಾಮವನ್ನು ಕಾಣಬಹುದು. ಈ ಎಲ್ಲ ಅವತಾರಗಳ ಚಿತ್ರಗಳು ಒಂದೇ ಎತ್ತರದ ಗಾತ್ರದಲ್ಲಿ ಮೂಡಿಬಂದಿವೆ.

೨. ರಾಮ ರಾವಣರ ಯುದ್ಧ

ರಾಮ – ರಾವಣರ ಯುದ್ಧದ ಸನ್ನಿವೇಶವನ್ನು ತೋರಿಸುವ ಚಿತ್ರ ಇದಾಗಿದೆ. ದಶಮುಖ, ಇಪ್ಪತ್ತು ಕೈಗಳುಳ್ಳ ರಾವಣನು ಎಲ್ಲ ಕೈಗಳಲ್ಲೂ ಆಯುಧಗಳನ್ನು ಹಿಡಿದು ರಾಮನಿಗೆ ಎದುರಾಗಿ ಬಿಲ್ಲಿಗೆ ಬಾಣ ಹೂಡುತ್ತಿದ್ದಾನೆ. ರಾಮನೂ ಕೂಡ ಬಿಲ್ಲಿಗೆ ಹಿಂದೆ ಏರಿಸಿದ್ದಾನೆ. ರಾವಣನಿಗಿಂತಲೂ ಕೊಂಚ ದೊಡ್ಡದಾಗಿ ರಾಮನ ಆಕೃತಿಯನ್ನು ಚಿತ್ರಿಸಿದ್ದು, ರಾಮನ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಕಲಾವಿದನು ರಾಮನಿಗೂ ಮೀಸೆ ಅಂಟಿಸಿ ಅವನನ್ನು ಕ್ಷತ್ರಿಯ ಯೋಧನನ್ನಾಗಿ ಚಿತ್ರಿಸಿದ್ದಾನೆ.



೭. ನರಸಿಂಹ ಅವತಾರ



೮. ಶ್ರೀ ವೆಂಕಟೇಶ್ವರ

೩. ಕಾಮ – ರತಿ

ವಸಂತೋತ್ಸವವನ್ನು ತೋರಿಸುವ ಚಿತ್ರದಲ್ಲಿ ಕಾಮ–ರತಿಯರು ಕಬ್ಬಿನ ಬಿಲ್ಲುಗಳನ್ನು ಮತ್ತು ಅದಕ್ಕೆ ಹೂಬಾಣಗಳನ್ನು ಹೂಡಿ ಎದುರುಬಿದಿರಾಗಿ ವಸಂತೋತ್ಸವದ ಆಚರಣೆಗೆ ನಿಂತಿದ್ದಾರೆ. ಕಾಮನು ರಥಾರೂಢನಾಗಿದ್ದು, ರಥವನ್ನು ಅವನ ವಾಹನವಾದ ಗಿಳಿ ಎಳೆಯುತ್ತಿದೆ. ಆಕೃತಿಗಳಲ್ಲಿನ ಮುಮ್ಮುಖ ಚಾಲನೆ ಸಂಯೋಜನೆಯಲ್ಲಿ ತೀವ್ರಕತರವಾದ ಚಟುವಟಿಕೆಯೊಂದನ್ನು ಮೂಡಿಸುತ್ತದೆ. ಹೋಳಿ ಹಬ್ಬದ ಸಂದರ್ಭದಲ್ಲಿ ಕಿನ್ನಾಳದ ಕಲಾವಿದರು ಕಾಮನ ವಿಗ್ರಹಗಳನ್ನು ಮಾಡುವ ಪರಿಪಾಠ ಇನ್ನೂ ಇದೆ.

೪. ಕುರುಕ್ಷೇತ್ರ ಯುದ್ಧ

ಮಹಾಭಾರತದಲ್ಲಿ ಬರುವ ಕುರುಕ್ಷೇತ್ರ ಯುದ್ಧದ ರೇಖಾಚಿತ್ರ ಇದಾಗಿದೆ. ಕೃಷ್ಣ–ಭೀಷ್ಮ ಎಂದು ಹೆಸರಿಸುವ ಆಕೃತಿಗಳ ಸಂಯೋಜನೆ ಈ ಯುದ್ಧದ ಚಿತ್ರಣದಲ್ಲಿ ಪ್ರಾಯಶಃ ಇಡೀ ಚಿತ್ರದ ಕೇಂದ್ರವಾಸ್ತುವಾಗುತ್ತದೆ. ಚಿತ್ರದ ಬಲಬದಿಯಲ್ಲಿ ಅರ್ಜುನ ಕೃಷ್ಣ ಸಾರಥಿಯಾದ ರಥದಲ್ಲಿ ನಿಂತು ಯುದ್ಧ ಮಾಡುತ್ತಿದ್ದಾನೆ. ಅವನಿಗೆ ಎದುರಾಗಿ ಕೌರವ ಎಂದು ಬರೆದಿರುವ ಕಡೆಗೆ ಭೀಷ್ಮ ಯುದ್ಧ ಮಾಡುತ್ತಿದ್ದಾನೆ. ಎರಡೂ ರಥಗಳಿಗ ಜೋಡಿ ಅಶ್ವಗಳು ಯುದ್ಧದ ಅರ್ಭಟದಲ್ಲಿ ಭಾಗವಹಿಸಿದಂತೆ ಮುಂಗಾಲುಗಳನ್ನು ಮೇಲಕ್ಕೆತ್ತಿ ಹೊಂಕರಿಸುತ್ತಿವೆ. ಕೌರವನ ರಥದ ಕೆಳಭಾಗದಲ್ಲಿ ಈರ್ವರು ಕತ್ತಿಗಳಿಂದ ಯುದ್ಧ ಮಾಡುತ್ತಿದ್ದಾರೆ. ಇನ್ನು ಭೀಷ್ಮ ಕೃಷ್ಣರ ಆಕೃತಿಗಳನ್ನು ಗಮನಿಸೋಣ. ಕೃಷ್ಣ ಬಲಗೈಯಲ್ಲಿ ಸುದರ್ಶನವನ್ನು ಪ್ರಯೋಗ ಮುದ್ರೆಯಲ್ಲಿ ಹಿಡಿದು ಪಾಂಚಜನ್ಯವನ್ನು ಊದುತ್ತಾ ರಥದಿಂದ ಜಿಗಿದು ತಾನೇ ಯುದ್ಧ ಮಾಡಲು ತನ್ನೆಲ್ಲ ವೇಗದಿಂದ ಇಳಿದು ಬರುವಂತಿದೆ. ಆದರೆ ಆ ವೇಗಕ್ಕೆ ಕಡಿವಾಣ ಹಾಕಿದಂತೆ, ಭೀಷ್ಮ ತನ್ನೆರಡು ಕೈಗಳನ್ನು ಮಡಿಚಿ ಕೃಷ್ಣನಿಗೆ ತಲೆಬಾಗಿ ನಿಂತಿದ್ದಾನೆ.

ಆಕೃತಿಗಳಲ್ಲಿನ ಆಂತರಿಕ ಸಂಬಂಧ ಮತ್ತು ಚಾಲನೆ ಅವುಗಳಲ್ಲಿ ಅತ್ಯಂತ ತೀವ್ರತೆಯನ್ನು ತುಂಬುತ್ತದೆ. ಒಂದೇ ಪಾರ್ಶ್ವದ ಮುಖಗಳು ಮುಂದಿನಿಂದ ನೋಡಿದಾಗ ಕಾಣುವಂತೆ ಚಿತ್ರಿಸಲಾಗಿದೆ. ಮೇಲಿನ ಸ್ಥರದಲ್ಲಿ ಮೊದಲು ಬಾಣಗಳನ್ನು ಗಮನಿಸಬೇಕು. ಬಾಣಗಳು ಅರ್ಧ ಅರ್ಜುನನ ಕಡೆಗೆ ಇದ್ದರೆ ಇನ್ನರ್ಧ ಕೌರವನ (ಭೀಷ್ಮ) ಕಡೆಮುಖ ಮಾಡಿವೆ. ಇದರಲ್ಲಿ ಅರ್ಜುನನ ಮತ್ತು ಭೀಷ್ಮನ ಬಾಣಗಳನ್ನು ಗುರುತಿಸಬಹುದು.

೫. ತ್ರಿಪುರ ಸುಂದರಿ

ಈ ರೇಖಾಚಿತ್ರದಲ್ಲಿ ಇರುವ ತ್ರಿಪುರ ಸುಂದರಿಯ ನೀಳವಾದ ರೇಖೆಗಳು ರಚನಾ ಶೈಲಿ, ತ್ರಿಪುರ ಸುಂದರಿ ದೇವಿಯು ಪುರಾತನ ಮೇಲೆ ಕುಳಿತಿದ್ದು. ಪಾಶ, ಅಂಕುಶ, ಬಿಲ್ಲು ಮತ್ತು ಹೂವಿನ ಗೊಂಚಲಿನ ಹಾಗೆ ಇರುವ ಆಯುಧ ಮತ್ತು ದೇವಿಯು ಕುಳಿತು ಆಸನ ತೂಗು ಮಂಚದಂತೆ ಇದ್ದು ಚಿತ್ರದಲ್ಲಿ ಎರಡೂ ಬದಿಗೆ ಆಸನಕ್ಕೆ ಹೊಂದಿಕೊಂಡಂತೆ ಹಗ್ಗ ಕಟ್ಟಿ ಹಾಕಿದಂತೆ ರಚಿಸಲಾಗಿದೆ.

೬. ವಾಮನ ಅವತಾರ

ವಾಮನ ರೂಪಿಯಾದ ವಿಷ್ಣು ಶುದ್ಧ ಬ್ರಾಹ್ಮಣನ ಹಾಗೆ ಛತ್ರಿವೊಂದನ್ನು ಹಿಡಿದು ಮೂರು ಪಾದದಷ್ಟು ಭೂಮಿಯನ್ನು ಬಲಿ ಚಕ್ರವರ್ತಿಯಿಂದ ಪಡೆಯುತ್ತಿದ್ದಾನೆ. ಅವನ ಹಿಂದೆ ಅವನ ಹೆಂಡತಿ ಹಾಗೂ ಗುರು ಶುಕ್ರಾಚಾರಿಯನ್ನು ಚಿತ್ರಿಸಲಾಗಿದೆ. ಸುವಂತಿದೆ. ಅವಳ ಸೀರೆ, ಮೂಗುತಿ, ಇವು ಸ್ಪಷ್ಟವಾಗಿ ಸ್ಥಳೀಯ ಅಂಶಗಳೆಂದು ಹೇಳಬಹುದು. ಆಕೃತಿಗಳ ಕಾಲುಗಳು ಒಂದರ ಪಕ್ಕ ಒಂದು ಇರುವಂತೆ ಬಿಡಿಬಿಡಿಯಾಗಿ ಕೊಂಚ ಮುಂದೆ ಇರುವ ಹಾಗೆ ಚಿತ್ರಿಸಿ ಆಕೃತಿಗಳಲ್ಲಿ ಚಾಲನೆಯನ್ನು ಮೂಡಿಸುವ ಪ್ರಕ್ರಿಯೇ ಅತ್ಯಂತ ಆಕರ್ಷಕವಾದುದು. ವಾಮನ ಬಲಿ ಇಂದುಮತಿ ಮತ್ತು ಶುಕ್ರಾಚಾರಿ ಹೀಗೆ ನಾಲ್ಕೂ ಆಕೃತಿಗಳಲ್ಲಿನ ಸಂಬಂಧ ಅವರವರ ಕೈಗಳ ಮುದ್ರೆಯಿಂದ ಸ್ಪಷ್ಟವಾಗುತ್ತದೆ.

೭. ನರಸಿಂಹ ಅವತಾರ

ಈ ಚಿತ್ರದಲ್ಲಿ ನರಸಿಂಹನು ಕಂಬವನ್ನು ಸೀಳಿಕೊಂಡು ಹೊರಬರುವ ದೃಶ್ಯವನ್ನು ಚಿತ್ರಿಸಲಾಗಿದೆ. ನರಸಿಂಹನ ಬಲಗಡೆ ಹಿರಣ್ಯ ಕಶ್ಯಪ ಯುದ್ಧಕ್ಕೆ ಹೊರಡುವಂತೆ ನಿಂತಿದ್ದಾನೆ. ಎಡಗಡೆಯಲ್ಲಿ ಹಿರಣ್ಯಕಶಪುವಿನ ಮಗನಾದ ಪ್ರಹ್ಲಾದನು ಬಂದ ಸ್ವಾಮಿಯನ್ನು ವಿಸ್ಮಯವಾಗಿ ನೋಡುತ್ತಾ ಕೈಜೋಡಿಸಿ ನಿಂತಿದ್ದಾನೆ. ನರಸಿಂಹನು ದಶಭುಜಹೊಂದಿದ್ದು ಕೈಗಳಲ್ಲಿ ಗದೆ, ಖಡ್ಗ, ಡಾಲು,ಬಿಲ್ಲು ಬಾಣ ಶಂಖ ಚಕ್ರಗಳು ಇವೆ. ಕಿರಿಟದ ಹಿಂಭಾಗದಲ್ಲಿ



೯. ಅನಂತಶಯನ



೧೦. ಗರುಡಾರೂಢ ವಿಷ್ಣು

ಅಗ್ನಿಯ ಜ್ವಾಲೆಗಳನ್ನು ತೋರಿಸಿರುವುದು ಸಾಂಕೇತಿಕವಾಗಿ ಅವನು ಹೊರಬರುವ ರಭಸವನ್ನು ತೋರಿಸುತ್ತದೆ. ಇಲ್ಲಿ ನರಸಿಂಹನ ಮುಖ ವಿಜಯನಗರದ ಹಂಪೆಯ ಯಾವುದೇ ಪ್ರಮುಖ ದೇವಾಲಯಗಳಲ್ಲಿನ ನರಸಿಂಹನ ಶಿಲ್ಪದಂತೆ ಇದೆ. ದುಂಡನೆಯ ಕಣ್ಣುಗಳು, ಕಿರೀಟ, ಅಗಲವಾಗಿ ಮುಖವಾಡದಂತೆ ಕಾಣುವ ಮುಖ ಮತ್ತು ಕಣ್ಣುಗಳು ಶಿಲ್ಪದ ಪ್ರತಿಕೃತಿಯಂತೆ ಕಾಣುತ್ತದೆ.

೮. ಶ್ರೀ ವೆಂಕಟೇಶ್ವರ

ಶ್ರೀ ವೆಂಕಟೇಶ್ವರ ಸ್ಥಾನಕ ಸ್ಥಿತಿಯಲ್ಲಿ ನಿಂತಿದ್ದಾನೆ. ಮೇಲಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖಗಳನ್ನು ಹಿಡಿದಿದ್ದಾನೆ. ಎರಡೂ ಬದಿಯಲ್ಲಿ ಇರುವ ಶ್ರೀದೇವಿ ಮತ್ತು ಭೂದೇವಿಯರನ್ನು ಅಥವಾ ಲಕ್ಷ್ಮೀ ಪದ್ಮಾವತಿಯರನ್ನು ನೋಡಬಹುದು ಎಲ್ಲ ಆಕೃತಿಗಳನ್ನು ಪದ್ಮದ ಮೇಲೆ ನಿಂತಂತೆ ತೋರಿಸಲಾಗಿದೆ.

೯. ಅನಂತಶಯನ

ಅನಂತಶಯನನ್ನು ಐದು ಹೆಡೆ ಶೇಷಸರ್ಪದ ಮೇಲೆ ಮಲಗಿದಂತೆ ತೋರಿಸಲಾಗಿದೆ. ಇಲ್ಲಿ ಅನಂತನಿಗೆ ಎರಡೇ ಕೈಗಳು ಬಲಗೈಯನ್ನು ಮೇಲಕ್ಕೆ ಮಡಚಿದಂತೆ ತೋರಿಸಿ ಎಡಗೈಯನ್ನು ಕಾಲಮೇಲೆ ಆರಾಮವಾಗಿ ಇಟ್ಟ ರೀತಿಯಲ್ಲಿ ತೋರಿಸಲಾಗಿದೆ.

೧೦.ಲಕ್ಷ್ಮೀ ನಾರಾಯಣ (ಗುರುಡಾರೂಡ ವಿಷ್ಣು)

ಮನುಷ್ಯಾಕೃತಿಯ ಗರುಡನ ಭುಜದ ಮೇಲೆ ನಾರಾಯಣ ಮತ್ತು ಲಕ್ಷ್ಮೀ ಕುಳಿತ್ತಿದ್ದಾರೆ. ನಾರಾಯಣನು ತನ್ನ ಎರಡು ಕಾಲುಗಳನ್ನು ಗರುಡನ ಎರಡೂ ಭುಜದ ಮೇಲೆ ಹಾಕಿ ಮುಂದೆ ಇಳಿಬಿಟ್ಟಿದ್ದಾನೆ. ಎಡ ತೊಡೆಯ ಮೇಲೆ ಲಕ್ಷ್ಮೀ ಕುಳಿತಿದ್ದಾಳೆ. ಲಕ್ಷ್ಮೀಯು ತೊಡೆಯ ಮೇಲಿಂದ ಜಾರದಂತೆ ಅವಳನ್ನು ತನ್ನ ಎಡಗೈಯಿಂದ ಬಳಸಿ ಹಿಡಿದಿದ್ದಾನೆ. ಕೈಗಳಲ್ಲಿ ಶಂಖ, ಚಕ್ರ ಇವೆ. ಗರುಡನು ತನ್ನೆರಡು ಕೈಗಳಿಂದ ನಾರಾಯಣನ ಎರಡೂ ಪಾದಗಳನ್ನು ಹಿಡಿದಿದ್ದಾನೆ. ಚಿಕ್ಕದಾಗಿ ಹುರಿದಿರಿವಿದ ಮೀಸೆ ಮತ್ತು ಕೆನ್ನೆಯ ಮೇಲೆ ಉದ್ದವಾಗಿ ಮತ್ತು ಆಕರ್ಷಕವಾಗಿ ಕಾಣುವ ಕೂದಲಿನಕಟ್ಟು ಮತ್ತು ಮುಖದ ಹಾವಭಾವಗಳನ್ನು ಚಿತ್ರದಲ್ಲಿ ಕಾಣಬಹುದು.

೧೧. ಕೂರ್ಮಾವತಾರ

ಕೂರ್ಮಾವತಾರದ ಚಿತ್ರದಲ್ಲಿ ಒಂದೆಡೆ ಅರ್ಧ ಕೂರ್ಮದ ದೇಹವಿರುವ ವಿಷ್ಣುವನ್ನು ತೋರಿಸಿದ್ದಾರೆ. ಕೈಗಳಲ್ಲಿ ಶಂಖ ಚಕ್ರಗಳನ್ನು ರಚಿಸಲಾಗಿದೆ.

೧೨. ವರಾಹ ಅವತಾರ

ವರಹಾ ಅವತಾರದಲ್ಲಿ ಚಿತ್ರದಲ್ಲಿ ಚತುರ್ಬಾಹು ಹಸ್ತನಾದ ವರಾಹ ಗದೆ ಗುರಾಣಿ ಹಿಡಿದು ಶಂಖ ಚಕ್ರಧರನಾಗಿ ಹಿರಣ್ಯಾಕ್ಷನೂ ಕೂಡಾ ಗದೆ ಗುರಾಣಿಗಳನ್ನು ಹಿಡಿದು ಎದುರು ಬದುರಾಗಿ ಯುದ್ಧ ಮಾಡುತ್ತಿದ್ದಾರೆ. ಇಬ್ಬರದೂ ಮುಮ್ಮುಖ ಚಾಲನೆಯಿದೆ. ಅವರ ಆಕೃತಿಗಳು ಯುದ್ಧದಲ್ಲಿ ತಲ್ಲಿನರಾದ ಹಾವ ಭಾವವನ್ನು ನೋಡಬಹುದು.

೧೩. ಬಲರಾಮ ಅರ್ಜುನ

ಚಿತ್ರದ ಒಂದು ಬದಿಯಲ್ಲಿ ಬಲರಾಮ ತನ್ನ ಹಲ ಆಯುಧವನ್ನು ಹಿಡಿದು ಮುಂದುಗಡೆ ಯಾರನ್ನೋ ಶಿಕ್ಷಿಸಲು ಹೊರಟಂತೆ ಇದೆ. ಅವನಿಗೆದುರಾಗಿ ಅರ್ಜುನ ಕೈಮುಗಿದು ವಿನಮ್ರನಾಗಿ ಬಲರಾಮನನ್ನು ಶಾಂತಗೊಳಿಸುವ ವಿಧದಲ್ಲಿ ನಿಂತಿದ್ದಾನೆ.



೧೪. ಬೌದ್ಧಾವತಾರ

ಮೂರು ಆಕೃತಿಗಳ ಸಂಯೋಜನೆ ಇರುವ ಈ ರೇಖಾ ಚಿತ್ರದಲ್ಲಿ ಸರ್ವಾಲಂಕೃತನಾಗಿ ಮುಂದಿನ ಆಕೃತಿಗಳಿಗೆ ಸಾಂಕೇತವನ್ನು ನೀಡುತ್ತಿರುವಂತೆ ಬುದ್ಧ ನಿಂತಿದ್ದಾನೆ. ಮುಂದೆ ಕೈಮುಗಿದು ನಿಂತಿರುವ ಎರಡು ಆಕೃತಿಗಳು ದೇವತೆಗಳನ್ನು ನಿರ್ದೇಶಿಸುತ್ತವೆ. ಬುದ್ಧನ್ನು ಉಷ್ಣೀಷದೊಂದಿಗೆ ಮುನಿಯ ಹಾಗೆ ಕಲಾವಿದ ಚಿತ್ರಿಸಿದ್ದಾನೆ. ಮೂರು ಆಕೃತಿಗಳಲ್ಲಿ ಸಂಭಾಷಣೆ ನಡೆಸುತ್ತಿರುವಂತೆ ತೋರಿಸಲಾಗಿದೆ.



೧೧. ಕೂರ್ಮಾವತಾರ ಮತ್ತು ಸಮುದ್ರ ಮಥನ



೧೨. ವರಾಹ ಅವತಾರ




೧೩. ಬಲರಾಮ ಅರ್ಜುನ




೧೪. ಬೌದ್ಧಾವತಾರ



೧೫. ಶ್ರೀರಾಮ, ಲಕ್ಷ್ಮಣ, ಸೀತೆ ಮತ್ತು ಹನುಮಂತ



೧೬. ಕೃಷ್ಣ-ಯಶೋದಾ



೧೭. ಗೋಪಿಕಾ ವಸ್ತ್ರಾಪಹರಣ



೧೮. ಕೃಷ್ಣ

೧೬. ಶ್ರೀ ರಾಮ ಲಕ್ಷ್ಮಣ, ಸೀತಾ ಮತ್ತು ಹನುಮಂತ

ಈ ಚಿತ್ರದಲ್ಲಿ ಶ್ರೀರಾಮನನ್ನು ಕೋದಂಡ ಧರನಾಗಿ ಎಡಗಾಲ ಮುಂದೆ ಮೇಲಕ್ಕೆತ್ತಿ ನಿಂತಿರುವ ಭಂಗಿ, ಬಲಕ್ಕೆ ಲಕ್ಷ್ಮಣ ಮತ್ತು ಎಡಕ್ಕೆ ಸೀತಾ ಮತ್ತು ಹನುಮಂತರು ಕೈಮುಗಿದು ನಿಂತಿದ್ದಾರೆ. ಈ ಆಕೃತಿಗಳೆಲ್ಲವೂ ಶ್ರೀರಾಮನೆಡೆಗೆ ನೋಡುತ್ತಾ ನಿಂತಿರುವ ಹಾಗೆ ತೋರಿಸಲಾಗಿದೆ. ಇನ್ನು ಹನುಮಂತನ ಆಕೃತಿಯನ್ನು ವಿಜಯನಗರ ಕಾಲದ ಯಾವುದೇ ಹನುಮಂತನ ಶಿಲ್ಪದೊಂದಿಗೆ ಹೋಲಿಸಬಹುದು.

೧೭. ಕೃಷ್ಣ ಯಶೋಧಾ

ತುಂಟ ಕೃಷ್ಣನನ್ನು ಯಶೋಧೆಯು ಕುಟ್ಟುವ ಕಲ್ಲಿಗೆ ಅವನನ್ನು ಕಟ್ಟಿಹಾಕಿರುವ ದೃಶ್ಯ. ಕೈಯಲ್ಲಿ ಚಿಕ್ಕ ಕೋಲನ್ನು ಹಿಡಿದು ಅವನನ್ನು ಬೆದರಿಸಲು ನಿಂತಿದ್ದಾಳೆ. ಅವಳ ಹಿಂದೆಯೇ ಒಂದು ಮರದ ಚಿತ್ರವಿದ್ದು ಅದರಲ್ಲಿ ಇಬ್ಬರು ವ್ಯಕ್ತಿಗಳನ್ನು ತೋರಿಸಲಾಗಿದೆ. ಆ ವ್ಯಕ್ತಿಗಳು ಕೈಮುಗಿದು ಕೃಷ್ಣನ ಮಹಾನ್ ಶಕ್ತಿಯನ್ನು ನೋಡುತ್ತಿದ್ದಾರೆ.

೧೮. ಗೋಪಿಕಾ ವಸ್ತ್ರಾಪಹರಣ

ಕೃಷ್ಣನನ್ನು ಯುವ ವಯಸ್ಕಾನಾಗಿರುವಂತೆ ತೋರಿಸಲಾಗಿದೆ. ಮರವನ್ನು ಚಿತ್ರದ ಮಧ್ಯದಲ್ಲಿ ತೋರಿಸಲಾಗಿದ್ದು ವಿವಸ್ತ್ರರಾದ ಗೋಪಿಕೆಯರು ಕೃಷ್ಣನನ್ನು ತಮ್ಮ ಉಡುಗೆಗಳನ್ನು ಮರಳಿಸುವಂತೆ ಪ್ರಾರ್ಥಿಸುತ್ತಿದ್ದಾರೆ. ಕೃಷ್ಣನು ಮರದ ಮೇಲೆ ನಿಂತಿದ್ದಾನೆ. ಎರಡೂ ಕೈಗಳನ್ನು ಅಗಲಿಸಿ ಅವುಗಳಲ್ಲಿ ವಸ್ತ್ರಗಳನ್ನು ಹಿಡಿದುಗೋಪಿಕೆಯರಿಗೆ ತೋರಿಸುತ್ತಿದ್ದಾನೆ. ಇನ್ನುಳಿದ ವಸ್ತ್ರಗಳನ್ನು ಮರಕ್ಕೆ ನೇತುಹಾಕಿದ್ದಾನೆ. ಕೃಷ್ಣಲೀಲೆಯ ಇಂತಹ ಹಲವಾರು ಆಕೃತಿಗಳು ಹಂಪೆಯ ದೇವಾಲಯಗಳಲ್ಲಿ ಶಿಲ್ಪರೂಪದಲ್ಲಿ ಕೆತ್ತಲ್ಪಟ್ಟಿವೆ.ಅಲ್ಲದೆ ವಿರೂಪಾಕ್ಷ ದೇವಾಲಯದ ಭಿತ್ತಿಚಿತ್ರಗಳಲ್ಲಿ ಇರುವ ಗೋಪಿಕಾ ವಸ್ತ್ರಾಪಹರಣವನ್ನು ತೋರಿಸುವ ಚಿತ್ರವಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಹೀಗೆ ಕಿನ್ನಾಳ ಕಲಾವಿದರು ಮೂಲ ರೇಖಾಚಿತ್ರಗಳನ್ನು ಹಸ್ತಪ್ರತಿಗಳಲ್ಲಿ ಚಿತ್ರಿಸಿ ವರ್ಣಗಾರಿಕೆಯ ಸಂದರ್ಭದಲ್ಲಿ ಈ ಚಿತ್ರಗಳನ್ನು ನೋಡಿ ನಕಲು ಮಾಡುವ ಪ್ರವೃತ್ತಿಯನ್ನು ಹೊಂದಿದ್ದಾರೆ. ಈಗಲೂ ಅವರ ಹತ್ತಿರ ರೇಖಾಚಿತ್ರಗಳಿರುವ ಹಸ್ತಪ್ರತಿಗಳು ನೋಡಲು ಸಿಗುತ್ತವೆ. ಇಲ್ಲಿಯ ಚಿತ್ರಗಳನ್ನು ಅವರ ವೈಯಕ್ತಿಕ ಸಂಗ್ರಹದ ಮತ್ತು ಡಾ. ಆರ್.ಎಚ್.ಕುಲಕರ್ಣಿಯವರ ಲೇಖನದಿಂದ ಆಯ್ದುಕೊಳ್ಳಲಾಗಿದೆ.

*****

ಅಧ್ಯಾಯ : ನಾಲ್ಕು

ಕಿನ್ನಾಳ ಮರ ಮಾಧ್ಯಮದ ಕಲಾಕೃತಿಗಳು



ಗ್ರಾಮ ದೇವತೆ ದುರ್ಗಮ್ಮ

ಮರ ಮಾಧ್ಯಮದ ಹಿನ್ನೆಲೆ

ಮರ ಇಲ್ಲವೆ ಕಟ್ಟಿಗೆಯನ್ನು 'ದಿಮ್ಮೆ', 'ದಾರು' ಎಂದೂ ಕರೆಯಲಾಗುತ್ತದೆ. ಕಟ್ಟಿಗೆ ಅಥವಾ ಮರ ಮಾನವನ ಬದುಕಿನ ಒಂದು ಭಾಗವೇ ಆಗಿದೆ. ಅದು ಹಲವು ವಿಧಗಳಲ್ಲಿ ಹಲವು ಉದ್ದೇಶಗಳಿಗಾಗಿ ಸಾವಿರಾರು ವರ್ಷಗಳಿಂದ ಬಳಸಲ್ಪಡುತ್ತದೆ. ಜನನದಿಂದ ಮೊದಲ್ಗೊಂಡು ಮರಣದವರೆಗೆ ಅದು ಮನುಷ್ಯನಿಗೆ ಪ್ರಯೋಜನಕಾರಿ ತೊಟ್ಟಿಲು ಕಟ್ಟಿಗೆಯದು. ಶವದ ಪೆಟ್ಟಿಗೆಯು ಕೂಡ ಕಟ್ಟಿಗೆಯದೇ ಈ ಕಟ್ಟಿಗೆ ಅಥವಾ ಮರದ ಬಳಕೆ ಬಹು ಪ್ರಾಚೀನವಾದದು. ಮರದ ತೊಗಟೆ ಮನುಷ್ಯನ ಮೊದಲ ಉಡುಪಾಗಿತ್ತು. ಭಾರತದಲ್ಲಿ ಕಟ್ಟಿಗೆಯ ಕಲಾತ್ಮಕ ಬಳಕೆಯು ಸಿಂಧು ಸಂಸ್ಕೃತಿಯಷ್ಟು ಪ್ರಾಚೀನ. ಆಗ ಮರದ ಕಂಬ, ತೊಲೆಗಳಿಂದ ಕಟ್ಟಡ ರಚನೆಯಾಗುತ್ತಿತ್ತು. ಋಗ್ವೇದ, ಬೃಹತ್ ಸಂಹಿತೆ, ವಿಷ್ಣು ಧರ್ಮೋತ್ತರಗಳಲ್ಲಿ ಬಡಗಿ ಕಲೆಯ ಪ್ರಸ್ತಾಪವಿದೆ. ಮೌರ್ಯರ ಅರಮನೆಗಳು ಮರದಿಂದಲೇ ನಿರ್ಮಿತವಾದವುಗಳಾಗಿವೆ ಎಂದು ಹೇಳುತ್ತಾರೆ.

ಮರದ ಬಳಕೆಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನ ಕುರುಹು ಬಳ್ಳಾರಿ ಜಿಲ್ಲೆಯಲ್ಲಿ ಲಭ್ಯವಿದೆ. ಜಿಲ್ಲೆಯ ತೆಕ್ಕಲಕೋಟೆ ಮತ್ತು ಸಂಗನಕಲ್ಲುಗಳಲ್ಲಿ ನಡೆದ ಪುರಾತತ್ವ ಉತ್ಖನನದಿಂದ ನವ ಶಿಲಾಯುಗದ ಕಾಲದಲ್ಲಿ ವೃತ್ತಾಕಾರದ ವಾಸದ ಮನೆಗಳನ್ನು ಬಿದಿರಿನ ಕಂಬಗಳನ್ನು ಬಳಸಿ ನಿರ್ಮಿಸುತ್ತಿದ್ದ ಸಂಗತಿ ಬೆಳಕಿಗೆ ಬಂದಿದೆ. (ಕಾಲ ಕ್ರಿ.ಪೂ.ಸು.೧೫೦೦) ಇದು ಮನುಷ್ಯನ ತನ್ನ ನಿರ್ದಿಷ್ಟ ಉದ್ದೇಶವೊಂದಕ್ಕೆ ಮರವನ್ನು ಬಳಸಿಕೊಂಡ ಮೊದಲ ಉದಾಹರಣೆ[೧] ಎನ್ನಬಹುದು. ಮೇಗಾಸ್ತನಿಸ್ ತನ್ನ ಬರಹದಲ್ಲಿ ರಾಜಧಾನಿ ಪಾಲಿಬೋತ್ರದ (ಪಾಟಲೀಪುತ್ರ) ಗೋಡೆಗಳಲ್ಲಿ ಮರದಿಂದ ನಿರ್ಮಿಸಲಾಗಿತ್ತೆಂದು ತಿಳಿಸುತ್ತಾನೆ. ಪಾಟಲಿಪುತ್ರ ಇಂದಿನ ಬಿಹಾರದ ರಾಜಧಾನಿ ಪಟ್ನಾ ಆಗಿದ್ದು ಇಲ್ಲಿ ನಡೆದ ಉತ್ಖನನಗಳು ಮೆಗಸ್ತನೀಸನ ಹೇಳಿಕೆಯನ್ನು ಸಮರ್ಥಿಸಿವೆ. ಉತ್ಖನನದ ಸಂದರ್ಭದಲ್ಲಿ ಅರಮನೆಗೆ ಸಂಬಂಧಿಸಿದ ಮರದ ಅವಶೇಷಗಳು ದೊರೆತಿವೆ. ಒಟ್ಟಾರೆ. ಭಾರತದಲ್ಲಿ ಕ್ರಿ.ಪೂ.೪೦೦ರಲ್ಲಿ ಕಟ್ಟಡಗಳ ರಚನೆಗೆ ಮರವನ್ನು ಬಳಸುತ್ತಿದ್ದರೆಂದು ತಿಳಿದುಬರುತ್ತದೆ.[೨]

ಮೂರ್ತಿ ಶಿಲ್ಪಕ್ಕೆ ಮರವನ್ನು ಬಳಸುವುದು ತೀರ ಹಳೆಯ ಪದ್ಧತಿಯೇ ಆಗಿದೆ. ದೇವತೆಗಳ ಪ್ರತೀಕವಾಗಿ ಪ್ರತಿಮೆಗಳನ್ನು ಕಂಡರಿಸುವುದು ಮಾನವನ ಸಂಸ್ಕೃತಿ ಮೊದಲಾದಾಗಲೇ ಕಾಣಿಸಿಕೊಳ್ಳುತ್ತದೆ. ಆದರೆ ಅಷ್ಟು ಹಳೆಯ ಮರದ ಕಲಾಕೃತಿಗಳು ನಮ್ಮ ಕಾಲದವರೆಗೆ ಉಳಿದು ಬಂದಿಲ್ಲ. ಮರ ಬಹುಕಾಲ ಉಳಿಯಲಾರದು.

೦೧. ಡಾ.ಸಿ.ಮಹದೇವ : ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪುಟ ೫
೦೨. ಡಾ.ಸಿ.ಮಹದೇವ : ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪುಟ ೬

ಗಾಳಿ.ಮಳೆಗೆ ಕೆಡುತ್ತದೆ, ಹುಳು ಹುಪ್ಪಟೆ ಹಿಡಿದು ಹಾಳಾಗುತ್ತದೆ. ಆದರೂ ಪ್ರಾಚೀನ ಸಂಸ್ಕೃತಿಯ ಮಾನವ ಕಲ್ಲಿನಲ್ಲಿ ಮೂಳೆಯಲ್ಲಿ ಕೆತ್ತಲು ಮೊದಲು ಮಾಡುವ ಪೂರ್ವದಲ್ಲಿ ಮರದಲ್ಲಿ ಕೆತ್ತನೆ ಕೆಲಸ ಆರಂಭವಾದುದು ಸಹಜವೇ. ಮರದ ಕೆತ್ತನಗೆ ಬೇಕಾಗುವ ಉಳಿ ಮುಂತಾದವುಗಳನ್ನು ಅವನು ಕಲ್ಲಿನಲ್ಲೇ ಮಾಡಿಕೊಂಡುದ್ದಕ್ಕೆ ನಿದರ್ಶನಗಳಿವೆ. ಶಿಲ್ಪಕಲೆಗಳ ವಿವಿಧ ಅವಯವಗಳನ್ನು ಬೇರೆ ಬೇರೆಯಾಗಿ ಮಾಡಿಕೊಂಡ ಅವನ್ನೆಲ್ಲ ಒಟ್ಟಿಗೆ ಸೇರಿಸಿ ಶಿಲ್ಪಕೃತಿಯನ್ನು ಸಿದ್ಧಪಡಿಸುವ ಸೌಕರ್ಯ ಮರದಲ್ಲೇ ಹೆಚ್ಚು ಹೀಗಾಗಿ ಮರದ ಮಾಧ್ಯಮ ಮಹತ್ವವನ್ನು ಪಡೆದುಕೊಂಡು ಬಂದಿದೆ.[೩]

ಬೇವಿನ ಮರದಿಂದ ಹಲಗೆ, ಕಂಬ, ಬಾಗಿಲು, ದ್ವಾರ, ತೊಲೆ, ಜಂತಿಗಳನ್ನು ಮಾಡಲಾಗುತ್ತದೆ. ಅಲ್ಲದೆ ರಥಶಿಲ್ಪ, ಪಲ್ಲಕ್ಕಿ, ಮಂಟಪ ಮುಂತಾದವುಗಳನ್ನು ಸಹ ನಿರ್ಮಿಸಲಾಗುತ್ತದೆ. ಅಲ್ಲದೆ ಬೇವಿನ ಮರವನ್ನು ಆಟಿಕೆ ಸಾಮಾನುಗಳನ್ನು ಮಾಡಲು ಸಹ ಉಪಯೋಗಿಸುತ್ತಾ ಬಂದಿದ್ದಾರೆ. ತಾಳಿಕೆ ಮತ್ತು ಬಾಳಿಕೆಯಲ್ಲಿ ಬೆಲೆ ಬಾಳುವ ಮರಗಳಷ್ಟೇ ಉತ್ಕೃಷ್ಟಗುಣವನ್ನು ಬೇವು ಹೊಂದಿದೆ. ಹೀಗಾಗಿ ಬಯಲು ಸೀಮೆಯ ಜನರಿಗೆ ಒಂದು ವರದಾನವಾಗಿದೆ.


ಬ್ಯಾಸಗಿ ದಿವಸಕ್ಕ ಬೇವಿನ ಮರ ತಂಪು
ಭೀಮಾರತಿಯೆಂಬ ಹೊಳೆ ತಂಪು । ಹಡೆದವ್ವ
ನೀ ತಂಪು ನನ್ನ ತವರಿಗೆ ।

ನಮ್ಮ ಜನಪದರು ಹೇಳುವ ಹಾಡಿನಲ್ಲೂ ಬೇವಿನ ಮರದ ಮಹತ್ವ ವ್ಯಕ್ತವಾಗುತ್ತದೆ. ಹೀಗೆ ಅತ್ಯಂತ ಮಹತ್ವ ಪಡೆದ ಮರದ ಮಾದ್ಯಮದಲ್ಲಿ ನಮ್ಮ ಜನಪದರು ರಚಿಸುವ ನೂರಾರು ಶಿಲ್ಪಗಳು ಮುಖ್ಯವಾಗಿ ಸೌಂದರ್ಯ, ಧರ್ಮ ವೃತ್ತಿಮೂಲವಾಗಿ ಬೆಳೆದುಬಂದಿವೆ. ತುಳುನಾಡಿನಲ್ಲಿ ಅತ್ಯಂತ ಪ್ರಾಚೀನ ಗೊಂಬೆಗಳು ಮರದವೇ ಹೆಚ್ಚಾಗಿವೆ. ಕೇರಳದಲ್ಲಿನ ದೇವತಾ ಮೂರ್ತಿಗಳು ಮರದವೇ ಆಗಿವೆ ಎಂಬುದನ್ನು ಇಲ್ಲಿ ಗಮನಿಸಬೇಕು. ಹಂಪೆಯಲ್ಲಿ ನಡೆದ ಉತ್ಖನನಗಳಿಂದ ಕಟ್ಟಡಗಳ ನಿರ್ಮಾಣದಲ್ಲಿ ಹೆಚ್ಚಾಗಿ ಮರವನ್ನು ಬಳಸಿರುವುದು ತಿಳಿದು ಬರುತ್ತದೆ.[೪]

ಮನುಷ್ಯ ತನ್ನ ಬದುಕನ್ನು ಸುಂದರವಾಗಿರಿಸಿಕೊಳ್ಳಲು ಅನೇಕ ಬಗೆಯ ಕಲೆಗಳನ್ನು ಸೃಷ್ಟಿಸಿಕೊಂಡು ಬಂದಿದ್ದಾನೆ. ತಾನು ದಿನನಿತ್ಯ ಉಪಯೋಗಿಸುವ ಅನೇಕ ಬಗೆಯ ವಸ್ತುಗಳಲ್ಲಿ ಕಲೆಯನ್ನು ತುಂಬಿ ಸುಂದರಗೊಳಿಸಿದ್ದಾನೆ. ಕೆಲವು ವಸ್ತುಗಳನ್ನು ಚಿತ್ರಗಳಿಂದ ಅಲಂಕರಿಸಿದರೆ, ಇನ್ನೂ ಕೆಲವು ವಸ್ತುಗಳನ್ನು ಶಿಲ್ಪಗಳ ಕೆತ್ತನೆಯಿಂದ ಸಾಲಂಕೃತಗೊಳಿಸಿದ್ದಾನೆ, ಸೌಂದರ್ಯಪ್ರಜ್ಞೆಯನ್ನು ಮೆರೆದಿದ್ದಾನೆ.[೫]

ಮರದಲ್ಲಿ ಪೀಠೋಪಕರಣಗಳನ್ನು ತಯಾರಿಸುವಲ್ಲಿ ಪ್ರಪ್ರಥಮ ಸಂಸ್ಕೃತಿಯೆಂದರೆ ಈಜಿಪ್ಟ್. ಸುಮಾರು ಕ್ರಿ.ಪೂ. ೩೪೦೦ರಲ್ಲಿ ಮಾಡಲಾದ ಮರದ ಮಂಚ ಸುಪ್ಪತ್ತಿಗೆ ಮುಂತಾದವುಗಳಿಗಾಗಿ ಹಂಬಲಿಸುತ್ತದೆ ಎಂದು ನಂಬುತ್ತಿದ್ದರಿಂದ ಗೋರಿಗಳೊಳಗೆ ಆಸನಗಳು, ಮೇಜುಗಳು, ಮಂಚಗಳು ಇತ್ಯಾದಿಗಳನ್ನು ಜೋಡಿಸಿ ಇಡುತ್ತಿದ್ದರು. ಮೃತಪಟ್ಟ ವ್ಯಕ್ತಿಯ ಸ್ಥಾನಮಾನಕ್ಕೆ ಅನುಗುಣವಾಗಿ ಈ ಮರದ ವಸ್ತುಗಳಲ್ಲಿ ದಂತ ಅಥವಾ ಪ್ರಶಸ್ತ ಹರಳುಗಳು ಅಥವಾ ಬೆನ್ನ ಹುದುಗಿಸಿ ಅಲಂಕೃತಗೊಳಿಸಲಾಗುತ್ತಿತ್ತು. ಎತ್ತರದ ಹಿಂಬದಿಯುಳ್ಳ ಆಸನಗಳು ಸ್ಫಿಂಕ್ಸ್ ಅಥವಾ ಪ್ರಾಣಿ ಸ್ವರೂಪದ ದೇವತೆಯ ಆಕಾರದಲ್ಲಿದ್ದು ಅವುಗಳ ಕಾಲು ಸಿಂಹದ ಪಂಜಗಳಾಗಿದ್ದವು.[೬]

ಭಾರತದಲ್ಲಿ ಮರಕೆತ್ತನೆ ಒಂದು ಅದ್ಭುತ ಸಂಪ್ರದಾಯ. ಮರದಲ್ಲಿ ಕೈಗೊಳ್ಳಲಾಗುವ ಸೂಕ್ಷ್ಮ ಕೆತ್ತನೆಗಳು ದೇವಾಲಯಗಳಲ್ಲಿ ಮತ್ತು ಮಠಗಳಲ್ಲಿ ಮತ್ತು ಮಂಟಪಗಳಾಗಿ, ರಥಗಳಾಗಿ, ಕಾಷ್ಠಶಿಲ್ಪಗಳಾಗಿ, ಸಾಕಾರಗೊಂಡಿವೆ. ಅರಮನೆಗಳಲ್ಲಿ ಅತ್ಯಾಕರ್ಷಕ ದ್ವಾರಗಳಾಗಿ, ಮನೆಗಳಲ್ಲಿ ಸುಂದರ ವಿನ್ಯಾಸದ ಕಂಬಗಳಾಗಿವೆ. ಹಿಮಾಚಲ ಪ್ರದೇಶದಲ್ಲಿನ ಸುಮಾರು ೧೦೦೦ ವರ್ಷಗಳಷ್ಟು ಪುರಾತನವಾದ ಹಿಂಡಿಂಬೆ ದೇವಾಲಯವು ಚಳಿ,ಗಾಳಿ, ಹಿಮಕ್ಕೆ ಮೈ ಒಡ್ಡಿದರೂ ಸಹ, ಸ್ವಲ್ಪವೂ ಹಾನಿಯಾಗದಂತೆ ಉಳಿದಿರುವುದು ಮರದ ಸಂರಕ್ಷಣೆಗೆ ಮಾರ್ಗದರ್ಶನ ಹಾಕಿಕೊಟ್ಟಿದೆ.[೭]



೦೩. ಡಾ.ಶಿವಾನಂದ ಬಂಟನೂರ : ಕರ್ನಾಟಕ ಜನಪದ ಶಿಲ್ಪಕಲೆ, ಪಿಹೆಚ್.ಡಿ. ಮ.ಪ್ರ, ಪುಟ ೯೨
೦೪. ಡಾ.ಶಿವಾನಂದ ಬಂಟನೂರ : ಕರ್ನಾಟಕ ಜನಪದ ಶಿಲ್ಪಕಲೆ, ಪಿಹೆಚ್.ಡಿ. ಮ.ಪ್ರ, ಪುಟ ೯೨
೦೫. ಡಾ.ಕರೀಗೌಡ ಬೀಚನಹಳ್ಳಿ : ಕರಕುಶಲ ಕಲೆಗಳು, ಪುಟ ೧೮
೦೬. ಡಾ.ಕರೀಗೌಡ ಬೀಚನಹಳ್ಳಿ : ಕರಕುಶಲ ಕಲೆಗಳು, ಪುಟ ೧೮
೦೭. ಡಾ.ಶಿವಾನಂದ ಬಂಟನೂರ : ಕರ್ನಾಟಕ ಜನಪದ ಶಿಲ್ಪಕಲೆ, ಪಿಹೆಚ್.ಡಿ. ಮ.ಪ್ರ, ಪುಟ ೩೫

ಜನಪದ ಶಿಲ್ಪ ಕಲೆ ಈ ಎಲ್ಲ ಕಟ್ಟಡಗಳಿಂದ ಮುಕ್ತವಾದ ಆದರೆ ಜನರ ಬದುಕಿನೊಂದಿಗೆ ಬೆರೆತುಕೊಂಡು ಪ್ರಪಂಚ ಯಾಂತ್ರಿಕ ಬದುಕಿನಲ್ಲಿ ಅದರ ಮಹತ್ವ ಕಂಡು ಬರುವದಿಲ್ಲ ಜನಪದ ಶಿಲ್ಪಗಳು ಎಂದರೆ ಉಳಿಮಟ್ಟದ ಪ್ರತಿಮೆಗಳಿದ್ದಂತೆ ಅವುಗಳಲ್ಲಿ ನಯ ನಾಜೂಕು ಕಡಿಮೆ ಇದ್ದರೂ ಅಂತಃ ಸತ್ವ ಹಿರಿದಾಗಿರುತ್ತದೆ.

ಜನಪದ ಕಲೆಯು ಕಲಾತ್ಮಕ ಮತ್ತು ಪ್ರಯೋಜನಾತ್ಮಕ ಹಿನ್ನೆಲೆಯಲ್ಲಿ ಹೆಚ್ಚು ಪ್ರಸ್ತುತವಾಗುತ್ತದೆ. ಶಿಷ್ಠಕಲೆಯಲ್ಲಿ ಈ ಎರಡು ಏಕಕಾಲಕ್ಕೆ ಅನ್ವಯವಾಗುವದಿಲ್ಲ. ಜನಪದ ಶಿಲ್ಪಕಲೆ, ಶಿಷ್ಠಪದ ಶಿಲ್ಪಕಲೆಯಿಂದ ತುಂಬಾ ವ್ಯತ್ಯಸ್ಥವಾಗುತ್ತದೆ. ಸಾಮಾಜಿಕ ಜೀವನದ ಒಳರಕ್ತ, ಮಾಂಸಗಳನ್ನು ಅದ್ಭುತ ಕಲ್ಪನೆಯ ಮೂಲಕ ಜಂಗಮವಾಗುವಂತೆ ಮಾಡುವ ಸಾಮರ್ಥ್ಯ ಜನಪದ ಶಿಲ್ಪಕಲೆಗಿದೆ. ಅಧ್ಯಯನದ ಯಾವ ಅರಿವು ಇಲ್ಲದ ತಾವೂ ಪಡೆದ ಅನುಭವಗಳೇ ಸಹಜವಾದ ಆಕಾರ ಅಥವಾ ಮೂರ್ತ ರೂಪ ನೀಡಿದರೆ ಅದೇ ಜನಪದ ಶಿಲ್ಪ ಕಲೆಯಾಗುತ್ತದೆ.

ಮರದ (ಕಟ್ಟಿಗೆ) ಶಿಲ್ಪಗಳ ರಚನಾ ವಿಧಾನ

ಗ್ರಾಮದೇವತೆ ಮೂರ್ತಿ ಮಾಡುವಾಗ (ರಚಿಸುವಾಗ) ಯಾವ ಅಳತೆ ಬೇಕೊ ಆ ಅಳತೆಯ ತಕ್ಕಂತೆ ಗೋಡೆಯ ಮೇಲೆ ಚಿತ್ರವನ್ನು ಮೊದಲು ಬಿಡಿಸುತ್ತಾರೆ. ಅಳತೆಗೆ ತಕ್ಕಂತೆ ಹೆಬ್ಬೆವು ಕಟ್ಟಿಗೆಯನ್ನು ಕತ್ತರಿಸಿಕೊಂಡು ಮುಖ ಕೈ ಕಾಲುಗಳನ್ನು ಬಿಡಿ ಬಿಡಿಯಾಗಿ ರಚಿಸುತ್ತಾರೆ. ಕಟ್ಟಿಗೆಯ ಪೀಠದ ಮೇಲೆ ಎಲ್ಲ ಭಾಗಗಳನ್ನು ಜೋಡಿಸುತ್ತಾರೆ. ಹುಣಸಿಪಕ್ಕ ಸರಿ, ಗೋಣಿಚೀಲತೊಟ್ಟು ಎರಡನ್ನು ಮಿಶ್ರಮಾಡಿ ಜೋಡಿಸಿದ ಭಾಗಗಳನ್ನು ಸರಿಪಡಿಸಿಕೊಳ್ಳುತ್ತಾರೆ. ಮತ್ತೆ ಕಿಟ್ಟಸರಿ ಕಟ್ಟಿಗೆ ಪುಡಿಯನ್ನು ಅಂಟಿನಲ್ಲಿ ಮಿಶ್ರಮಾಡಿ ಆಕೃತಿಗೆ ತಕ್ಕಂತೆ ತೆಗ್ಗು,ಉಬ್ಬುಗಳನ್ನು ಮಾಡಿದ ನಂತರ ಪಾಲಿಶ್ ಮಾಡಿ ಬಟ್ಟೆ ಹಚ್ಚುವುದು, ಬಟ್ಟೆ ಹಚ್ಚಿದ ಮೇಲೆ ಅಂಟು ನೀರು ಮತ್ತು ಚಾಕಪುಡಿಯನ್ನು ಮಿಶ್ರಮಾಡಿ ಪೂರ್ತಿ ಮೂರ್ತಿಗೆ ಹಚ್ಚುವರು, ಇದನ್ನು ಬಿಳುದು ಎಂದು ಹೇಳುತ್ತಾರೆ.

ಕಲಾವಿದನು ತನ್ನ ಕಲ್ಪನೆಯ ಚಿತ್ರಗಳನ್ನು ಯಾವುದೇ ಧಾರ್ಮಿಕ ನಿರ್ಬಂಧವಿಲ್ಲದೆ ಮರದ ಗ್ರಾಮದೇವತೆಗಳ ಪ್ರತಿಮೆಗಳ ರಚನೆಗಳಲ್ಲಿ ಪ್ರಕಟಮಾಡಿದ್ದಾನೆ. ಇಂತಹ ವೈವಿಧ್ಯಮಯವಾದ ರಚನೆಗಳನ್ನು ಗ್ರಾಮೀಣ ಸಮಾಜವು ಸ್ವಾಗತಿಸಿ ನಂಬಿಕೆ ಬೆಳೆಸಿಕೊಂಡದ್ದು ಗಮನಾರ್ಹ, ಅಂಗಾಂಗಗಳ ರಚನೆಯಲ್ಲಿ ಯಾವುದೇ ಪ್ರಮಾಣ ಬದ್ಧತೆಯಿಲ್ಲ. ಬಣ್ಣ, ಪ್ರಭಾವಳಿ,ರಚನೆ,ವಾಹನಗಳು ಮತ್ತು ಇತರೆ ಅಲಂಕರಣಗಳಲ್ಲಿ ಏಕತಾನತೆ ಗೌಣವಾಗಿ ಭಿನ್ನ, ಭಿನ್ನ ರಚನೆಗಳು ಹುಟ್ಟಿಕೊಂಡಿವೆ. ಇದು ಜನಪದ ಕಲೆಯ ಮುಖ್ಯ ಲಕ್ಷಣ. ನೀಳವಾದ ಕೈ ಕಾಲುಗಳನ್ನು ಹೊಂದಿರುತ್ತವೆ.

ಗ್ರಾಮದೇವತೆ ವಾಹನವಾದ ಸಿಂಹವನ್ನು ವಿವಿಧ ಭಂಗಿಗಳಲ್ಲಿ ರಚಿಸಿದ್ದಾರೆ. ದ್ಯಾಮವ್ವ ಅಥವಾ ಊರಮ್ಮನ ಪ್ರತಿಮೆಗಳಲ್ಲಿ ಪ್ರಧಾನವಾಗಿ ಹಳದಿ ಮತ್ತು ಕೆಂಪು ಬಣ್ಣ ಎದ್ದು ಕಾಣುತ್ತದೆ. ಎಲ್ಲಾ ಪ್ರತಿಮೆಗಳಲ್ಲಿ ಕೀರ್ತಿಮುಖ ಸಹಿತವಾದ ಪ್ರಭಾವಳಿಯನ್ನು ಹೊಂದಿವೆ. ಅಕ್ಕಪಕ್ಕದಲ್ಲಿ ಇರುವ ಸಣ್ಣ ಸಣ್ಣ ಸ್ತ್ರೀ ಪ್ರತಿಮೆಗಳನ್ನು ಅಕ್ಕ ತಂಗಿಯರೆಂದು, ಮಕ್ಕಳೆಂದು, ಸಖಿಯರೆಂದು ಇಚ್ಛಾಶಕ್ತಿ, ಮಹಾಶಕ್ತಿ ಎಂದು ನಾನಾ ರೀತಿಯಲ್ಲಿ ಕರೆಯುತ್ತಾರೆ. ಈ ಪ್ರತಿಮೆಗಳ ಗ್ರಾಮ ದೇವತಾರಾಧನೆಯಲ್ಲಿ ಹೊಸ ಅಳವಡಿಕೆಗಳೆಂದು ಹೇಳಬಹುದು. ಬಹುಶಃ ಗ್ರಾಮದೇವತಾ ಪ್ರತಿಮೆ ಎದ್ದು ಕಾಣುವಂತೆ ಮಾಡಲು ಎಡ ಬಲಗಳಲ್ಲಿ ಇಂತಹ ಸಣ್ಣ ಪ್ರತಿಮೆಗಳನ್ನು ಅಳವಡಿಸಿರಬಹುದು. ಈ ಗ್ರಾಮದೇವತೆ ಪ್ರತಿಮೆಗಳನ್ನು ಕುದುರೆ, ಹುಲಿ, ಆನೆ, ಮೇಲೆ ಕೂರಿಸಲಾಗಿದೆ.

ಮರದ ದಿಮ್ಮೆಯಿಂದ ಗ್ರಾಮದೇವತೆಗಳ ಪ್ರತಿಮೆಗಳು ವಿವಿಧ ಅಳತೆಯ ಉದ್ದಗಲವನ್ನು ಹೊಂದಿರುವುದರಿಂದ ಒಂದೇ ಮರದ ತುಂಡಿನಿಂದ ಪ್ರತಿಮೆಯನ್ನು ರಚಿಸುವದಕ್ಕೆ ಬರುವುದಿಲ್ಲ. ಪ್ರತಿಮೆಯ ಪ್ರತಿ ಅಂಗವು ಒಂದು ಅಥವಾ ಎರಡು ಬಿಡಿಭಾಗಗಳ ಜೋಡನೆಯನ್ನು ಒಳಗೊಂಡಿರುತ್ತದೆ. ಚಿತ್ರಗಾರ ಮೊದಲು ತಾನು ಮಾಡಬೇಕೆಂದಿರುವ ಪ್ರತಿಮೆಯ ಒಟ್ಟು ಎತ್ತರವನ್ನು ನಿರ್ಧರಿಸಿ ನಂತರ ಅದರ ವಿವಿಧ ಅಂಗಾಂಗಳ ಉದ್ದಗಲಗಳನ್ನು ಗುರುತುಮಾಡಿಕೊಳ್ಳುತ್ತಾನೆ. ಈ ಅಳತೆಗೆ ಸರಿ ಹೊಂದುವ ಮರದ ತುಂಡುಗಳನ್ನು ಆಯ್ಕೆಮಾಡಿಕೊಂಡು ಕೆತ್ತನೆ ಮಾಡಬೇಕಾಗಿರುವ ಭಾಗವನ್ನು ಸಮತಟ್ಟುಮಾಡಲಾಗುವುದು ನಂತರ ಮಸಿಕಡ್ಡಿಯಿಂದ ಸಪಾಟಾದ ಭಾಗದ ಮೇಲೆ ಸಂಬಂಧಪಟ್ಟ ಆಕೃತಿಯ ಗೆರೆಯನ್ನು ಹಾಕಲಾಗುತ್ತದೆ. ಈ ಗೆರೆಯ ಆಚೆಗಿನ ತುಂಡನ್ನು ಉಳಿಯಿಂದ ತೆಗೆದು ಹಾಕುತ್ತಾರೆ. ಜಂತ್ರ ಎಂಬ ಉಪಕರಣದ ಸಹಾಯದಿಂದ ಕೈಕಾಲುಗಳ







ಗ್ರಾಮ ದೇವತೆಯ ಮುಖ ಶಿಲ್ಪ



ಗ್ರಾಮ ದೇವತೆ ದುರ್ಗಮ್ಮ ಶಿಲ್ಪ





ಗ್ರಾಮ ದೇವತೆ ದ್ಯಾಮವ್ವ ಶಿಲ್ಪ



ಗ್ರಾಮ ದೇವತೆ



ಗ್ರಾಮ ದೇವತೆ ದ್ಯಾಮವ್ವ ಶಿಲ್ಪ

ಭಾಗಗಳನ್ನು ಮಾಡಿಕೊಳ್ಳಲಾಗುವದು. ವಿವಿಧ ಭಾಗಗಳನ್ನು ರಚಿಸಿದ ನಂತರ ಕ್ರಮವಾಗಿ ಜೋಡನೆ ಮಾಡುತ್ತಾರೆ. ಪ್ರತಿಮೆಗಳನ್ನು ಆಯತಾಕಾರದ ಮರದ ಪೀಠದ ಮೇಲೆ ಅಳವಡಿಸುತ್ತಾರೆ. ಈ ಪೀಠವು ಮುಕ್ಕಾಲು ಅಡಿ ಎತ್ತರದ ನಾಲ್ಕು ಕಾಲುಗಳನ್ನು ಹೊಂದಿರುತ್ತದೆ.

ಕಿರೀಟ

ಮುಖದ ಎರಡು ಭಾಗದಷ್ಟು ಕೀರಿಟವಿರುತ್ತದೆ. ಮುಖದಲ್ಲಿ ಅಂದರೆ ಲಲಾಟದಿಂದ (ಹಣೆಯ ಮೇಲ್ತುದಿ) ಗದ್ದದ ಕೊನೆಯವರೆಗೆ ಮೂರು ಸಮಭಾಗಗಳನ್ನು ಮಾಡಲಾಗುವುದು, ಅದರಲ್ಲಿ ಹಣೆ, ಮೂಗು, ಮೂಗಿನಿಂದ ಗದ್ದದ ಭಾಗಗಳು, ಮುಖದ ಮೂರು ಭಾಗದ ಒಂದರಷ್ಟು ಕತ್ತು ಇರುತ್ತದೆ.

ಶಿಲ್ಪದ ಒಟ್ಟು ಎತ್ತರ

೧. ಶಿಲ್ಪದ ಎತ್ತರವು ಮುಖದ ನಾಲ್ಕುವರೆ ಪಟ್ಟುಕುಳಿತ ಭಂಗಿ (ತಲೆಯ ಕೊನೆಯಿಂದ ವೃಷ್ಠಭಾಗದವರೆಗೆ) ಇದ್ದರೆ ೨. ಮುಖದ ಎಂಟು ಅಥವಾ ಒಂಬತ್ತು ಪಟ್ಟು ಶಿಲ್ಪದ ನಿಂತ ಭಂಗಿ (ತಲೆಯಿಂದ ಪಾದದವರೆಗೆ) ಇರುತ್ತದೆ.

ಮರದ ಕಲಾಕೃತಿಗಳು

೧. ದೇವತಾ ಶಿಲ್ಪಗಳು

೧. ಗ್ರಾಮದೇವತೆಗಳು

ಧರ್ಮವು ನಮ್ಮ ಜನಪದರ ಬದುಕಿನಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಅವರ ಬದುಕನ್ನು ಮತ್ತು ಬದುಕಿನ ಪ್ರತಿಯೊಂದು ಆಯಾಮವನ್ನು ಧರ್ಮವೇ ಆವರಿಸಿಕೊಂಡು ನಿಯಂತ್ರಿಸಿಕೊಂಡು ಬಂದಿದೆ ಎಂಬುದನ್ನು ಮರದ ಮಾಧ್ಯಮದ ಜನಪದ ಶಿಲ್ಪಕಲೆಯಲ್ಲಿ ತಿಳಿಯಬಹುದಾಗಿದೆ. ಮರದ ಮಾಧ್ಯಮದಲ್ಲಿ ಗ್ರಾಮದೇವತೆಗಳೊಂದಿಗೆ ಕೃಷಿ ಉಪಕರಣಗಳನ್ನು ನಿರ್ಮಿಸಲ್ಪಟ್ಟು ಪೂಜೆ ಆಚರಣೆಗೆ ಒಳಗಾಗಿವೆ.

ಮಾನವನು ಪ್ರಾಚೀನ ಕಾಲದಿಂದಲೇ ಹಲವಾರು ನಂಬಿಕೆಗಳ ಹಿನ್ನೆಲೆಯಲ್ಲಿ ದೇವರನ್ನು ಸೃಷ್ಟಿಸಿಕೊಂಡನು. ಅವುಗಳಿಗೆ ತನ್ನದೆ ರೂಪ ಆಕಾರಗಳನ್ನು ಆರೋಪಿಸಿದನು. ಆ ರೂಪಗಳನ್ನು ಕಲ್ಲು, ಕಟ್ಟಿಗೆ ಮುಂತಾದ ಮಾಧ್ಯಮಗಳಲ್ಲಿ ರೂಪಿಸಿ ಅವುಗಳಿಗೆ ವಸ್ತ್ರ, ಒಡವೆಗಳನ್ನು ಉಡಿಸಿ, ತೊಡಿಸಿ ಅಲಂಕಾರ ಮಾಡಿ ಸಂತೋಷ ಪಡುತ್ತಾ ಬಂದಿದ್ದಾನೆ. ಸ್ತ್ರೀ ದೇವತಾ ಶಿಲ್ಪಗಳಿಗೆ ಸ್ತ್ರೀ ವೇಷಭೂಷಣಗಳನ್ನು, ಪುರುಷ ದೇವತೆಗಳಿಗೆ ಪುರಷ ವೇಷಭೂಷಣಗಳನ್ನು ತೊಡಿಸಿ ಆರಾಧಿಸುತ್ತಾ ಬಂದಿದ್ದಾನೆ. ನಮ್ಮ ಗ್ರಾಮೀಣ ಪ್ರದೇಶದಲ್ಲಿ ಈ ದೇವತಾ ಶಿಲ್ಪಗಳು ಇಂದಿಗೂ ಸಿಗುತ್ತವೆ. ಇವುಗಳನ್ನು ಗ್ರಾಮದೇವತೆಗಳೆಂದೂ ಸಹ ಕರೆಯುತ್ತಾರೆ. ಗ್ರಾಮ ದೇವತೆಗಳನ್ನು ಪ್ರತಿಯೊಂದು ಗ್ರಾಮದಲ್ಲಿ ಕಾಣುತ್ತೇವೆ. ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ರಚಿಸಲಾಗಿರುವ ದ್ಯಾಮವ್ವ, ದುರಗವ್ವ , ಮಾರಮ್ಮ ದೇವಿ ಮುಂತಾದ ಸ್ತ್ರೀ ದೇವತಾ ಶಿಲ್ಪಗಳು ಈ ಪ್ರದೇಶದಲ್ಲಿ ಮಾತೃದೇವತಾರಾಧನೆ ವ್ಯಾಪಕವಾಗಿದ್ದು ಸ್ತ್ರೀ ದೇವತಾ ಶಿಲ್ಪಗಳನ್ನು ಹೆಚ್ಚಾಗಿ ಕಾಣಬಹುದಾಗಿದೆ. ಸ್ತ್ರೀ ಗ್ರಾಮ ದೇವತೆಗಳು ಶಕ್ತಿಯ ಪ್ರತಿರೂಪಗಳೆಂದು ನಂಬಲಾಗಿದೆ. ಗ್ರಾಮದ ಜನರಲ್ಲಿ ಭಯ, ಭಕ್ತಿ, ಗೌರವಗಳು ಮನೆ ಮಾಡಿವೆ.

ರಚನೆಯಲ್ಲಿ ಏತಾನತೆ ಇಲ್ಲದ ಹಾಗೂ ಶಾಸ್ತ್ರೀಯ ರಚನೆಗಳಲ್ಲದ ಗ್ರಾಮದೇವತಾ ಶಿಲ್ಪಗಳು ಉತ್ತರ ಕರ್ನಾಟಕದಾದ್ಯಂತ ಕಂಡುಬರುತ್ತವೆ. ಆಚರಣೆ ಮತ್ತು ರಚನೆ ಎರಡರಲ್ಲೂ ಅಪ್ಪಟ ಜನಪದವಾಗಿರುವ ಈ ಶಿಲ್ಪಗಳು ಇವುಗಳ ವಾಹನಗಳು ಪ್ರಭಾವಳಿ, ಬಣ್ಣಗಾರಿಕೆ, ಎಲ್ಲದರಲ್ಲೂ ವೈವಿಧ್ಯತೆಯಿದೆ. ನೀಳವಾದ ಕೈಕಾಲುಗಳ ರಚನೆ ಹೊಂದಿರುವ ಈ ಶಿಲ್ಪಗಳು ಪ್ರಾಚೀನ ಕಾಲದಿಂದಲೂ ಜನಪದರ ದೈವವಾಗಿ ಆರಾಧಿಸಲ್ಪಡುತ್ತಾ ಬಂದಿವೆ.

ಗ್ರಾಮದೇವತೆಗಳಲ್ಲಿ ಹೆಣ್ಣು ದೇವತೆಗಳ ಸಂಖ್ಯೆಯೇ ಹೆಚ್ಚು. ನಮ್ಮ ಜನರ ಕಲ್ಪನೆಯ ಪ್ರಕಾರ ಪ್ರಕೃತಿ ಹೆಣ್ಣು, ಹೆಣ್ಣು ಎಲ್ಲ ಶಕ್ತಿಗೂ ಮೂಲ, ಈ ಮೂಲಶಕ್ತಿಯ ಪ್ರೇರಣೆ ತಾಯಿಯ ಕಲ್ಪನೆ. ತಾಯಿ ಸಂತಾನದ

ಪೋಷಣೆಯ ಮೂಲ ಆಧಾರ, ಹಾಗಾಗಿ ಹೆಣ್ಣು ಪೂಜಾರ್ಹ, ಗ್ರಾಮದೇವತೆಗಳ ಆರಾಧನೆಯಲ್ಲಿ ಸಂತಾನದ ಅಪೇಕ್ಷೆ ಮುಖ್ಯವಾಗಿದೆ. ತಾಯಿಯ ಪೂಜೆ ನಮ್ಮ ಸಂಸ್ಕೃತಿಯ ಅಂಗ, ಹೆಣ್ಣು ದೇವತೆಗಳ ಪೂಜೆಯಲ್ಲಿ ಹಲವು ಅರ್ಥಗಳಿವೆ, ಉದ್ದೇಶಗಳಿವೆ, ಉಪಯೋಗಗಳಿವೆ.[೮]

ದೇವತಾ ಶಿಲ್ಪಗಳು ವಿವಿಧ ಅಳತೆಯಲ್ಲಿರುತ್ತವೆ. ಕೆಲವು ಶಿಲ್ಪಗಳು ಪೂರ್ಣಪ್ರಮಾಣದ ಅವಯವಗಳು ಅಂದರೆ ಕೈಕಾಲು, ರುಂಡ, ಮುಂಡ, ಎಲ್ಲವನ್ನು ಹೊಂದಿರುತ್ತವೆ. ಇನ್ನೂ ಕೆಲವು ಶಿಲ್ಪಗಳು ಕೇವಲ ರುಂಡ ಅಥವಾ ಮುಖ ಮಾತ್ರ ರಚನೆಗೊಂಡು ಪೂಜಿಸಲ್ಪಡುತ್ತವೆ. ಕೈಕಾಲುಗಳನ್ನು ಹೊಂದಿರುವ ಶಿಲ್ಪಗಳು ವಿವಿಧ ಉದ್ದಗಲದ ಅಳೆತೆಯಲ್ಲಿದ್ದು ಅವು ಒಂದೇ ಮರದ ತುಂಡಿನ ರಚನೆಗೊಂಡಿರುವದಿಲ್ಲ, ಬದಲಾಗಿ ಒಂದೊಂದು ಅವಯವವೂ ಅಂದರೆ ಕೈಗಳು, ಕಾಲುಗಳು ರುಂಡ ಮತ್ತು ಮುಂಡ ಅವುಗಳ ವಾಹನ ಆಯುಧಗಳು ಮುಂತಾದವುಗಳೆಲ್ಲ ಎರಡು ಇಲ್ಲವೆ ಎರಡಕ್ಕಿಂತ ಹಲವು ಬಿಡಿ ಭಾಗಗಳಾಗಿ ಪ್ರತ್ಯೇಕ ಮರದ ತುಂಡುಗಳಲ್ಲಿ ರಚನೆಗೊಂಡಿರುತ್ತವೆ. ಹೀಗೆ ಪ್ರತ್ಯೇಕವಾಗಿ ಆದರೆ ತನ್ನದೆ ಅಳತೆಯ ಪ್ರಮಾಣಕ್ಕನುಗುಣವಾಗಿ ರಚನೆಗೊಂಡ ಶಿಲ್ಪದ ಬಿಡಿ ಭಾಗಗಳನ್ನೆಲ್ಲ ಹೊಂದಿಸಿ ಶಿಲ್ಪವನ್ನು ರಚಿಸಲಾಗುತ್ತದೆ. ಸಿದ್ಧಗೊಂಡ ಗ್ರಾಮದೇತವಾ ಶಿಲ್ಪಗಳಿಗೆ ಕೆಂಪು, ಹಳದಿ, ಹಸಿರು, ಕೆಂಪು, ನೀಲಿಯನ್ನು ಬಣ್ಣವಾಗಿ ಬಳೆಯುತ್ತಾರೆ. ವಸ್ತ್ರಗಳಾಗಿ ನೈಜವಾದ ಸೀರೆ,ಕುಪ್ಪಸ ಆಭರಣಗಳನ್ನು ಜೋಡಿಸಿ ಅಲಂಕರಿಸುತ್ತಾರೆ. ಈ ಶಿಲ್ಪಗಳು ಚೌಕ ಇಲ್ಲವೆ ಆಯತಾಕಾರದ ಮರದ ಪೀಠವೊಂದರ ಮೇಲೆ ಅಳವಡಿಸಿ ಗುರಿಗಳಲ್ಲಿ ಪ್ರತಿಷ್ಠಾಪಿಸಲಾಗಿರುತ್ತದೆ.

ದುರಗಮ್ಮ

ದುರಗಮ್ಮನ ಮೂರ್ತಿಗಳು ಸಾಮನ್ಯವಾಗಿ ಮೂರು ಅಡಿ ಎತ್ತರವನ್ನು ಹೊಂದಿರುತ್ತದೆ. ಈ ಪ್ರತಿಮೆ ಎಡ ಬಲಗಳಲ್ಲಿ ಯಾವುದೇ ಪ್ರತಿಮೆಗಳಿರುವದಿಲ್ಲ, ಸಿಂಹದ ಮೇಲೆ ಕುಳಿತ ದುರ್ಗಮ್ಮ ಎರಡು ನಾಲ್ಕು ಕೈಗಳನ್ನು ಮಾತ್ರ ಹೊಂದಿರುತ್ತದೆ. ಸುಂದರ ಕೀರಿಟ ಹೊಂದಿದ್ದು ಅಗಲವಾದ ಕಣ್ಣು ರುದ್ರತೆಯನ್ನು ಪ್ರತಿಬಿಂಬಿಸುತ್ತದೆ. ಬಾಯಿಲ್ಲಿ ಕೋರೆ ಹಲ್ಲುಗಳನ್ನು ಬಿಡಿಸಲಾಗಿದೆ. ಈ ಪ್ರತಿಮೆಗಳು ಅಲಂಕೃತ ಕೀರಿಟ ಮತ್ತು ಆಭರಣಗಳಿಂದ ಅಲಂಕರಿಸಿದ್ದಾರೆ. ಸಿಂಹವು ಅಗಲವಾದ ಕಣ್ಣು ಕೋರೆಹಲ್ಲು, ಹೊರಚಾಚಿದ ನಾಲಿಗೆಯನ್ನು ತೋರಿಸಿದ್ದಾರೆ. ಕೆಂಪು ಹಸಿರು, ಕಪ್ಪು ಬಣ್ಣಗಳನ್ನು ದುರ್ಗಮ್ಮನ ಪ್ರತಿಮೆಗೆ ಲೇಪಿಸಲಾಗಿದೆ. ಸಿಂಹಕ್ಕೆ ಹಳದಿ ಬಣ್ಣವನ್ನು ಲೇಪಿಸಲಾಗಿದೆ.

ಗ್ರಾಮ ದೇವತೆಯ ಮುಖ ಶಿಲ್ಪ

ಗ್ರಾಮದೇವತೆಯ ಮುಖವಿರುವ ಈ ಶಿಲ್ಪಕ್ಕೆ ಕೆಂಪು ವರ್ಣವನ್ನು ಲೇಪಿಸಲಾಗಿದೆ. ಅಗಲವಾದ ಕಣ್ಣು ದೇವಿಯ ಉಗ್ರರೂಪವನ್ನು ತೋರಿಸುತ್ತಿದೆ. ಮೂಗಿನಲ್ಲಿ ಮೂಗುತಿ ಕಿವಿಯಲ್ಲಿ ಬೆಂಡೋಲಿ ಮತ್ತು ಸುಂದರ ವಿನ್ಯಾಸ ಹೊಂದಿದ ಕೀರಿಟಕ್ಕೆ ಲಜಾವರ ಬಣ್ಣವನ್ನು ಲೇಪಿಸಲಾಗಿದೆ.

ಗ್ರಾಮದೇವತೆ ದುರುಗಮ್ಮ ಶಿಲ್ಪ

ದುರ್ಗಮ್ಮನ ಮೂರ್ತಿಗಳು ಸಾಮಾನ್ಯವಾಗಿ ಮೂರು ಅಡಿ ಎತ್ತರವನ್ನು ಹೊಂದಿರುತ್ತದೆ. ಅಗಲವಾದ ಕಣ್ಣು ಕಿವಿಯಲ್ಲಿ ಮೂಗುತಿ ಮೈಬಣ್ಣವಾಗಿ ಕೆಂಪು ಬಣ್ಣವನ್ನು ಲೇಪಿಸಲಾಗಿದೆ. ಈ ಪ್ರತಿಮೆಯ ಎಡ ಬಲಗಳಲ್ಲಿ ಯಾವುದೇ ಪ್ರತಿಮೆಗಳಿರುವುದಿಲ್ಲ. ಸಿಂಹದ ಮೇಲೆ ಕುಳಿತ ದುರ್ಗಮ್ಮ ಎರಡು, ನಾಲ್ಕು ಕೈಗಳನ್ನು ಹೊಂದಿರುತ್ತದೆ. ಸಿಂಹದ ಅಗಲವಾದ ಕಣ್ಣುಗಳು ರುದ್ರತೆಯನ್ನು ಪ್ರತಿಬಿಂಬಿಸುತ್ತಿದೆ. ಬಾಯಲ್ಲಿ ಕೋರೆ ಹಲ್ಲುಗಳನ್ನು ರಚಿಸಲಾಗಿದೆ.ಈ ಪ್ರತಿಮೆಗಳ ಕೀರಿಟ ವಿವಿಧ ವಿನ್ಯಾಸಗಳಿಂದ ಅಲಂಕೃತಗೊಂಡಿದ್ದು, ಕೆಂಪು ಹಸಿರು, ನೀಲಿ ಬಣ್ಣಗಳನ್ನು ದೇವಿಯ ಪ್ರತಿಮೆಗೆ, ಸಿಂಹಕ್ಕೆ ಹಳದಿ ಬಣ್ಣವನ್ನು ಲೇಪಿಸಲಾಗಿದೆ. ಕಣ್ಣು, ಮೂಗು, ಮೀಸೆಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.



ದ್ಯಾಮವ್ವನ ಶಿಲ್ಪ

ಜನಪದ ದೇವತೆಯಾಗಿರುವ ದ್ಯಾಮವ್ವನ ಶಿಲ್ಪಗಳು ತುಂಬಾ ಆಕರ್ಷಕವಾಗಿದ್ದು ಉತ್ತರ ಕರ್ನಾಟಕದಾದ್ಯಂತ ಗ್ರಾಮ ಗ್ರಾವಗಳಲ್ಲಿ ಕಂಡು ಬರುತ್ತವೆ. ಈ ದ್ಯಾಮವ್ವ ಶಿಲ್ಪ ಉಗ್ರ ಸ್ವರೂಪವನ್ನು ಹೊಂದಿದ್ದು

೧೮. ಡಿ.ಲಿಂಗಯ್ಯ : ಕರ್ನಾಟಕದ ಗ್ರಾಮದೇವತೆಗಳು, ಪುಟ ೧೬





ಗ್ರಾಮ ದೇವತೆ ದ್ಯಾಮವ್ವ ಶಿಲ್ಪಗಳು

ಸಿಂಹ ಇಲ್ಲವೇ ಹುಲಿಯ ಮೇಲೆ ಕುಳಿತ ಭಂಗಿಯಲ್ಲಿರುತ್ತವೆ. ಉಗ್ರಮುಖಭಾವ, ಅಗಲವಾದ ಕಣ್ಣು ಕಂದು ಮಿಶ್ರಿತ ಕೆಂಪು ಮೈಬಣ್ಣ, ನೀಳವಾದ ಮೂಗು ಉಬ್ಬಿನ ತುಟಿಗಳಿಂದ ಆಕರ್ಷಕವಾಗಿರುತ್ತದೆ. ಮೂಗು ಕೊರಳು, ಕಿವಿ ಹಾಗೂ ನಡುವಿನಲ್ಲಿ ಆಭರಣಗಳಿರುತ್ತವೆ. ಕೈಗಳು ಬಳೆಗಳಿಂದ ಅಲಂಕೃತಗೊಂಡಿರುತ್ತವೆ. ತಲೆಯ ಮೇಲೆ ಎಲೆಯ ಬಳ್ಳಿಗಳ ಅಲಂಕಾರಿಕ ಕೆತ್ತನೆಯಿಂದ ಕೂಡಿದ ಕಿರೀಟ, ಎದುರು ನಾಗರ ಹೆಡೆ, ತಲೆಯ ಹಿಂದೆ ಚಂದ್ರಾಕಾರದ ಪ್ರಭಾವಳಿ ಹಾಗೂ ಹತ್ತುಕೈಗಳು, ಆ ಕೈಗಳಲ್ಲಿ ವಿವಿಧ ಆಯುಧಗಳಿಂದ ಕೂಡಿದ ಶಿಲ್ಪ ಆಕರ್ಷಕವಾಗಿರುತ್ತದೆ. ಸಾಮಾನ್ಯವಾಗಿ ಈ ಶಿಲ್ಪಗಳು ಮನುಷ್ಯಾಕೃತಿ ಮತ್ತು ಮನುಷ್ಯಾಕೃತಿಗಿಂತ ಕಡಿಮೆ ಇಲ್ಲವೆ ಹೆಚ್ಚು ಅಳತೆಯಲ್ಲಿ ನಿರ್ಮಾಣವಾಗಿರುತ್ತವೆ. ಈ ಶಿಲ್ಪಗಳ ವಾಹನಗಳು ಸಿಂಹ ಹುಲಿ, ಆನೆ, ಮುಂತಾದ ಶಿಲ್ಪಗಳಾಗಿವೆ. ಈ ವಾಹನ ಶಿಲ್ಪಗಳು ನಿಂತ ಮಲಗಿದ ಮತ್ತು ಕಾಲುಗಳನ್ನು ಮೇಲಕ್ಕೆತ್ತಿದ ಭಂಗಿಗಳಲ್ಲಿವೆ. ಇವುಗಳನ್ನು ಸಾಮಾನ್ಯವಾಗಿ ಹಳದಿ, ಕೆಂಪು, ನೀಲಿ, ಕಪ್ಪು ಬಣ್ಣಗಳನ್ನು ಲೇಪಿಸಿ ಅಲಂಕರಿಸಲಾಗಿದೆ. ಹೆಚ್ಚಾಗಿ ವಾಹನಶಿಲ್ಪಗಳಿಗೆ ಹಳದಿಯನ್ನು ಮೈಬಣ್ಣವಾಗಿ ಬಳೆಯಲಾಗಿದೆ. ಮತ್ತು ಕಪ್ಪು ಮೀಸೆ ಬರೆಯಲಾಗಿದೆ. ಈ ಎಲ್ಲ ಶಿಲ್ಪಗಳು ಉದ್ದಗಲಕ್ಕೆ ಸಂಬಂಧಿಸಿದಂತೆ ಅಳತೆಗಳಿರುತ್ತವೆ. ಆದರೆ ಶಾರೀರಿಕ ರಚನೆಗಳನ್ನು (ಅನಾಟಮಿ) ಅನುಸರಿಸಿರುವುದಿಲ್ಲ. ಈ ದ್ಯಾಮವ್ವನ ಶಿಲ್ಪಗಳಿಗೆ ಇಷ್ಟೇ ಕೈಗಳಿರಬೇಕೆಂಬ ನಿಯಮವಿಲ್ಲ ಸಾಮಾನ್ಯವಾಗಿ ನಾಲ್ಕರಿಂದ ಹತ್ತು ಕೈಗಳನ್ನು ಹೊಂದಿರುವ ಶಿಲ್ಪಗಳು ಕಂಡು ಬರುತ್ತವೆ.

ದ್ಯಾಮವ್ವನ ಕೈಯಲ್ಲಿ ಕ್ರಮವಾಗಿ ತ್ರಿಶೂಲ, ಡಮರು, ಪದ್ಮ, ಖಡ್ಗ, ಬಟ್ಟಲು, ಭರ್ಚಿ, ಶಂಖ, ಚಕ್ರಗಳಿದ್ದರೆ ದ್ಯಾಮವ್ವನ ಶಿಲ್ಪಗಳಿಗೆ ಹಿಂದೆ ಸುಂದರ ನಕ್ಷೆಗಳನ್ನು ಬರೆಯಲಾಗಿರುತ್ತದೆ. ಪಟ್ಟಿಕೆಯಲ್ಲಿ ವಿಷ್ಣುವಿನ ದಶವತಾರ ಚಿತ್ರಗಳನ್ನು ಬರೆಯಲಾಗಿದೆ. ದ್ಯಾಮವ್ವನ ಮೂರ್ತಿಯ ಆರಾಧನೆಯಿಂದ ಮಳೆ, ಬೆಳೆ ಸಮೃದ್ಧಿಯಾಗಿ ಬರುತ್ತದೆ ಎಂದು ನಂಬಿಕೆ ಇದೆ.

ಗ್ರಾಮ ದೇವತೆ

ಈ ಶಿಲ್ಪವು ವಿಶೇಷವಾಗಿ ದುರ್ಗಮ್ಮ ದೇವಿಯ ವಾಹನ ಕುದುರೆಯಾಗಿದೆ. ಮತ್ತು ದೇವಿಗೆ ಮೈಬಣ್ಣವಾಗಿ ಹಸಿರು ಬಣ್ಣವನ್ನು ಲೇಪಿಸಿರುವುದು ವಿಶೇಷವಾಗಿದೆ. ಏಕೆಂದರೆ ಗ್ರಾಮ ದೇವತೆಗಳು ಶಿಲ್ಪಗಳಿಗೆ ಕೆಂಪು ಬಣ್ಣವನ್ನು ಉಪಯೋಗಿಸಿವ ಸಂಪ್ರದಾಯವೂ ಹೌದು. ಅಷ್ಟೇ ಅಲ್ಲದೇ ಪ್ರಖರತೆಯಿಂದ ಆಕರ್ಷಣೀಯವಾಗಿ ಕಂಡು ಬರಲು ಜನಪದರು ಈ ವರ್ಣಗಳನ್ನೇ ಬಹುವಾಗಿ ಇಷ್ಟಪಡುವುದೂ ಕೂಡ ಒಂದು ಕಾರಣ. ಆದರೆ ಈ ಶಿಲ್ಪಕ್ಕೆ ಹಸಿರು ಬಣ್ಣವನ್ನು ಲೇಪಿಸಿರುವುದು ಸಮೃದ್ಧಿಯ ಸಂಕೇತವನ್ನು ಸೂಚಿಸುತ್ತದೆ. ಅಲಂಕೃತ ಕೀರಿಟ ಹೊಂದಿದ್ದು, ಕೈಯಲ್ಲಿ ಖಡ್ಗವನ್ನು ಹಿಡಿದಿದ್ದಾಳೆ. ಕುದುರೆಗೆ ಕೆಂಪು ಬಣ್ಣವನ್ನು ಲೇಪಿಸಲಾಗಿದೆ. ಸೂಕ್ಷ್ಮ ರೇಖೆಗಳಿಂದ ಕಣ್ಣು, ಕಿವಿ. ಮೂಗುಗಳನ್ನು ಚಿತ್ರಿಸಿದ್ದಾರೆ.

ಗ್ರಾಮ ದೇವತೆ ದ್ಯಾಮವ್ವ

ಜನಪದರ ದೇವತೆಯಾಗಿರುವ ದ್ಯಾಮವ್ವನ ಶಿಲ್ಪಗಳು ತುಂಬಾ ಆಕರ್ಷಕವಾಗಿವೆ. ದ್ಯಾಮವ್ವ ಶಿಲ್ಪಗಳು ಉಗ್ರ ಸ್ವರೂಪವನ್ನು ಹೊಂದಿದ್ದು, ಸಿಂಹದ ಮೇಲೆ ಕುಳಿತ ಭಂಗಿಯಲ್ಲಿದೆ. ಆರು ಕೈಗಳಲ್ಲಿ ಕ್ರಮವಾಗಿ ಬಟ್ಟಲು. ಶಂಖ, ಚೂರಿ, ಖಡ್ಗಗಳನ್ನು ಹೊಂದಿದೆ. ಹಿಂದೆ ಅರ್ಧ ಚಂದ್ರಾಕಾರದ ಪ್ರಭಾವಳಿಯಲ್ಲಿ ಸುಂದರವಾದ ಎಲೆ,ಬಳ್ಳಿಗಳ ಸೂಕ್ಷ್ಮ ಚಿತ್ರಗಳೊಂದಿಗೆ ಪುರಾಣಗಳ ಚಿತ್ರಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಪ್ರಭಾವಳಿ ಕೆಳಗಡೆ ಜಯ,ವಿಜಯರ ಶಿಲ್ಪಗಳು ಕೆತ್ತಲ್ಪಟ್ಟಿವೆ.

ಗ್ರಾಮ ದೇವತೆ ದ್ಯಾಮವ್ವ ಶಿಲ್ಪಗಳು

ಈ ಶಿಲ್ಪದ ವಾಹನವು ಕುದುರೆಯನ್ನು ನಾಗಾಲೋಟದಿಂದ ಓಡುತ್ತಿರುವ ಭಾವದಲ್ಲಿ ಕೆತ್ತಲಾಗಿದೆ. ಮುಂಗಾಲುಗಳನ್ನು ಮೇಲಕ್ಕೆ ಎತ್ತಿದ್ದು ಕುದುರೆಯ ಮುಖದಲ್ಲಿ ಕೆನೆಯುತ್ತಿರುವಂತೆ ಬಾಯಿಯನ್ನು ತೆರೆಯಲಾಗಿದೆ. ಹತ್ತು ಕೈಗಳನ್ನು ಹೊಂದಿರುವ ಈ ಶಿಲ್ಪ ಕ್ರಮವಾಗಿ ತ್ರಿಶೂಲ, ಖಡ್ಗ, ಶಂಖ, ಚೂರಿ, ಗದೆ, ರಕ್ತ ತುಂಬಿರುವ ಬಟ್ಟಲು ಮುಂತಾದ ಆಯುಧಗಳು ಕೈಗಳಲ್ಲಿ ಇರುತ್ತವೆ. ಕುದುರೆಯ ಮೇಲೆ ಕುಳಿತಿರುವ ದ್ಯಾಮವ್ವ ಹಿಂದೆ ಅರ್ಧ ಚಂದ್ರಾಕಾರದ ಪ್ರಭಾವಳಿ ಹೊಂದಿದ್ದು ಎಲೆ, ಹೂ ಬಳ್ಳಿಗಳಿಂದ ಪ್ರಭಾವಳಿಯನ್ನು ಅಲಂಕರಿಸಲಾಗಿದೆ.

ಪ್ರಭಾವಳಿಯ ಮೇಲೆ ಕೀರ್ತಿಮುಖ ಇದೆ. ಕೀರಿಟಕ್ಕೆ ಲಜಾವರ ಬಣ್ಣವನ್ನು ಲೇಪಿಸಿರುತ್ತಾರೆ. ದೇವಿಯ ಕಾಲಿಗೆ ಪಾದರಕ್ಷೆಗಳನ್ನು ತೊಡಿಸಿದ್ದು, ದೇಹದ ಎಲ್ಲ ಭಾಗಗಳು ಭಿನ್ನವಾಗಿದ್ದರೂ ಸ್ಕ್ರೂಗಳ ಮೂಲಕ ಜೋಡಿಸಲಾಗಿದೆ.

ರಥ ಶಿಲ್ಪಗಳು


ಮಾನವನ ಉಗಮವಾದೊಡನೆಯೇ ಅವನ ಬದುಕಿನ ಅವಶ್ಯಕತೆಗಳನ್ನು ರೂಢಿಸಿಕೊಳ್ಳುವ ಅನಿರ್ವಾತೆಯು ಕಾಣಿಸಿಕೊಂಡಿತು. ತನ್ನ ಸುತ್ತಲಿನ ಪ್ರಕೃತಿಯನ್ನು ಬಳಸಿಕೊಂಡು ತನ್ನ ಬದುಕು ಸುಗಮವಾಗಲು ಅನೇಕ ಸಾಧನ ಸಲಕರಣೆಗಳನ್ನು ಅವನು ಕಲ್ಪಿಸಿಕೊಂಡು, ತನಗೆ ತಾನು ಆರಾಧಿಸುವ ದೈವಕ್ಕೆ ಬೇಕಾದ ಇಂತಹ ಸಲಕರಣೆಗಳಲ್ಲಿ ರಥಗಳು ಬಹುಮುಖ್ಯಪಾತ್ರವನ್ನು ವಹಿಸುತ್ತವೆ. ರಥಗಳ ಕಲ್ಪನೆ ಪುರಾತನವಾದುದು. ಗತಿಶೀಲ ಪರಿಕರಗಳ ವಿವಿಧ ಆವಿಷ್ಕಾರಗಳ ಬೆಡಗಿನಲ್ಲಿ ಬೆಳೆದು ಬಂದ ರಥ ವೇದಕಾಲದಷ್ಟು ಪ್ರಾಚೀನ. ಋಗ್ವೇದದಲ್ಲಿ ಉಲ್ಲೇಖವಾದ ಹಲವಾರು ವೃತ್ತಿಗಳಲ್ಲಿ ರಥ ನಿರ್ಮಾಣವೂ ಒಂದು ಪ್ರಮುಖ ವೃತ್ತಿಯಾಗಿತ್ತು. ಋಗ್ವೇದದಲ್ಲಿ ರಥದ ಪ್ರಮುಖ ಅಂಗಗಳಾದ ಅಕ್ಷಕೋಶ ಹಾಗೂ ಚಕ್ರ ಮುಂತಾದವುಗಳ ಉಲ್ಲೇಖವಿದೆ. ಅಥರ್ವಣ ವೇದ ಹಾಗೂ ತೈತ್ತಿರೀಯ ಸಂಹಿತೆಗಳಲ್ಲಿ ರಥದ ಮುಖ ಅಥವಾ ಮುಂಭಾಗದ ಬಗ್ಗೆ ಉಲ್ಲೇಖವಿದೆ. ಶತಪಥ ಬ್ರಾಹ್ಮಣದಲ್ಲಿ ರಥ ಶಿರಸ್ಸಿನ ವಿವರಣೆ ಹಾಗೂ ಅಪಸ್ಥಂಬ ಸುಲಭಸೂತ್ರದಲ್ಲಿ ರಥದ ಇರಸು ಚಕ್ರ ಹಾಗೂ ಕಂಬಗಳ ಪ್ರಮಾಣವನ್ನು ಕುರಿತು ಹೇಳಲಾಗಿದೆ. ತೈತ್ತಿರೀಯ ಸಂಹಿತೆಯಲ್ಲಿ ರಥಕಾರರ ಉಲ್ಲೇಖವು ಕಂಡು ಬರುತ್ತದೆ.[೯] ಇವುಗಳ ಆಧಾರದಿಂದ ವೇದ ಕಾಲದಲ್ಲಿ ರಥ ನಿರ್ಮಾಣ ಕಲೆ ಎಷ್ಟೊಂದು ಪ್ರವರ್ಧಮಾನವಾಗಿ ಬೆಳೆದಿತ್ತು ಎಂಬುದನ್ನು ತರ್ಕಿಸಬಹುದಾಗಿದೆ.

ಸೂರ್ಯ ದೇವನ ರಥ ಒಂದೇ ಚಕ್ರವನ್ನು ಹೊಂದಿದ್ದು, ಏಳು ಕುದುರೆಗಳಿಂದ ಎಳೆಯುವಂತಹದ್ದು ಸೂರ್ಯನ ರಥಕ್ಕೆ ಹೂಡಲಾದ ಏಳು ಕುದುರೆಗಳು ವಾರದ ಏಳು ದಿನಗಳ ಪ್ರತಿಕ ಆಗಿರಬಹುದು. ಸೂರ್ಯನ ರಥದ ಚಕ್ರವೂ ಆಗಿದೆ. "ಕಾಲೋ ಅಶ್ವೋವಹತಿ ಸಪ್ತ ರಶ್ಮಿ" ಎಂದು ಅಥರ್ವಣ ವೇದದಲ್ಲಿ ಹೇಳಲಾಗಿದೆ. (ವಿಶ್ವವೇ ಕಾಲದ ಆಧಾರದ ಮೇಲೆ ನಿಂತಿದೆ) ರಥಾ ರೂಢನಾದ ಬಾಸ್ಕರನನ್ನು ನೋಡುವ ಪುಣ್ಯವಂತರಿಗೆ ಪುನರ್ ಜನ್ಮವಿರಲಾರದು 'ರಥಸ್ಥಂ ಭಾಸ್ಕರಂ ದೃಷ್ಟ್ವಾ ಪುರ್ನಜನನ ವಿದ್ಯತೇ'[೧೦] ಎಂದು ಉಲ್ಲೇಖವಿದೆ. ಕಾಲಾತೀತವಾದ ರಥಗಳನ್ನು ಎಲ್ಲ ಸಂಸ್ಕೃತಿ ಹಾಗೂ ನಾಗರಿಕತೆಯಲ್ಲಿಯೂ ನೋಡಬಹುದಾಗಿದೆ. ಮೊಹೆಂಜೋದಾರೊ ಹಾಗೂ ಹರಪ್ಪ ಸಂಸ್ಕೃತಿ, ಸಿಂಧೂ ಕೊಳ್ಳದ ಸಂಸ್ಕೃತಿ, ಮೆಸಪೊಟೇಮಿಯಾ, ಗ್ರೀಕ್, ಬೆಬಿಲೋನಿಯಾ, ಅಸ್ಸೀರಿಯಾ ಮುಂತಾದ ನಾಗರಿಕತೆಯಲ್ಲಿ ರಥಗಳ ಬಳಕೆ ವಿಫುಲವಾಗಿತ್ತು.[೧೧]


ಮೆಸಪೊಟೇಮಿಯಾ ಸಂಸ್ಕೃತಿಯಲ್ಲಿ ಕ್ರಿಪೂ. ೩ನೇ ಶತಮಾನದಲ್ಲಿ ಎರಡು ಗಾಲಿಯ ರಥಗಳಿದ್ದುವೆಂದು ಗುರುತಿಸಲಾಗಿದೆ. ಕ್ರಮೇಣ ನಾಲ್ಕು ಚಕ್ರಗಳು ಬಂದವು ಉತ್ತರ ಭಾರತದಲ್ಲಿ ಹಗುರವಾದ ಚಕ್ರಗಳುಳ್ಳ ರಥಗಳ ಬಳಕೆ ೨ನೇ ಶತಮಾನದ ವೇಳೆಗೆ ಇದ್ದುದ್ದು ತಿಳಿದು ಬರುತ್ತದೆ. ಚೈನಾದಲ್ಲಿ ೧೪ನೇ ಶತಮಾನದ ಸುಮಾರಿಗೆ ಕಂಚಿನ ರಥಗಳನ್ನು ಬಳಸಿದ ನಿದರ್ಶನಗಳು ಉಂಟು.[೧೨]


ಕರ್ನಾಟಕದಲ್ಲಿ ರಥವನ್ನು ಸಾಮಾನ್ಯವಾಗಿ 'ತೇರು' ಎಂದು ಕರೆಯಲಾಗುತ್ತದೆ. ತುಂಬಾ ಹಳೆಯ ರಥಗಳು ಎಲ್ಲಿಯೂ ಕಂಡುಬರುವದಿಲ್ಲ. ಯಾವುದೇ ದೇವಾಲಯದ ರಥ ಕ್ರಿಶ ಸುಮಾರು ೧೭ ಅಥವಾ ೧೮ ನೇ ಶತಮಾನದ ಹಿಂದಕ್ಕೆ ಹೋಗುವದಿಲ್ಲವೆಂದು ತಿಳಿದುಬರುತ್ತದೆ. ಅಲ್ಲದೆ ಕರ್ನಾಟಕದಲ್ಲಿ ತೇರುಗಳ ನಿರ್ಮಾಣವನ್ನು ವಿಜಯನಗರೋತ್ತರ ಕಾಲದಿಂದ ಗುರುತಿಸಲಾಗುತ್ತಿದೆ. ಆದರೆ ಹಂಪೆಯ ವಿಠಲ ದೇವಾಲಯದಲ್ಲಿರುವ ಕಲ್ಲಿನ ರಥವನ್ನು ಗಮನಿಸಿದಾಗ ರಥಗಳ ನಿರ್ಮಾಣವನ್ನು ವಿಜಯನಗರದ ಪೂರ್ವಕಾಲದಿಂದಲೂ ಗುರುತಿಸಬಹುದು.[೧೩]

ಜನಪದರ ಆಡು ಭಾಷೆಯಲ್ಲಿ ಇದು ತೇರು. ಕೊಟ್ಟೂರು, ಹಂಪೆ ವಿರೂಪಾಕ್ಷ ರಥ, ನಂಜನಗೂಡು, ಬನಶಂಕರಿ, ಕೊಲ್ಲೂರು ಮೂಕಾಂಬಿಕಾ ರಥ, ಗದುಗಿನ ತೋಂಟದಾರ್ಯ ರಥ, ಬನವಾಸಿಯ ಮಧುಕೇಶ್ವರ




೯. ಧೃವರಾಜ ನಾ. ಗದಗಕರ : ದೇಗುಲ ರಥಶಿಲ್ಪ, ಪುಟ ೧
೧೦. ಧೃವರಾಜ ನಾ. ಗದಗಕರ : ದೇಗುಲ ರಥಶಿಲ್ಪ, ಪುಟ ೧
೧೧. ಧೃವರಾಜ ನಾ. ಗದಗಕರ : ದೇಗುಲ ರಥಶಿಲ್ಪ, ಪುಟ ೨
೧೨. ಪಿ.ಆರ್.ತಿಪ್ಪೇಸ್ವಾಮಿ (ಪ್ರಸಂ) : ಶಿಲ್ಪಕಲಾ ಪ್ರಪಂಚ. ಪುಟ ೪೯೭
೧೩. ಡಾ.ಸಿ.ಮಹದೇವ : ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪುಟ ೩೦







ಹಂಪಿ ವಿರುಪಾಕ್ಷನ ತೇರಿಗೆ ಅಲಂಕೃತಗೊಂಡ
ಕಿನ್ನಾಳದ ಜಯ-ವಿಜಯ. ಸಿಂಹ ಲಲಾಟ
ಮತ್ತು ಸೂರ್ಯ ರಥವೇರಿರುವ ಬ್ರಹ್ಮ. ವಿಷ್ಣು. ಮಹೇಶ್ವರರ ಶಿಲ್ಪಗಳು





ಶ್ರೀ ಏಕಪ್ಪ ಚಿತ್ರಗಾರ ಅವರು ಕಾಷ್ಠ ಶಿಲ್ಪಗಳಿಗೆ ಬಣ್ಣಗಾರಿಕೆ ಮಾಡುತ್ತಿರುವುದು

ಸೂರ್ಯ ರಥದ ಸಾರಥಿಯಾಗಿರುವ ಬ್ರಹ್ಮ, ವಿಷ್ಣು, ಮಹೇಶ್ವರ





ಜಯನ ಶಿಲ್ಪ



ತಾಯಿ ಮತ್ತು ಮಗುವಿನ ಶಿಲ್ಪ

ರಥ, ಹೊನ್ನಾಳಿ ಹಿರೇಕಲ್ಮಠದ ರಥ, ಹುಲಗಿಯ ಹುಲಗೆಮ್ಮನ ರಥ, ಶಿರಸಿಯ ಮಾರಿಕಾಂಬ ರಥ ಮುಂತಾದವುಗಳನ್ನು ಹೆಸರಿಸಬಹುದಾಗಿದೆ

ನಮ್ಮ ಪುರಾತನದ ದೇವಾಲಯಗಳ ಗೋಡೆಗಳ ಹೊರಮೈಮೇಲೆ ವಿಗ್ರಹಗಳನ್ನು ಕೆತ್ತಿ ಅಲಂಕರಿಸುವಂತೆ ಶಿಲ್ಪಿಗಳು ಮೃದುವಾದ ಕಟ್ಟಿಗೆಗಳಿಂದ ಪೂರ್ಣಾಕಾರದಲ್ಲಿ ತ್ರಿಮಾನ ಪದ್ಧತಿಯಲ್ಲಿ ಮೂರ್ತಿಗಳನ್ನು ನಿರ್ಮಿಸಿ ರಥದ ಸೂಕ್ತ ಅಂಗಗಳಲ್ಲಿ ಕಲಾತ್ಮಕವಾಗಿ ಜೋಡಿಸಿದ್ದಾರೆ. ಇನ್ನು ಕೆಲವು ರಥಗಳಲ್ಲಿ ಪಟ್ಟಿಕೆಗಳನ್ನು ನಿರ್ಮಿಸಿ ಅವುಗಳ ಮೇಲೆ ದೇವತಾ ವಿಗ್ರಹ ಪುರಾಣ ಇತಿಹಾಸದ ಘಟನಾವಳಿಗಳು (ರಾಮಾಯಣ, ಮಹಾಭಾರತ, ಭಾಗವತ, ದಶಾವತಾರ, ಪಂಚತಂತ್ರ ಇತ್ಯಾದಿಗಳನ್ನು ಆಧರಿಸಿ) ದ್ವಾರಪಾಲಕರು (ಜಯ ವಿಜಯ) ಹೆಣ್ಣುಗೊಂಬೆಗಳು, ಅಶ್ವಾರೂಢ ಬ್ರಹ್ಮ, ಕುದುರೆ, ಗರುಡ, ದೇವತೆಗಳು, ಸಿಂಹಗಳನ್ನು ರಥದ ಸೂಕ್ತ ಅಂಗಗಳಲ್ಲಿ ಕಲಾತ್ಮಕವಾಗಿ ಕೂಡಿಸಿ ರಥಕ್ಕೆ ಜೀವಕಳೆಯನ್ನು ತುಂಬುತ್ತಾರೆ. ಅಲಂಕೃತವಾದ ರಥ ಬೀದಿಯಲ್ಲಿ ಚಲಿಸಿದಾಗ ದೇವಾಲಯವೇ ನಡೆದಂತಾಗುತ್ತದೆ. ಇದರಿಂದಾಗಿ ರಥವನ್ನು ಚಲಿಸುವ ದೇವಾಲಯ ಎಂದು ಕರೆಯುತ್ತಾರೆ. ರಥದ ಅಲಂಕಾರಕ್ಕಾಗಿ ಬಳಸುವ ದ್ವಾರಪಾಲಕರು ಒಳ್ಳೆಯ ಠೀವಿಯಿಂದ ನಿಂತಿರುವದು, ಕಾಲ್ಪನಿಕ ಕುದುರೆ, ಆನೆಯ ಮುಖದ ಶಿಲ್ಪ ಕಾಣಸಿಗುತ್ತವೆ. ಮಧ್ಯದಲ್ಲಿ ಕಾಲ್ಪನಿಕ ರೂಪಗಳು ಆರಾಧನೆ ಮಾಡುತ್ತಿರುವುದು ಕಂಡುಬರುತ್ತವೆ, ಈ ದ್ವಾರ ಪಾಲಕರು ಭಕ್ತರನ್ನು ಸ್ವಾಗತಿಸಲು ರಕ್ಷಿಸಲು ನಿಂತಂತೆ ಭಾಸವಾಗುತ್ತದೆ.

ಹಂಪಿ ವಿರೂಪಾಕ್ಷನ ರಥ

ಹಂಪಿ ವಿರುಪಾಕ್ಷನ ತೇರಿಗೆ ಅಲಂಕೃತಗೊಂಡ ಜಯ-ವಿಜಯ ಶಿಲ್ಪಗಳು, ಮತ್ತು ಕಮಾನಿನಿ ಬಾಗಿಲು ಚೌಕಟ್ಟುಗಳು ಸುಂದರ ಹೂವು ಬಳ್ಳಿಗಳಿಂದ ಅಲಂಕೃತವಾಗಿದೆ. ಜಯ-ವಿಜಯರ ಶಿಲ್ಪಗಳು ಹಳದಿ ಮೈಬಣ್ಣಗಳನ್ನು ಹೊಂದಿದ್ದು ಈ ಶಿಲ್ಪಕ್ಕೆ ನಾಲ್ಕು ಕೈಗಳು ಇವೆ. ಕೈಯಲ್ಲಿ ಗದೆಯನ್ನು ಹಿಡಿದಿದ್ದಾನೆ. ಕಣ್ಣು, ಕಿವಿ, ಮೀಸೆ, ಮೂಗುಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. ಚೌಕಟ್ಟುಗಳನ್ನು ಮೇಲಿನ ಭಾಗದಲ್ಲಿ ಲಿಂಗ, ನಂದಿಯ ಚಿತ್ರಗಳನ್ನು ಬಿಡಿಸಿದ್ದಾರೆ. ಸೂರ್ಯರಥದ ಸಾರಥಿಯಾಗಿರುವ ಬ್ರಹ್ಮ ವಿಷ್ಣು ಮಹೇಶ್ವರರ ಶಿಲ್ಪವಾಗಿದೆ. ವೇಗವಾಗಿ ಓಡುತ್ತಿರುವ ನಾಲ್ಕು ಕುದುರೆಗಳಿಗೆ ಸೂರ್ಯ ರಥದ ಸಾರಥಿಗೆ ಕೇಸರಿ ಬಣ್ಣವನ್ನು ಲೇಪಿಸಿದ್ದಾರೆ. ಕಿರಿಟಕ್ಕೆ ಲಜಾವರ ಬಣ್ಣ ಮತ್ತು ಕೊರಳಿನಲ್ಲಿ ಆಭರಣಗಳಿವೆ. ನಾಲ್ಕು ಕುದುರೆಗಳು ಬಾಯಿಯನ್ನು ತೆರೆದಿವೆ. ಕುದುರೆಗಳಿಗೆ ಬಿಳಿ ಬಣ್ಣ ಲೇಪಿಸಲಾಗಿದೆ. ಕಣ್ಣು, ಮೂಗು, ಕಿವಿಗಳನ್ನು ಸೂಕ್ಷ್ಮರೇಖೆಗಳಿಂದ ರಚಿಸಲಾಗಿದೆ.

ಹಂಪಿಯ ವಿರೂಪಾಕ್ಷನ ತೇರಿಗೆ ಅಲಂಕೃತಗೊಂಡ ಜಯ-ವಿಜಯ, ಸಿಂಹ ಲಲಾಟ ಮತ್ತು ಸೂರ್ಯರಥವೇರಿರುವ ಬ್ರಹ್ಮ, ವಿಷ್ಣು, ಮಹೇಶ್ವರರ ಶಿಲ್ಪಗಳು ರಥದ ಸೌಂಧರ್ಯವನ್ನು ಇಮ್ಮಡಿಗೊಳಿಸಿವೆ. ಅಲಂಕರಣ ಗೊಂಬೆಗಳಾದ ದ್ವಾರಪಾಲಕರು ಸೂರ್ಯರಥವೇರಿರುವ ಬ್ರಹ್ಮ, ವಿಷ್ಣು, ಮಹೇಶ್ವರರ ಶಿಲ್ಪಗಳಿಗೆ ಏಕಪ್ಪ ಚಿತ್ರಗಾರ ಮತ್ತು ಅವರ ಮಗ ಅಣ್ಣಪ್ಪ ಚಿತ್ರಗಾರ ಬಣ್ಣಗಾರಿಕೆ ಮಾಡುತ್ತಿರುವ ಚಿತ್ರವನ್ನು ನೋಡಬಹುದಾಗಿದೆ.

ದ್ವಾರಪಾಲಕ

ಠೀವಿಯಿಂದ ನಿಂತಿರುವ ದ್ವಾರಪಾಲಕನ ಶಿಲ್ಪವು ಗಂಭೀರತೆಯನ್ನು ಸೂಚಿಸುತ್ತದೆ. ಮೈಬಣ್ಣವಾಗಿ ಹಳದಿ ಬಣ್ಣ ಮತ್ತು ಪಂಚಗೆ ಬಿಳಿ ಬಣ್ಣ ಲೇಪಿಸಲಾಗಿದೆ. ನಾಲ್ಕು ಕೈಗಳನ್ನು ಹೊಂದಿದ್ದು ಕೈಯಲ್ಲಿ ಗಧೆಯನ್ನು ಹಿಡಿದಿದ್ದಾನೆ. ಕಿರೀಟ ಹೂವುಬಳ್ಳಿಗಳಿಂದ ಅಲಂಕೃತವಾಗಿದೆ. ಕಣ್ಣು, ಮೀಸೆ, ತುಟಿಗಳನ್ನು ಸೂಕ್ಷ್ಮವಾಗಿ ರಚಿಸಿದ್ದಾರೆ. ವಿಜಯನಗರ ಕಾಲದ ಮಂಟಪದ ಕಂಬಗಳಲ್ಲಿ ಕಂಡುಬರುವ ದ್ವಾರಪಾಲಕರ ಶಿಲ್ಪಗಳನ್ನು ಅನುಕರಣೆ ಮಾಡಲಾಗಿದೆ.

ತಾಯಿ ಮತ್ತು ಮಗುವಿನ ಶಿಲ್ಪ

ನಿಂತ ಭಂಗಿಯಲ್ಲಿರುವ ತಾಯಿಯ ಶಿಲ್ಪವು ಎರಡು ಕೈಗಳಿಂದ ತನ್ನ ಮಗನನ್ನು ಹಿಡಿದಿದ್ದಾಳೆ. ಹಸಿರು ಬಣ್ಣದ ಸೀರೆ ಮತ್ತು ಮಗುವಿಗೆ ಮೈಬಣ್ಣ ಹಳದಿಯಾಗಿದೆ. ಕೊರಳಿನಲ್ಲಿ ಆಭರಣಗಳಿಂದ ಅಲಂಕೃತವಾಗಿದೆ. ಕೈಗಳಲ್ಲಿ ಬಳೆ ಮೂಗಿನಲ್ಲಿ ಮೂಗುತಿ ಇದೆ.

ಕಿನ್ನಾಳದ ಗೌರಿ

ಈ ಶಿಲ್ಪದಲ್ಲಿ ಹಳದಿ ಬಣ್ಣದ ಬಳಕೆ ಹೆಚ್ಚಾಗಿದ್ದು ಕೆಂಪು, ಹಸಿರು ವರ್ಣಗಳು ಲೇಪನಗೊಂಡಿರುತ್ತವೆ. ಅಗಲವಾದ ಹಣೆ, ದುಂಡಾದ ಮುಖ, ಚೂಪಾದ ನೆಟ್ಟಗಿನ ಮೂಗು, ತುಂಬಿದ ಕೆನ್ನೆಗಳು, ಶಿಲ್ಪದಲ್ಲಿ ತುಂಬಾ







ಸಂಕೀರ್ಣ ಮಾಧ್ಯಮದ ಗೊಂಬೆಗಳು





ಕಿನ್ನಾಳದ ಗೌರಿ



ತೊಟ್ಟಿಲು ಗೌರಿ

ಸೊಗಸಾಗಿ ಕೆತ್ತಲ್ಪಟ್ಟಿದೆ. ಗೌರಿಹುಣ್ಣಿಮೆಯಲ್ಲಿ ಈ ಮೂರ್ತಿ ಶಿಲ್ಪದ ಆಚರಣೆಗಳು ನಡೆಯುತ್ತವೆ. ಗೌರಿ ಪೂಜೆಗಳಲ್ಲಿ ಹಲವಾರು ವಿಧಾನಗಳು ಇವೆ. ಅಷ್ಟಮಿಯ ಗೌರಿ, ತೊಟ್ಟಿಲು ಗೌರಿ, ಮಂಗಲ ಗೌರಿ, ಸಂಪತ್ತ ಗೌರಿ, ಗಜ ಗೌರಿ, ಕುಂಕುಮ ಗೌರಿ, ಹೀಗೆ ಹಲವಾರು ರೀತಿಯ ಗೌರಿಗಳನ್ನು ಹಳ್ಳಿಯ ಹೆಣ್ಣು ಮಕ್ಕಳು ಪೂಜಿಸುವ ಸಂಪ್ರದಾಯ ಕಂಡುಬರುತ್ತದೆ.

ಕಿನ್ನರಿ ಶಿಲ್ಪ

ನವಿಲಿನ ದೇಹ ಮತ್ತು ಮುಖವು ಮಹಿಳೆಯದ್ದಾಗಿದೆ. ಮಹಿಳೆಯ ಕೈಯಲ್ಲಿ ತಂಬೂರಿ ಹಿಡಿದಿದ್ದಾಳೆ. ನವಿಲಿನ ಗರಿಯು ಹೂವು ಬಳ್ಳಿಗಳಿಂದ ಅಲಂಕೃತವಾಗಿವೆ.

ಕುದುರೆ

ಓಡುತ್ತಿರುವ ಭಂಗಿಯಲ್ಲಿರುವ ಕುದುರೆಯ ಶಿಲ್ಪದ್ದಾಗಿದೆ. ದೇವದಾನವರು ಕ್ಷೀರಸಾಗರ ಕಡೆದಾಗ ಹದಿನಾಲ್ಕು ಅಮೂಲ್ಯ ವಸ್ತುಗಳಲ್ಲಿ 'ಉಚ್ಚೈಶ್ರವಸ್' ಎಂಬ ಕುದುರೆಯು ದೊರೆಯುತ್ತೆಂದು ಪುರಾಣಗಳಿಂದ ತಿಳಿದುಬರುತ್ತದೆ. ಇಂದ್ರನು ಇದಕ್ಕೆ ಅಮೃತವನ್ನು ಕುಡಿಸುತ್ತಿದ್ದನಂತೆ. ಇಂದ್ರ, ಸೂರ್ಯ, ರಾಹುಕೇತು, ಇತ್ಯಾದಿಗಳ ಕುದುರೆಗಳನ್ನು ಕಟ್ಟಲಾಗಿರುತ್ತದೆ. ಕುದುರೆಯು ಬಿಳಿ ಬಣ್ಣದಿಂದ ಲೇಪಿತವಾಗಿದೆ. ಕೊರಳಿನಲ್ಲಿ ಆಭರಣಗಳಿಂದ ಅಲಂಕೃತವಾಗಿದೆ. ಅಗಲವಾದ ಕಣ್ಣು ಹೊಂದಿದ್ದು ಕುದುರೆಯು ಮುಂದಿನ ಎರಡುಕಾಲುಗಳನ್ನು ಮೇಲಕ್ಕೆ ಎತ್ತಿದ ಶಿಲ್ಪ ಇದಾಗಿದೆ.

ನಂದಿಯ ಶಿಲ್ಪ

ನಂದಿಯು ಶಿವನ ವಾಹನ. ಇದನ್ನು ವೃಷಭ ಎಂದು ಕರೆಯುತ್ತಾರೆ. ಶಿವ ಗಣದಲ್ಲಿ ನಂದಿಯು ಪ್ರಸಿದ್ದನು. ಶಿವನ ವಾಹನವಾದ ನಂದಿಯು ಅನೇಕ ಶೈವ ದೇವಾಲಯಗಳಲ್ಲಿ ಕಾಣಬಹುದು. ಇವು ಶುದ್ಧ ಜನಪದ ಶೈಲಿಯಲ್ಲಿವೆ. ಈ ಶಿಲ್ಪಗಳಿಗೆ ಸಾಮಾನ್ಯವಾಗಿ ಬಿಳಿಯ ಬಣ್ಣ ಲೇಪಿಸಿರುತ್ತಾರೆ. ಗಂಭೀರತೆಯಿಂದ ನಿಂತಿರುವ ನಂದಿಯ ಶಿಲ್ಪಕ್ಕೆ ಕೊರಳಿನಲ್ಲಿ ಆಭರಣಗಳನ್ನು ರಚಿಸಿದ್ದಾರೆ.

ಕಾಮರತಿ ಶಿಲ್ಪಗಳು

ಹೋಳಿ ಹಬ್ಬಕ್ಕೆ ಕಾಮನ ಹಬ್ಬವೆಂದು ಕರೆಯುತ್ತಾರೆ. ಭಾರತದಲ್ಲಿ ಆಚರಿಸುವ ಪುರುಷ ಪ್ರಧಾನ ಹಬ್ಬಗಳಲ್ಲಿ ಇದು ಒಂದೇ ಹಬ್ಬವೆಂದು ಹೇಳಲಾಗುತ್ತದೆ, ವಿಷ್ಣು ಪುರಾಣ, ಭಾಗವತ, ಲಿಂಗಪುರಾಣ ಮುಂತಾದ ಕಡೆಗೆ ಬರುವ ಶಿವನ ಕಥೆಯ ಹಿನ್ನೆಲೆಯಲ್ಲಿ ಈ ಹಬ್ಬ ಆಚರಣೆಗೊಳ್ಳುತ್ತದೆ.

ಲೋಕಕಲ್ಯಾಣಕ್ಕಾಗಿ ಕಾಮನು ಶಿವನ ತಪಸ್ಸನ್ನು ಕೆಡಿಸಿದ್ದು ಶಿವನ ಉರಿಗಣ್ಣಿನಿಂದ ಕಾಮ ಸುಟ್ಟುಹೋದದ್ದು ಮುಂದೆ ಶಿವನಿಂದ ಮತ್ತೆ ಜೀವಿಸುವಂತೆ ವರಪಡೆದ ಕಾಮನ ಕಥೆಯ ಆಧಾರದ ಮೇಲೆ ಈ ಸಂಪ್ರದಾಯ ಜನಪದರಲ್ಲಿ ಬೆಳೆದು ಬಂದಿದೆ. ಕಾಮನು ತುಂಬ ಸುಂದರನೆಂದು ಅವನನ್ನು ಎಲ್ಲರೂ ಹಾಡಿ ಹೊಗಳಿರುವುದು ಸರ್ವವಿದಿತ. ಚೆಲುವಿಕೆಗೆ ಇನ್ನೊಂದು ಹೆಸರೇ ಕಾಮ, ಇಂತಹ ಚೆಲುವಿನ ಹಿನ್ನೆಲೆಯಿರುವ ಕಾಮನ ಶಿಲ್ಪವನ್ನು ಅತ್ಯಂತ ರಸಿಕತನದಿಂದ ಸೊಗಸುಗಾರಿಕೆಯಿಂದ ನಿರ್ಮಿಸುತ್ತಾರೆ. ಹೋಳಿ ಹುಣ್ಣಿಮೆ ದಿವಸ ಕಾಮನ ಸುಂದರವಾದ ಮೂರ್ತಿ ಶಿಲ್ಪವನ್ನು ಮಾಡಿಸಿ ಊರಲ್ಲಿಯ ಕಾಮನ ಕಟ್ಟೆಯ ಚಾವಡಿಯಲ್ಲಿ ಅವನನ್ನು ಅಲಂಕಾರ ಮಾಡಿ ಪೂಜಿಸುವ ಆಚರಣೆ ಇದೆ. ಕೆಲವೊಂದು ಶಿಲ್ಪಗಳಲ್ಲಿ ರತಿಯ ಹೆಣ್ಣು ಶಿಲ್ಪವನ್ನು ಮಾಡಿ ಕಾಮನ ತೊಡೆಯ ಮೇಲೆ ಕೂರಿಸಲಾಗುತ್ತದೆ.



ಈ ಮೂರ್ತಿಗಳನ್ನು ನೋಡಿ ಕಾಮದ ಮರ್ಮವನ್ನು ಅರಿಯಲು ಅಥವಾ ಸುಂದರ, ಸುಂದರಿಯರನ್ನು ನೋಡಿ ಆನಂದಿಸುವ ಉದ್ದೇಶದಿಂದಲೂ ಬಹಳಷ್ಟು ಸ್ತ್ರೀ ಪುರುಷರು ಸಂಜೆಯಿಂದ ಪ್ರಾರಂಭಿಸಿ ಮಧ್ಯರಾತ್ರಿಯವರೆಗೆ ಅಲ್ಲಲ್ಲಿ ಕೂಡಿಸಿರುವ ರತಿಕಾಮನನ್ನು ನೋಡುತ್ತಾರೆ. ಕಾಮ ರತಿಯ ಶಿಲ್ಪಗಳು ಮಾನವ ಗಾತ್ರದಾಗಿರುತ್ತವೆ. ಶಿವರು ತಪಸ್ಸು ಭಂಗ ಮಾಡಲು ಪ್ರಯತ್ನಿಸಿದಾಗ ಮುಕ್ಕಣ್ಣನು ತನ್ನ ಮೂರನೆಯ ಕಣ್ಣಿನಿಂದ ಬಿಟ್ಟ ಅಗ್ನಿಯಿಂದ ಇವರನ್ನು ದಹಿಸಿತು ಎನ್ನುವ ಆಧಾರದ ಮೇಲೆ ಈ ಜನಪದ ಮೂರ್ತಿಗಳು ಬಂದಿವೆ.



ಕಾಮನ ಶಿಲ್ಪ



ರತಿಯ ಶಿಲ್ಪ

ಕಾಮ-ರತಿಯರ ಶಿಲ್ಪ











ಕಾಮನ ಶಿಲ್ಪ

ಕಾಮನು ತುಂಬಾ ಸುಂದರನೆಂದು ಅವನನ್ನು ಎಲ್ಲರೂ ಹಾಡಿ ಹೊಗಳಿರುವುದು ಸರ್ವವಿದಿತ. ಚೆಲುವಿಗೆ ಇನ್ನೊಂದು ಹೆಸರೇ ಕಾಮ. ಕಾಮನು ದೃಢಕಾಯನಾಗಿದ್ದು, ಹಳದಿ ಮೈ ಬಣ್ಣವಾಗಿದೆ. ಜಾಂಬಳಿ ಮತ್ತು ನೀಲಿ ವರ್ಣದ ಉಡುಪುಗಳು ಬಟ್ಟಲ ಕಣ್ಣುಗಳು, ಚೂಪಾದ ಮೂಗು, ಹಾಗೂ ಕೋರೆ ಮೀಸೆ ಮತ್ತು ಹಣೆಯ ಮೇಲೆ ನಾಮವನ್ನು ಹೊಂದಿದೆ. ಕಾಮನ ಕೈಕಾಲುಗಳಲ್ಲಿ ಬಂಗಾರದ ಕಡಗಗಳು ತುಂಬಾ ಆಕರ್ಷಕವಾಗಿ ಮೂಡಿಬಂದಿವೆ.

ರತಿಯ ಶಿಲ್ಪ

ಈ ರತಿಯ ಶಿಲ್ಪವು ಕುಳಿತಿರುವ ಭಂಗಿಯು ಆಕರ್ಷಕವಾಗಿದೆ. ಈ ಶಿಲ್ಪ ಕಲಾಕೃತಿಯಲ್ಲಿ ರತಿಯ ಮೈಬಣ್ಣವು ದಟ್ಟ ಹಳದಿ ವರ್ಣದ್ದಾಗಿದೆ. ಬಿಲ್ಲಿನಂತಹ ಹುಬ್ಬು, ಬಟ್ಟಲ ಕಣ್ಣುಗಳು, ಮೂಗಿನಲ್ಲಿ ಮೂಗುತಿ, ಮುಗುಳ್ನಗೆ ಹೊಂದಿದ ಕೆಂದುಟಿ, ಕಿವಿಗಳಲ್ಲಿ ಓಲೆಗಳು, ಕೊರಳಲ್ಲಿ ಆಭರಣಗಳು ಮತ್ತು ಕೈಕಾಲುಗಳಲ್ಲಿ ಆಭರಣಗಳನ್ನು ಹೊಂದಿದೆ. ಎಡಗಾಲನ್ನು ಮಡಚಿಕೊಂಡು ಕುಳಿತಿರುವ ಶಿಲ್ಪಕ್ಕೆ ಹಸಿರು ಮತ್ತು ಕೆಂಪು ವರ್ಣದ ಉಡುಪುಗಳು, ರತಿಯ ಸ್ತನಗಳು ಕುಪ್ಪಸದಿಂದ ಹೊರಬಂದಿವೆ ಎಂದು ತೋರಿಸಲು ಸ್ತನಗಳಿಗೆ ಮಾತ್ರ ಕೆಂಪು ವರ್ಣವನ್ನು ಲೇಪಿಸಲಾಗಿದೆ.

ಕೀಲುಗೊಂಬೆಗಳು

ನೃತ್ಯ ಭಂಗಿಯಲ್ಲಿರುವ ಈ ಕೀಲುಗೊಂಬೆಯ ಶಿಲ್ಪ ಆಕರ್ಷಕವಾಗಿದೆ. ಕೆಂಪು ಮತ್ತು ನೀಲಿವರ್ಣದ ಉಡುಪನ್ನು ಹೊಂದಿದೆ. ಈ ಶಿಲ್ಪದ ಮೈಬಣ್ಣವು ತಿಳುಗುಲಾಬಿಯಾಗಿದೆ. ಕಪ್ಪನೆಯ ಕೇಶ ಅದರ ಮೇಲೆ ಲಜಾವರ ವರ್ಣದ ಕಿರೀಟ ಹೊಂದಿದೆ. ಬಟ್ಟಲ ಕಣ್ಣುಗಳು, ಚೂಪಾದ ಮೂಗು, ಕೆಂದುಟಿ ಕೊರಳಲ್ಲಿ ಆಭರಣಗಳಿವೆ. ಭುಜ, ಮೊಣಕೈ ಮತ್ತು ಮುಂಗೈಯನ್ನು ಕೀಲುಗಳಿಂದ ಜೋಡಿಸಲಾಗಿದೆ. ಹಾಗೆಯೇ ಸೊಂಟ ಮತ್ತು ಮೊಣಕಾಲುಗಳನ್ನು ಕೀಲುಗಳಿಂದ ಜೋಡಿಸಲಾಗಿದೆ.

ಹಣ್ಣು-ಹಂಪಲಗಳು

ನುಗ್ಗೆ ಕಟ್ಟಿಗೆಗಳಿಂದ ತಯಾರಿಸಲಾದ ಹಣ್ಣು ಹಂಪಲಗಳ ತಟ್ಟೆ ಬಹಳ ಹಗುರವಾಗಿರುತ್ತದೆ. ದಾಳಿಂಬೆ, ಮೋಸಂಬೆ, ಪೇರಲು, ಬಾಳೆಹಣ್ಣು, ಮಾವು, ಕೊಬ್ಬರಿ ಬಟ್ಟಲು, ಸೀತಾ ಫಲ್, ನೀರಲ ಹಣ್ಣು, ಇವೆಲ್ಲವುಗಳನ್ನು ತಟ್ಟೆಯಲ್ಲಿ ಕ್ರಮಬದ್ಧವಾಗಿ ಜೋಡಿಸಿರುತ್ತಾರೆ. ನೈಜವಾಗಿರುವಂತೆ ಹಣ್ಣಿನ ನೈಜ ಬಣ್ಣಗಳಂತೆ ಬಣ್ಣವನ್ನು ಲೇಪಿಸಿರುತ್ತಾರೆ. ಹಣ್ಣಿನ ತಟ್ಟೆಗಳಲ್ಲಿ ವರ್ತುಳ ಮತ್ತು ಆಯತಾಕಾರದ ತಟ್ಟೆಗಳಿವೆ.

ಕಿನ್ನಾಳ ಚೌಕಿಗಳು

ಚಿತ್ರಗಾರರು ರಚಿಸುವ ಚೌಕಿಗಳು "ಕಿನ್ನಾಳ ಚೌಕಿ"ಗಳೆಂದೇ ಪ್ರಸಿದ್ಧ ಪಡೆದಿವೆ. ಚೌಕಿಗಳನ್ನು ತಯಾರಿಸಲು ಪ್ಲೈವುಡ್ ಹಲಗೆಯನ್ನು ಬಳಸುತ್ತಾರೆ. ಚೌಕಿಗಳನ್ನು ತಯಾರಿಸಲಿಕ್ಕೆ ಸಮತಟ್ಟಾದ ಕಟ್ಟಿಗೆ ಬೇಕಾಗುವುದರಿಂದ ಅದಕ್ಕಾಗಿ ಪ್ಲೈವುಡ್‌ನ್ನು ಹೆಚ್ಚಾಗಿ ಬಳಸುತ್ತಾರೆ. ಪ್ಲೈವುಡ್ ವಾಟರ್ ಪ್ರೂಫ್ ಆಗಿರುವುದರಿಂದ ಅದು ಸೆಟಿ ಬರುವುದಿಲ್ಲ. ಕಿನ್ನಾಳ ಚೌಕಿ, ಗೋಡೆ ಫಲಕಗಳನ್ನು ರಚಿಸಲಿಕ್ಕೆ ಹೆಚ್ಚಾಗಿ ಬಳಸುತ್ತಾರೆ.

ಕಿನ್ನಾಳ ಚೌಕಿಗಳು ವಿವಿಧ ನಮೂನೆಗಳಿವೆ. ಅಷ್ಟಕೋನಾಕೃತಿಯ ಹಲಗೆಗೆ ಎಂಟು ಕಾಲುಗಳ ಆಧಾರ ನೀಡಿ ತಾವೇ ತಯಾರಿಸಿದ 'ಲಜವಾರ' ಬಣ್ಣದಿಂದ ನಕ್ಷೆಗಳ ಚಿತ್ತಾರಗಳನ್ನು ರೂಪಿಸುತ್ತಾರೆ. ಅಷ್ಟಭುಜಾಕೃತಿ, ನಕ್ಷತ್ರಾಕೃತಿ, ಸ್ವಸ್ತಿಕ್ ವರ್ತುಳ ಮುಂತಾದ ನಾನಾ ಆಕಾರದ ಚೌಕಿಗಳಿಗೆ ದೇಶಿಯವಾಗಿ ತಯಾರಿಸಿದ ಬಣ್ಣದಿಂದ ಎಲೆ ಹೂವು, ಬಳ್ಳಿಗಳಿಂದ ಸೂಕ್ಷ್ಮವಾಗಿ ಚಿತ್ರಿಸುತ್ತಾರೆ. ಮತ್ತು ಫಲಕಗಳಲ್ಲಿ ದಶಾವತಾರ, ನವಗ್ರಹ, ಅಷ್ಟದಿಕ್ಪಾಲಕರು ಹಾಗೂ ದೇವತೆಗಳ ಚಿತ್ರಗಳನ್ನು ಬಿಡಿಸುತ್ತಾರೆ. ಬಣ್ಣಗಳ ಸಂಯೋಜನೆ, ಸೂಕ್ಷ್ಮರೇಖೆಗಳಿಂದ ಚೌಕಿಗಳು ಅಲಂಕೃತಗೊಂಡಿರುತ್ತವೆ.

ಕಿನ್ನಾಳದ ಹಣ್ಣು ಹಂಪಲುಗಳು





ಕೀಲುಗೊಂಬೆಗಳು



ನರ್ತಕಿಯರ ಗೊಂಬೆಗಳು

ಅಷ್ಟಭುಜಾಕೃತಿಯ ಗೋಡೆಯ ಫಲಕ

ಅಷ್ಟಭುಜವನ್ನು ಹೊಂದಿದ ಈ ಫಲಕವು ಕೆಂಪು ವರ್ಣದಿಂದ ಕೂಡಿದ್ದು ಮಧ್ಯ ಬಿಂದುಗಳಿಂದ ಎರಡು ವೃತ್ತಗಳನ್ನು ರಚಿಸಿ ಅದರಲ್ಲಿ ಎಲೆ, ಹೂವು ಬಳ್ಳಿ ಮತ್ತು ನಕ್ಷೆಗಳಿಂದ ಅಲಂಕರಿಸಿದ್ದಾರೆ. ಉಳಿದ ಭಾಗದಲ್ಲಿಯೂ ಸಹ ಸುಳಿವಿನ ಆಕಾರದ ನಕ್ಷೆಯನ್ನು ಚಿತ್ರಿಸಲಾಗಿದೆ. ಬಿಳಿ, ನೀಲಿ, ಹಳದಿ ವರ್ಣಗಳಿಂದ ಚಿತ್ರಗಳನ್ನು ರಚಿಸಿದ್ದಾರೆ. ಮತ್ತು ಲಜಾವರ ಬಣ್ಣದಿಂದ ಅಲಂಕೃತವಾಗಿದೆ. ರೇಖಾ ವಿನ್ಯಾಸ, ಸಂಯೋಜನೆ, ಮತ್ತು ಲಯ ಬದ್ಧವಾದ ರೇಖೆಗಳಿಂದ ಕೂಡಿವೆ.

ವರ್ತುಳಾಕಾರದ ಗೋಡೆಯ ಫಲಕ

ವರ್ತುಳಾಕಾರದ ಫಲಕದ ಮೇಲೆ ವಿಷ್ಣುವಿನ ದಶಾವತಾರದ ಚಿತ್ರಗಳಿಂದ ಫಲಕವನ್ನು ಅಲಂಕರಿಸಲಾಗಿದೆ. ಮಧ್ಯಬಿಂದುವಿನಿಂದ ಒಂದು ವೃತ್ತವನ್ನು ರಚಿಸಿ ಅದರಲ್ಲಿ ವಿಷ್ಣುವಿನ ಚಿತ್ರವನ್ನು ಚಿತ್ರಿಸಲಾಗಿದೆ. ಮೈಬಣ್ಣ ನೀಲಿವರ್ಣವಾಗಿದ್ದು ಕೈಗಳಲ್ಲಿ ಶಂಖ ಚಕ್ರಗಳನ್ನು ಹಿಡಿದಿದ್ದಾನೆ. ಮತ್ತು ಚಿಕ್ಕ ಚಿಕ್ಕ ವೃತ್ತಗಳನ್ನು ರಚಿಸಿ ಅದರಲ್ಲಿ ವಿಷ್ಣುವಿನ ದಶಾವತಾರಗಳಾದ ಕೂರ್ಮ, ವರಹ, ಮತ್ಸ್ಯ, ಕೃಷ್ಣಾವತಾರ, ಶ್ರೀ ರಾಮ, ಉಗ್ರನರಸಿಂಹವತಾರ, ವಾಮನ, ಬೌದ್ಧವತಾರ,ಪರುಶುರಾಮ ಮತ್ತು ಕಲ್ಕಿವತಾರಗಳ ಚಿತ್ರಗಳು ವರನ ಸಂಯೋಜನೆ ಮತ್ತು ರೇಖಾವಿನ್ಯಾಸದಿಂದ ಕೂಡಿವೆ. ಲಜಾವರ ವರ್ಣದಿಂದ ಎಲೆ, ಹೂವು ಬಳ್ಳಿ ವಿನ್ಯಾಸಗಳಿಂದ ಅಲಂಕರಿಸಲಾಗಿದೆ.

ಅಷ್ಟಭುಜಾಕೃತಿಯ ಗೋಡೆಯ ಫಲಕ

ಅಷ್ಟಭುಜಾಕೃತಿಯ ಫಲಕದ ಮೇಲೆ ಅಷ್ಟದಿಕ್ಪಾಲಕರ ಚಿತ್ರಗಳನ್ನು ಚಿತ್ರಿಸಲಾಗಿದೆ. ಮಧ್ಯದಲ್ಲಿ ಹೂವು ಬಳ್ಳಿಗಳಿಂದ ಅಲಂಕರಿಸಲಾಗಿದೆ. ಫಲಕದಲ್ಲಿ ಸಮನಾಗಿ ಅಷ್ಟಭಾಗಗಳನ್ನಾಗಿ ಮಾಡಿ ಅವುಗಳಲ್ಲಿ ಒಂದೊಂದಾಗಿ ಅಷ್ಟದಿಕ್ಪಾಲಕರ ಚಿತ್ರಗಳನ್ನು ಚಿತ್ರಿಸಿದ್ದಾನೆ. ಕೆಂಪು, ನೀಲಿ, ಬಿಳಿ ಮತ್ತು ಹಳದಿ, ಹಸಿರು, ಬಣ್ಣಗಳಿಂದ ಈ ಚಿತ್ರಗಳನ್ನು ಚಿತ್ರಿಸಲಾಗಿದೆ. ಈ ಚಿತ್ರಗಳು ಸೂಕ್ಷ್ಮರೇಖೆ, ವರ್ಣಸಂಯೋಜನೆಯಿಂದ ಕೂಡಿವೆ.

ಅಷ್ಟಭುಜಾಕೃತಿಯ ಸಿಂಹಾಸನ ಚೌಕಿ

ಎಂಟು ಕಾಲುಗಳುಳ್ಳ ಅಷ್ಟಭುಜಾಕೃತಿಯ ಹಲಗೆಯು ಪ್ರಭಾವಳಿ ಹೊಂದಿದ್ದು ಇದು ಸಿಂಹಾಸನದಂತೆ ರಚಿಸಲಾಗಿದೆ. ಅಷ್ಟಭುಜಾಕೃತಿಯ ಹಲಗೆಯ ಮೇಲೆ ಸುಂದರ ನಕ್ಷೆಗಳು ಮತ್ತು ಎಲೆ ಹೂವುಬಳ್ಳಿಗಳ ವಿನ್ಯಾಸದಿಂದ ಅಲಂಕರಿಸಲಾಗಿದೆ. ಮತ್ತು ಸುತ್ತಲೂ ಕಪ್ಪು ವರ್ಣವನ್ನು ಲೇಪಿಸಿ ಅದರ ಮೇಲೆಯೂ ಸಹ ಹೂವುಬಳ್ಳಿಗಳ ಚಿತ್ರಗಳನ್ನು ಲಜಾವರಣ ವರ್ಣಗಳಿಂದ ಅಲಂಕೃತವಾಗಿದೆ.

ಕಿನ್ನಾಳ ಕುರ್ಚಿ

ಕುರ್ಚಿಯ ಮೇಲೆ ಲಜಾವರ ವರ್ಣಗಳಿಂದ ಸುಂದರವಾದ ಹೂವುಬಳ್ಳಿಗಳ ವಿನ್ಯಾಸಗಳಿಂದ ಅಲಂಕೃತವಾಗಿದೆ. ಕೆಂಪು, ನೀಲಿ, ಬಿಳಿ, ಕಪ್ಪು, ವರ್ಣಗಳನ್ನು ಉಪಯೋಗಿಸಿದ್ದಾರೆ. ಕೆಂಪು ಬಣ್ಣವನ್ನು ಹೆಚ್ಚಾಗಿ ಕಾಣಬಹುದು.

ಪಲ್ಲಕ್ಕಿ

ರಥೋತ್ಸವದಲ್ಲಿ ಉತ್ಸವ ಮೂರ್ತಿಯನ್ನು ಇರಿಸಿಕೊಂಡು ಮೆರವಣಿಗೆಯನ್ನು ಮಾಡುವ ಸಾಧನ ಇದಾಗಿದೆ. ಪಲ್ಲಕ್ಕಿಯ ಬಳಕೆಯನ್ನು ಹಂಪೆಯ ವಿರುಪಾಕ್ಷ ದೇವಾಲಯವನ್ನು ಮುಖಮಂಟಪದ ಛಾವಣಿಯಲ್ಲಿ ರಚಿಸಿರುವ ಭಿತ್ತಿ ಚಿತ್ರದಲ್ಲಿ ಕಾಣಬಹುದು. ಈ ಚಿತ್ರದಲ್ಲಿ ಮೆರವಣಿಗೆಯೊಂದರ ಸಂದರ್ಭದಲ್ಲಿ ಯತಿಯೊಬ್ಬರು ಪಲ್ಲಕ್ಕಿಯಲ್ಲಿ ಕುಳಿತಿದ್ದು ಅದನ್ನು ನಾಲ್ವರು ಹೊತ್ತು ಸಾಗುತ್ತಿದ್ದಾರೆ. ಈ ಯತಿಗಳನ್ನು ವಿದ್ಯಾರಣ್ಯರು ಎಂದು ಗುರುತಿಸಲಾಗಿದೆ. ಪಲ್ಲಕ್ಕಿಗಳು ಸಾಮಾನ್ಯವಾಗಿ ಐದು ಅಡಿ ಉದ್ದವನ್ನು, ಎರಡೂವರೆ ಅಡಿ ಅಗಲವನ್ನು ಮತ್ತು ಹನ್ನೆರಡು ಅಂಗುಲ ಎತ್ತರವನ್ನು ಹೊಂದಿರುತ್ತವೆ. ಪಲ್ಲಕ್ಕಿಯನ್ನು ರಚಿಸಲು ಹನ್ನೆರಡು ಅಂಗುಲ ಎತ್ತರಕ್ಕೆ ಸುತ್ತಲೂ ಮರದ ಹಲಗೆಯಿಂದ ಹೆಚ್ಚು ಬಾಗಿಲದ 'ಎಸ್' ಅಕ್ಷರದ ಆಕಾರದ ಚೌಕಟ್ಟನ್ನು ನಿರ್ಮಿಸಲಾಗುತ್ತದೆ.





ಕಿನ್ನಾಳದ ಪಲ್ಲಕ್ಕಿ






ಅಷ್ಟಭುಜಾಕೃತಿಯ ಗೋಡೆಯ ಫಲಕ



ಚೌಕಾಕಾರದ ಗೋಡೆಯ ಫಲಕ





ವರ್ತುಳಾಕರದ ಗೋಡೆಯ ಫಲಕದಲ್ಲಿ ಚಿತ್ರಿತಗೊಂಡ ವಿಷ್ಣುವಿನ ದಶಾವತಾರದ ದೃಶ್ಯಗಳು



ಅಷ್ಟಭುಜಾಕೃತಿಯ ಗೋಡೆಯ ಫಲಕ



ಚೌಕಿಯ ಮೇಲಿನ ದಶಾವತಾರದ ಚಿತ್ರಗಳು







ಅಷ್ಟಭುಜಾಕೃತಿಯ ಸಿಂಹಾಸನ ಚೌಕಿ



ಕಿನ್ನಾಳ ಕುರ್ಚಿ

ತಲಭಾಗವನ್ನು ಹಲಗೆಯಿಂದ ಜೋಡಿಸಲಾಗುವುದು. ಪಲ್ಲಕ್ಕಿಯ ಎರಡುಕಡೆ ಕತ್ತರಿ ಆಕಾರದ ಪಟ್ಟಿಗಳ ನಡುವೆ ಕಮಾನಿನ ಆಕೃತಿಯ ಬೊಂಬನ್ನು ಬಿಗಿಯಾಗಿ ಕಟ್ಟುತ್ತಾರೆ. ಗ್ರಾಮದೇವತೆಗಳು ಸಹ ತಮ್ಮದೇ ಆದ ಪಲ್ಲಕ್ಕಿಯನ್ನು ಹೊಂದಿವೆ. ಹೀಗಾಗಿ ಎಲ್ಲಾ ದೇವಾಲಯಗಳಲ್ಲಿ ಪಲ್ಲಕ್ಕಿಯ ಬಳಕೆಯನ್ನು ಕಾಣಬಹುದು. ಪಲ್ಲಕ್ಕಿಗೆ ಕೆಂಪು ಬಣ್ಣವು ಲೇಪಿಸಲಾಗಿದೆ. ಪಲ್ಲಕ್ಕಿಯ ಸುತ್ತಲೂ ದೇವ ದೇವತೆಯರ ಚಿತ್ರಗಳಿವೆ.

ದುರುಗಮುರುಗಿಯವರ ಪೆಟ್ಟಿಗೆ

ಕನ್ನಡ ನಾಡಿನಲ್ಲಿ ದೈವಭಕ್ತಿ ಮತ್ತು ದೇವರ ಮೇಲಿನ ನಂಬಿಕೆಗೆ ಅದೆಷ್ಟು ಮಾಧ್ಯಮಗಳು ರೂಪಗೊಂಡಿವೆ ಎಂದರೆ, ಆ ನಂಬಿಕೆಯ ಮಾಧ್ಯಮವಾದ ದೇವರ ಹೆಸರಿನಲ್ಲಿ ಕೆಲವು ಕುಟುಂಬಗಳೇ ತಮ್ಮ ವೃತ್ತಿಯನ್ನಾಗಿಸಿಕೊಂಡು ಅದಕ್ಕೆ ಕಸುಬನ್ನಾಗಿಸಿಕೊಂಡಿರುವುದು ಕಂಡುಬರುತ್ತದೆ. ಅದಕ್ಕೆ ಉದಾಹರಣೆ ಎಂದರೆ ದುರುಗ ಮುರುಗಿ ಆಡಿಸುವ ಜನಾಂಗ ಇದು ಅಲೇಮಾರಿ ಜನಾಂಗವಾಗಿದ್ದು, ತಾವು ಈ ದೇವರ ಪೆಟ್ಟಿಗೆಯನ್ನೇ ಆಶ್ರಯಿಸಿಕೊಂಡು ಬದುಕುತ್ತಿದ್ದಾರೆ.

ದುರುಗ ಮುರುಗಿ ಪೆಟ್ಟಿಗೆ ಇದು ಜನಪದ ಶೈಲಿಯಲ್ಲಿದ್ದು, ಇದು ಮೂರು ಅಡಿಗಳ ಎತ್ತರ ಒಂದೂವರೆ ಅಡಿ ಅಗಲಗಳಿಂದ ಕೂಡಿದ ಚೌಕಾದ ಆಯತಾಕಾರದಲ್ಲಿ ಕಪಾಟಿನ ಮಾದರಿಯನ್ನೇ ಇರುತ್ತದೆ. ಇದು ತೆರೆಯಲು ಮುಚ್ಚಲು ಕದಗಳ ವ್ಯವಸ್ಥೆ ಇರುತ್ತದೆ. ಈ ದುರುಗಮುರಗಿಯ ಪೆಟ್ಟಿಗೆಯನ್ನು ಹಗುರಾದ ತೆಳ್ಳನೆಯ ಒಣಗಿದ ಮರದ ಹಲಿಗೆಯಿಂದ ನಿರ್ಮಿಸಿರುತ್ತಾರೆ. ಹೆಚ್ಚಾಗಿ ಮಳಗಿನ ಮರ, ಬೇವಿನ ಮರ, ಮಾವಿನ ಮರಗಳು, ಮತ್ತು ಹೆಬ್ಬೇವಿನ ಮರದ ಹಲಗೆಗಳನ್ನು ಬಳಸುತ್ತಾರೆ. ಏಕೆಂದರೆ ಹೊತ್ತು ತಿರುಗುವ ಸಾಧನವಾಗಿರುವುದರಿಂದ ಇದನ್ನು ಗಮನದಲ್ಲಿರಿಸಿಕೊಂಡು ಮರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಸುತ್ತಲೂ ನಾಲ್ಕು ಬದಿಗೆ ನೆಲದಿಂದ ಅಂತರ ಇರಲು ಆರು ಇಂಚು ಎತ್ತರದ ಸ್ತಂಭಗಳು ಇರುತ್ತವೆ. ಒಟ್ಟು ಆರು ಪಾರ್ಶ್ವಗಳಿಂದ ಕೂಡಿರುತ್ತವೆ.

ಪೆಟ್ಟಿಗೆ ಎದುರಿನ ಭಾಗದ ಎರಡು ಕದಗಳನ್ನು ಅದರಲ್ಲಿ ಒಂದು ಕದದಲ್ಲಿ ಎರಡು ಭಾಗಮಾಡಿ ಮೇಲಿನ ಭಾಗದಲ್ಲಿ ದ್ವಾರಪಾಲಕರು ಕೆಳಗಿನ ಭಾಗದಲ್ಲಿ ಚಾಮರ ಬೀಸುವ ಸೇವಕಿಯ ಚಿತ್ರಗಳು, ಇದರ ಬದಿಯ ಭಾಗದಲ್ಲಿಯೇ ಮೇಲಿನ ಭಾಗ ದೇವಿಗೆ ಪೂಜೆ ಸಲ್ಲಿಸಿ ಕುರಿಕೋಳಿಗಳಂತಹ ಪ್ರಾಣಿಗಳನ್ನು ಹರಕೆ ಕೊಡುವ ಚಿತ್ರಗಳನ್ನು ರಚಿಸಲಾಗಿದೆ. ಕೆಳಗಿನ ಭಾಗದಲ್ಲಿ ಮೆರವಣಿಗೆಯ ದೃಶ್ಯ, ಇನ್ನೊಂದು ದೊಡ್ಡ ಭಾಗದಲ್ಲಿ ಒಂದು ನಡುವಿನಲ್ಲಿ ಅಂತಸ್ಥಿನ ಮನೆ ಅದರಲ್ಲಿ ನಿಂತು ಬಂದೂಕು ಧಾರಿಗಳು ಯುದ್ಧ ಮಾಡುವ ಸನ್ನಿವೇಶ ಎಡಬದಿಗೆ ಕುದುರೆ ಆನೆಯ ಮೇಲೆ ಎದುರು ಮುಖವಾಗಿ ಬಂದೂಕಿನೊಂದಿಗೆ ಯುದ್ಧಕ್ಕೆ ಹೊರಟಿರುವ ದೃಶ್ಯದ ಚಿತ್ರಗಳು ಮೂಡಿ ಬಂದಿವೆ. ಇವು ಹಿಂದಿನ ದಿನಗಳಲ್ಲಿ ಯುದ್ಧ ಮಾಡಿದ ಸನ್ನಿವೇಶಗಳನ್ನು ನೆನಪಿಗೆ ತರುತ್ತವೆ.

ದುರುಗ ಮುರುಗಿ ಪೆಟ್ಟಿಗೆಯ ಪಾರ್ಶ್ವ ನೋಟ


ಇನ್ನೊಂದು ಪಾರ್ಶ್ವ ಭಾಗದಲ್ಲಿ ಒಂದು ಕಥಾವಳಿಯನ್ನೇ ಸೃಷ್ಟಿಸಿ ಜನ ಸಮುದಾಯಕ್ಕೆ ಪಾಪ ಪ್ರಜ್ಞೆಯಿಂದ ಎಚ್ಚೆತ್ತುಕೊಳ್ಳುವಂತೆ ನೀತಿ ಭೋಧಕ ರೂಪಗಳನ್ನು ರಚಿಸಲಾಗಿದೆ. ಈ ಬದಿಯ ಹಲಗೆಯಲ್ಲಿ ಐದು ಸಮನಾದ ಭಾಗಗಳನ್ನಾಗಿ ಮಾಡಿಕೊಂಡು, ಮೊದಲನೆಯ ಭಾಗದಲ್ಲಿ ಮಧ್ಯ ಕೇಂದ್ರ ಬಿಂದುಗಳಾಗಿ ಯಮಧರ್ಮನು ಗದೆಯನ್ನು ಹೊತ್ತು ಕುಳಿತಿರುವ ಎಡಬದಿಯಲ್ಲಿ ಪಾಪಮಾಡಿದವರಿಗೆ ಶಿಕ್ಷೆ ವಿಧಿಸುವ ಚಿತ್ರವಿದೆ. ಇನ್ನೊಂದು ಚಿತ್ರ ಎತ್ತಿನ ಮುಂದೆ ಹಿರಿಸುವುದು, ಪಾಪ ಮಾಡಿದವರಿಗೆ ದನದ ಕಾಲಿನಿಂದ ಒದೆಸುವ ದೃಶ್ಯಗಳಿವೆ.

ಬಲ ಬದಿಯಲ್ಲಿ ರಥದ ಮೇಲಿನ ಯಮದೂತರು ಕುಳಿತು ಪಾಪಿಗಳಿಗೆ ರಥಕ್ಕೆ ನೊಗದೊಂದಿಗೆ ಕಟ್ಟಿ ರಥವನ್ನು ಎಳೆಯುವ ಶಿಕ್ಷೆಯು ಕಂಡು ಬರುತ್ತದೆ. ಎರಡನೆಯ ಭಾಗದಲ್ಲಿ ನೀರಿನಲ್ಲಿ ಮುಳುಗಿಸುವ ದೃಶ್ಯ, ಪಕ್ಕದಲ್ಲಿ ಹಿಂದಿನಿಂದ ತಿವಿಯುವ ದೃಶ್ಯ, ಇನ್ನೊಂದೆಡೆಗೆ ನಾಗರಹಾವಿನಿಂದ ಕಚ್ಚಿಸುವ ದೃಶ್ಯ, ಕೆಳಗಡೆ ಮೂರನೆಯ ಭಾಗದಲ್ಲಿ ಅಂತರಕ್ಕೆ (ಮೇಲೆ) ಎರಡು ಕೈಗಳನ್ನು ಕಟ್ಟಿ ಹಾಕಿ ಛಡಿಯಿಂದ ಥಳಿಸುವ ದೃಶ್ಯ, ಪಕ್ಕದಲ್ಲಿ ಕೋಲಿನಿಂದ ಬಡಿಯುವ ಚಿತ್ರ, ಇನ್ನೊಂದು ಚಿತ್ರದಲ್ಲಿ ಕಣ್ಣು ಕೀಳುವ ದೃಶ್ಯವು ಕಂಡುಬರುತ್ತದೆ. ನಾಲ್ಕನೆಯ





ದುರುಮುರುಗಿಯವರ ಪೆಟ್ಟಿಗೆ



ಕೆಳಭಾಗದಲ್ಲಿ ತಲೆಗೆ ಈಟಿಯಿಂದ ತಿವಿಯುವ ದೃಶ್ಯ, ಬೆಂಕಿಗೆ ಹಾಕಿ ದಹನ ಮಾಡು ದೃಶ್ಯ, ಮಧ್ಯ ಭಾಗದಲ್ಲಿ ಸಾಮೂಹಿಕವಾಗಿ ದನಗಳ ಕಾಲಿನಿಂದ ತುಳಿಸುವ ದೃಶ್ಯ, ಐದನೇಯ ಭಾಗದಲ್ಲಿ ಕಾದ ಎಣ್ಣೆಯಲ್ಲಿ ಹೊತ್ತು ಹಾಕುವ ದೃಶ್ಯ, ಮುಳ್ಳಿನ ಮೊಳೆಯ ಛಡಿ ಹಿಡಿದು ಯಮದೂತರು ಭಾದೆ ನೀಡುವ ದೃಶ್ಯಗಳು ಸರಳ ಬಾಹ್ಯರೇಖೆಗಳಿಂದ ಕೂಡಿದ್ದು. ಇಲ್ಲಿ ನೆರಳು ಬೆಳಕಿನ ದುಂಡತ್ವ ಕಂಡುಬರುವುದಿಲ್ಲ, ಮೂಲ ಬಣ್ಣಗಳಾದ ಕೆಂಪು, ಹಳದಿ, ನೀಲಿ ಕೆಲವು ಕಡೆ ಮಾತ್ರ ಕಪ್ಪು ಬಿಳಿ ಬಣ್ಣಗಳಿಂದ ಕೂಡಿವೆ.


*****

ಅಧ್ಯಾಯ : ಐದು

ಕಿನ್ನಾಳ ಸಂಕೀರ್ಣ ಮಾಧ್ಯಮದ ಕಲಾಕೃತಿಗಳು

ಕಿನ್ನಾಳ ಸಂಕೀರ್ಣ ಮಾಧ್ಯಮದ ಕಲಾಕೃತಿಗಳಲ್ಲಿ ಆಟಿಕೆಯ ವಸ್ತುಗಳು ಮತ್ತು ಶೆಗಣಿ ಮಾಧ್ಯಮದ ಕಲಾಕೃತಿಗಳು ಪ್ರಮುಖವಾಗಿವೆ. ಮಕ್ಕಳ ಜ್ಞಾನಾರ್ಜನೆಗೆ ಬಣ್ಣದ ಆಟಿಕೆಗಳು ಪ್ರಮುಖ ಪಾತ್ರವಹಿಸುತ್ತವೆ. ಸಹಸ್ರಾರು ವರ್ಷಗಳ ಹಿಂದಿನಿಂದಲೂ ಈ ವಸ್ತುಗಳಿಗೆ ಮಾನ್ಯತೆ ದೊರಕಿದೆ. ಪ್ರಾಚೀನ ಈಜಿಪ್ಟಿನ ಕೆಲ ಸಮಾಧಿಗಳಲ್ಲಿ ಆಟಿಕೆಯ ವಸ್ತುಗಳು ದೊರಕಿವೆ. ಗುಹೆಗಳಲ್ಲಿದ್ದ ಕಾಡು ಮಾನವರ ಮಕ್ಕಳೂ ಅದಕ್ಕಾಗಿ ಭರ್ಚಿಗಳನ್ನು ಬಳಸುತ್ತಿದ್ದು ಕಂಡು ಬರುತ್ತದೆ. ಜರ್ಮನಿ ದೇಶವು ಹಿಂದಿನಿಂದಲೂ ಆಟಿಕೆಗಳ ತೌರು ಮನೆಯಾಗಿತ್ತು. ಅಲ್ಲಿ ವಿಶೇಷವಾಗಿ ಮರಗಳನ್ನು ಬೆಳಸುತ್ತಿದ್ದುದರಿಂದ ಅನೇಕ ಆಟಿಕೆಗಳನ್ನು ಮರದಿಂದಲೇ ತಯಾರಿಸುತ್ತಿದ್ದುದು ತಿಳಿದುಬರುತ್ತದೆ.[೧]

ಗೊಂಬೆಗಳ ತಯಾರಿಕೆ ಭಾರತದ ಅತ್ಯಂತ ಪುರಾತನವಾದ ಕಲೆ. ನಾಗರಿಕತೆಯ ಉಗಮದಿಂದಲೂ ಅನೇಕ ಕುತೂಹಲಕಾರಿಯಾದ ಗೊಂಬೆಗಳನ್ನು ಕಾಣಬಹುದು. ಚರಿತ್ರೆಯ ಪೂರ್ವಯುಗವಾದ ಹರಪ್ಪಾ ಮೊಹೆಂಜುದಾರೊಗಳ ಸಂಸ್ಕೃತಿಯ ಸಮಯದಲ್ಲಿ ನಗರ ನಾಗರಿಕತೆಯ ಅಸ್ತಿತ್ವವನ್ನು ಇತಿಹಾಸಕಾರರು ಸಂಶೋಧಿಸಿದ್ದಾರೆ. ಈ ಸಂಸ್ಕೃತಿಯಲ್ಲಿ ಗೊಂಬೆಗಳಿಗೆ ಒಂದು ಮಿಗಿಲಾದ ಸ್ಥಾನವಿದ್ದುದನ್ನು ಕಾಣಬಹುದು. ಹರಪ್ಪಾ ಮೊಹೆಂಜೊದಾರುಗಳ ಸಂಶೋಧನೆಯಲ್ಲಿ ಹಾಸಿಗೆಯಲ್ಲಿ ಮಲಗಿಕೊಂಡ ಮಗುವೊಂದನ್ನು ಆರೈಸುತ್ತಿರುವ ಸ್ತ್ರೀಮೂರ್ತಿ ತುಂಬಾ ಕುತೂಹಲ ಮತ್ತು ಕರುಣಾಜನಕ ಭಾವವನ್ನು ಸ್ಫುರಿಸುತ್ತದೆ. ಒಂದು ವಿಧವಾದ ಒಳಲಂಗವನ್ನು ಧರಿಸಿ ಒಂದು ವಿಚಿತ್ರ ಆಕಾರದ ಟೋಪಿಯನ್ನು ಆ ಮೂರ್ತಿಗೆ ಹಾಕಲಾಗಿದೆ. ಹಾಗೆಯೇ ಆಟದ ಪದಾರ್ಥಗಳ ಸಮೂಹದಲ್ಲಿ ಪ್ರಾಣಿಗಳು ಕುತೂಹಲಕಾರಿಯಾಗಿಯೇ ಇವೆ. ತಲೆಯನ್ನು ಅತ್ತಿಂದಿತ್ತ ಅಲ್ಲಾಡಿಸಬಲ್ಲ ಗೂಳಿಗಳು ದೊರೆತಿವೆ. ಈ ಬಗೆಯ ಅಲ್ಲಾಡುವ ಅನೇಕ ತಲೆಗಳು ಈ ಸಂಶೋಧನೆಯಿಂದ ದೊರೆಕಿವೆ. ಕೋಳಿ ಹಾಗೂ ಪಾರಿವಾಳಗಳ ಆಕಾರದಲ್ಲಿರುವ ಪೀಪಿಗಳು ಮಣ್ಣಿನ ಚಕ್ರಗಳೂ ಶಂಖಗಳು ದೊರೆತಿವೆ. ಚಿಕ್ಕ ಆಟದ ಮಣ್ಣಿನ ಬಂಡಿಗಳು ಅತ್ಯಂತ ಪುರಾತನವಾದ ಆಟದ ವಸ್ತುಗಳು ಇವೆಲ್ಲವೂ ಆಟದ ಸಾಮಾನುಗಳ ಕೈಗಾರಿಕಾ ಕೇಂದ್ರವಾಗಿದ್ದ ಚಾನ್ಹುದಾರೋದಲ್ಲಿ ದೊರೆತಿವೆ.[೨]



ಓರಿಸ್ಸಾದ ಸಂಬಲಪುರ ಜಿಲ್ಲೆಯ ಬಾರಾಪಲಿ, ಅಸ್ಸಾಂನ ಬಿರಬುನ, ಪಶ್ಚಿಮ ಬಂಗಾಳದ ಬಂಕುರಾ, ಆಂಧ್ರಪ್ರದೇಶದ ಕೊಂಡಪಲ್ಲಿ, ಮಹಾರಾಷ್ಟ್ರದ ಸಾವಂತವಾಡಿ ಮತ್ತು ಕರ್ನಾಟಕದ ಗೋಕಾಕ ಕಲಘಟಗಿ, ಚನ್ನಪಟ್ಟಣ ಮುಂತಾದ ಪ್ರದೇಶಗಳಲ್ಲಿ ಸುಂದರ ಕಲಾತ್ಮಕ ಆಟಿಕೆ ಗೊಂಬೆ, ತೊಟ್ಟಿಲುಗಳು, ಹಣ್ಣು ಹಂಪಲು ಪ್ರಾಣಿ ಪಕ್ಷಿಗಳ ಕೃತಿಗಳನ್ನು ರಚಿಸುವಲ್ಲಿ ಪ್ರಸಿದ್ಧಿಯನ್ನು ಪಡೆದಿವೆ.

೦೧. ಬೆಸಕನಹಳ್ಳಿ ಜಿ. ನಾಯಕ : ಕರಕುಶಲ ಕಲೆಗಳು
೦೨. ಟಿ.ಆರ್.ಶಿವಸ್ವಾಮಿ (ಪ್ರ.ಸಂ) : ಶಿಲ್ಪಕಲಾ ಪ್ರಪಂಚ, ಪುಟ ೯೫

ಶೆಗಣಿ ಗೊಂಬೆ ರಚನಾ ವಿಧಾನ


ಈ ಗೊಂಬೆಗಳನ್ನು ಪ್ರಧಾನವಾಗಿ ಶೆಗಣಿಯಿಂದಲೇ ತಯಾರಿಸಲಾಗುತ್ತದೆ. ಮೊದಲು ದನಗಳ ಸಗಣಿಯನ್ನು ಬೇಕಾದಷ್ಟು ಪ್ರಮಾಣದಲ್ಲಿ ಕೂಡಿ ಹಾಕಿ ಅದರೊಂದಿಗೆ ಮರದ ಹೊಟ್ಟನ್ನು ಮಿಶ್ರಮಾಡಿ ಶೆಗಣಿಯನ್ನು ಹದ ಮಾಡಿಕೊಳ್ಳುತ್ತಾರೆ. ಗೊಂಬೆಗಳನ್ನಾಗಿಸಲು ಬೇರೆ ಬೇರೆ ಗಾತ್ರದ ಗೊಂಬೆಯ ಪಡಿಯಚ್ಚುಗಳಿರುತ್ತವೆ. ಈ ಸಾಚಾದಲ್ಲಿ ಶೆಗಣಿಯನ್ನು ತುಂಬಿ ಅದರ ಮಧ್ಯದಲ್ಲಿ ಬೆನ್ನಿಗೊಂದು ಕೈಮತ್ತು ಕಾಲುಗಳಿಗೆ ಸಜ್ಜೆಯ ಅಥವಾ ಜೋಳದ (ಬಿದಿರಿನಕಡ್ಡಿ) ದಂಟನ್ನು ಸೇರಿಸಿ, ಅವುಗಳನ್ನು ಸಾಚಾದಿಂದ ಬಡಿಸಿ ಬಿಸಿಲಿಗೆ ಆರಲು ಹಾಕುತ್ತಾರೆ. ಕರಡು ಶಿಲ್ಪವನ್ನು ರಚಿಸಿಕೊಂಡು ನಂತರ ಮತ್ತೆ ಕೈಯಿಂದ ತಿದ್ದಿ ತೀಡಿ ಶಿಲ್ಪವನ್ನು ಪೂರ್ಣಗೊಳಿಸಲಾಗುತ್ತದೆ. ಇಂಥ ನೂರಾರು ಗೊಂಬೆಗಳನ್ನು ತಯಾರಿಸಿಕೊಂಡು ಅವನ್ನೆಲ್ಲ ಬಿಸಿಲಿನಲ್ಲಿ ಒಂದು ವಾರ ಕಾಲ ಒಣಗಿಸಲಾಗುತ್ತದೆ. ಇದು ಮೊದಲ ಹಂತ. ಈ ಶಿಲ್ಪದ ಕೈಕಾಲುಗಳು ನಿಲ್ಲುವಂತೆ ಶೆಗಣಿಯ ಒಳಗೆ ಕಟ್ಟಿಗೆ ಕಡ್ಡಿಗಳನ್ನು ಮುಳಗಿಸಲಾಗಿರುತ್ತದೆ. ಇದು ಮೊದಲನೆಯ ಹಂತ.

ಎರಡನೆಯ ಹಂತದಲ್ಲಿ ಈ ಒಣಗಿದ ಗೊಂಬೆ ಶಿಲ್ಪಗಳಿಗೆ ಹುಣಸೆ ಬೀಜವನ್ನು ಜಜ್ಜಿ ಬೀಸಿದ ಹಿಟ್ಟಿನೊಂದಿಗೆ ಸಗಣಿ ಮತ್ತು ಅಂಟು ಸೇರಿಸಿ ಹದ ಮಾಡಿಕೊಂಡಿರುವ ಸರಿಯನ್ನು ಬಳೆಯುತ್ತಾರೆ. ನಂತರ ಒಣಗಿಸುತ್ತಾರೆ. ಅಂಟಂಟಾಗಿರುವ ಈ ಸರಿ ಹಸಿಯಾಗಿರುವಾಗಲೇ ಹತ್ತಿ ಬಟ್ಟೆಯ ತುಂಡುಗಳನ್ನು ಮೆತ್ತಲಾಗುತ್ತದೆ. ನಂತರ ಈ ಗೊಂಬೆಗಳನ್ನು ಒಂದೆರಡು ದಿನಗಳ ಕಾಲ ಒಣಗಿಸಲಾಗುತ್ತದೆ. ಇದು ಎರಡನೆ ಹಂತ. ಬಟ್ಟೆಯ ತುಂಡುಗಳನ್ನು ಮೆತ್ತಿ ಒಣಗಿಸಿದ ನಂತರ ಅವುಗಳ ಮೇಲ್ ಜಾಲಿ ಅಂಟು ಹಾಗೂ ಸೀಮೆ ಸುಣ್ಣದ ಹುಡಿ ಬೆರೆಸಿದ ಸರಿಯನ್ನು ತಯಾರಿಸಿಕೊಂಡು ಮತ್ತೆ ಆ ಗೊಂಬೆಗಳಿಗೆ ಬಳೆಯಲಾಗುತ್ತದೆ. ಮತ್ತೆ ಒಣಗಿಸಲಾಗುತ್ತದೆ. ಇದು ಮೂರನೆ ಹಂತ. ಇನ್ನು ನಾಲ್ಕನೆ ಹಂತವೆಂದರೆ ಗೊಂಬೆಯ ಶಿಲ್ಪಗಳಿಗೆ ಬಣ್ಣ ಹಚ್ಚುವ ಮುನ್ನ ಬಿಳಿ ಬಣ್ಣವನ್ನು ಪೂರ್ತಿಗೊಂಬೆಗಳಿಗೆ ಬಳೆಯುತ್ತಾರೆ. ಆ ಮೇಲೆ ಮಾರುಕಟ್ಟೆಯಲ್ಲಿ ಸಿಗುವ ಹುಡಿ ಬಣ್ಣವನ್ನು ತಂದು ಅದರಲ್ಲಿ ಅಂಟು ಹಾಗೂ ನೀರನ್ನು ಬೆರಸಿ ತಯಾರಿಸಿದ ವಿವಿಧ ಬಣ್ಣಗಳನ್ನು ಗೊಂಬೆಗಳಿಗೆ ಬಳೆಯಲಾಗುವದು. ಹಳದಿಯು ಮೈಬಣ್ಣವಾದರೆ ಕೆಂಪು, ಹಸಿರು ನೀಲಿ, ಗುಲಾಬಿ, ತಿಳಿ ನೀಲಿ ಮುಂತಾದ ಬಣ್ಣಗಳನ್ನು ಬಟ್ಟೆಯಂತೆ ಕಾಣುವ ಹಾಗೆ ವಿನ್ಯಾಸಗೊಳಿಸಲಾಗಿರುತ್ತದೆ. ಆಮೇಲೆ ಕಪ್ಪು ಬಣ್ಣದಿಂದ ಗೊಂಬೆಗಳಿಗೆ ಕಣ್ಣು ಮೂಗು, ಬಾಯಿ, ಕೈಬೆರಳು, ಕಾಲಬೆರಳು, ಕಿವಿ ಮತ್ತು ಆಭರಣಗಳನ್ನು ರೇಖಾತ್ಮಕವಾಗಿ ಬರೆಯಲಾಗುವುದು. ಹೀಗೆ ನಾಲ್ಕನೆ ಹಂತದಲ್ಲಿ ಬಣ್ಣಗಳಿಂದ ಪೂರ್ಣಗೊಂಡ ಶಿಲ್ಪಗಳು ಇನ್ನೊಂದು ಹಂತದಲ್ಲಿ ಹೊಳಪನ್ನು ಪಡೆಯುತ್ತವೆ. ಕೆಂಪು ರಾಳ ಮತ್ತು ಗುಬ್ಬೆ ರಾಳ ಸೇರಿಸಿ ತಯಾರಿಸಿಕೊಂಡ ಎಣ್ಣೆಯನ್ನು ಗೊಂಬೆಗಳಿಗೆ ಹಚ್ಚಲಾಗುವದು. ಈ ಎಣ್ಣೆಯಿಂದ ಗೊಂಬೆ ಶಿಲ್ಪಗಳಿಗೆ ಹೊಳಪು ಬರುವದಲ್ಲದೆ, ಹಚ್ಚಿದ್ದ ಬಣ್ಣವು ಗಟ್ಟಿಯಾಗಿ ಉಳಿಯುವುದು ಎಂದು ಗೊಂಬೆ ತಯಾರಕರು ಹೇಳುತ್ತಾರೆ.

೧. ಶೆಗಣಿ ಗೊಂಬೆಗಳು

ಯಾವುದೇ ದೇಶ ಅಥವಾ ನಾಡಿನ ಜನಪದರ ಸೃಷ್ಟಿಯಲ್ಲಿ ಆ ನಾಡಿನ ಸಾಂಸ್ಕೃತಿಕ ಬದುಕು, ಅಚಾರ, ವಿಚಾರಗಳು ವ್ಯಕ್ತವಾಗುತ್ತವೆ. ಇವರು ಮಣ್ಣಿಗೆ ಹತ್ತಿರವಾಗಿ ಬದುಕುವದರಿಂದ ಆ ನಾಡಿನ ಸಾಂಸ್ಕೃತಿಕ ಸತ್ವವನ್ನು ಮಣ್ಣಿನ ಸೊಗಡನ್ನು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಪಡಿಸುತ್ತಾರೆ. ಶಿಷ್ಟರು ಆಯಾನಾಡಿನ ಮಣ್ಣಿನ ಸಂಪರ್ಕದಿಂದ ದೂರ ಇರುವದರಿಂದ ಅವರ ಸೃಷ್ಟಿಗಳಲ್ಲಿ ಆ ನಾಡಿನ ವೈಶಿಷ್ಟ್ಯ ಅಭಿವ್ಯಕ್ತಿಗೊಳ್ಳುವದಿಲ್ಲವೆಂದು ಹೇಳಬೇಕು.

ನಮ್ಮ ನಾಡಿನಲ್ಲಿ ಮಾರ್ಗಶಿಲ್ಪ ರಚನೆಯು ವಿಜಯನಗರ, ಚಾಲುಕ್ಯ, ಹೊಯ್ಸಳ ಮುಂತಾದ ಶೈಲಿಗಳಲ್ಲಿ ಶಿಲಾ ಮಾಧ್ಯಮದಲ್ಲಿ ಅಭಿವ್ಯಕ್ತಿಸಲ್ಪಟ್ಟರೆ, ದೇಶಿ ಶಿಲ್ಪವು ಕಲ್ಲು, ಮರ, ಮಣ್ಣು, ಸೆಗಣಿ, ಅರಿವೆ, ಅರಳೆ ಮುಂತಾದ ಹಲವಾರು ಮಾಧ್ಯಮಗಳಲ್ಲಿ ಅಭಿವ್ಯಕ್ತಿ ಪಡೆದು ವೈವಿಧ್ಯವನ್ನೇ ಸಾಧಿಸಿದೆ.[೧೩] ವರ್ಷದುದ್ದಕ್ಕೂ ಬರುವ ಅನೇಕ ಹಬ್ಬ ಹರಿದಿನಗಳಲ್ಲಿ ಅವುಗಳ ಆಚರಣೆಯ ಸಂದರ್ಭಗಳಲ್ಲಿ ರಚಿಸಲಾಗುವ ಅನೇಕ ತರಹದ ಶಿಲ್ಪಗಳು ನಮ್ಮ ಸಂಸ್ಕೃತಿ, ಸಂಪ್ರದಾಯಗಳ ಸಂಕೀರ್ಣತೆಯನ್ನು ಹೇಳುವ ಸಂಕೇತಗಳಾಗಿ ನಿಂತಿವೆ. ಈ ಅರ್ಥದಲ್ಲಿ ಮಾರ್ಗ



೧೩. ಡಾ.ಶಿವಾನಂದ ಬಂಟನೂರ : ಕರ್ನಾಟಕ ಜನಪದ ಶಿಲ್ಪಕಲೆ, ಪಿಹೆಚ್.ಡಿ. ಮ.ಪ್ರ, ಪುಟ ೩೨

ಮೊದಲ ಹಂತದ ಕಟ್ಟಿಗೆ ಮತ್ತು ಶೆಗಣಿ ಮಾಧ್ಯಮದ ಗೊಂಬೆಗಳು



೧. ಕಟ್ಟಿಗೆ



೨. ಶೆಗಣಿ



೩. ಶೆಗಣಿ



೪. ಶೆಗಣಿ







ಎರಡನೇ ಹಂತದಲ್ಲಿ ಸಿದ್ಧಗೊಂಡ ಕಟ್ಟಿಗೆ ಮಾಧ್ಯಮದ ಕಿನ್ನಾಳ ಗೊಂಬೆಗಳು

ಮೂರನೇ ಹಂತದಲ್ಲಿ ಸಿದ್ಧಗೊಂಡ ಕಿನ್ನಾಳ ಗೊಂಬೆಗಳು







ಅಥವಾ ಶಿಷ್ಟಶಿಲ್ಪಕಲೆಗಿಂತ ಜನಪದ ಶಿಲ್ಪಕಲೆಯೇ ಹೆಚ್ಚು ವೈವಿಧ್ಯಮಯ ಎಂದು ಹೇಳಬಹುದು. ಅದು ದುಡಿಮೆಯೊಂದಿಗೆ ಸಾಹಚರ್ಯ ಸಾಧಿಸಿದೆ.

ಇಟ್ಟರೆ ಸೆಗಣಿಯಾದೆ, ತಟ್ಟಿದರೆ ಕುರುಳಾದೆ
ನೀ ನಾರಿಗಾದೆಯೋ ಎಲೆ ಮಾನವಾ ?

ಎಂದು ಗೋವು ಮಾನವನಿಗೆ ಸದಾ ಒಳ್ಳೆಯ ಕೆಲಸಮಾಡಲು ಎಚ್ಚರಿಸುವಂತೆ, ಸೆಗಣಿಯ ಗೊಂಬೆಗಳು ಮಕ್ಕಳಿಗೆ ತಾಯಿ ಮಗುವಿನ ಬಾಂಧವ್ಯ, ಪ್ರೀತಿ, ವಾತ್ಸಲ್ಯವನ್ನು ಬೆಳೆಸಿಕೊಳ್ಳುವದನ್ನು ಕಲಿಸಲು ನೆರವಾಗುತ್ತವೆ.[೧೪]

ಸಾವಿರಾರು ವರ್ಷಗಳಿಂದ ಸುಶಿಕ್ಷಿತರೆಲ್ಲರಿಗೂ ಪರಿಚಯವಿರುವಂತೆ, ಶಾಸ್ತ್ರ ಶುದ್ಧವಾಗಿ, ಪ್ರಮಾಣ ಬದ್ಧವಾಗಿ, ತಾಳ-ಮಾನದ ಪ್ರಕಾರ ರಚನೆಯಾಗುತ್ತಾ ಜನಾಕರ್ಷಣೆಯ ಕೇಂದ್ರಗಳಾಗಿ, ಪೂಜೆ ಮತ್ತು ಯಾತ್ರಾಸ್ಥಳವಾಗಿ ಬಹುಕಾಲದಿಂದ ಖ್ಯಾತವಾಗಿರುವ ಶೈಲಿಯಲ್ಲಿ ರಚನೆಗೊಂಡಿರುವ ಶಿಲ್ಪ ಕಲೆಯಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡದ್ದು ಶಿಷ್ಟಪದ ಶಿಲ್ಪ ಕಲೆ. ಆದರೆ ಜನಪದ ಶಿಲ್ಪಕಲೆಯಲ್ಲಿ ಷಡಂಗವಾಗಲಿ, ತಾಳ ಮಾನ-ಪ್ರಮಾಣಗಳಾಗಲಿ, ನಿರ್ದಿಷ್ಟ ಶೈಲಿ, ಸಿದ್ಧಾಂತ ವಿನ್ಯಾಸಗಳಾಗಲಿ ಇಂತಹ ಯಾವ ಕಟ್ಟಳೆಗಳೂ ಇಲ್ಲದ ಮುಕ್ತ ರಚನೆಯಾಗಿವೆ. ಜನಪದ ಶಿಲ್ಪಕಲೆ ಜನಪದರ ಬದುಕೆ ಆಗಿದ್ದರಿಂದ ಅವರ ಬದುಕಿನ ಬಣ್ಣವನ್ನು ಅವರ ಶಿಲ್ಪಗಳಲ್ಲಿ ಕಾಣಬಹುದು. ನಿತ್ಯೋಪಯೋಗಿ ಮಾಧ್ಯಮಗಳಾದ ಸಗಣಿ, ಕಿಟ್ಟ, ಮಣ್ಣು, ಕಟ್ಟಿಗೆಗಳು ಮುಂತಾದವುಗಳು ಜನಪದರ ಶಿಲ್ಪಕಲೆಯ ಮಾಧ್ಯಮಗಳು. ಶಿಷ್ಟರಲ್ಲಿ ಸೂಕ್ಷ್ಮಗಾರಿಕೆ, ಕೃತಕತೆ, ಪ್ರಮಾಣ ಬದ್ಧತೆ, ಸೌಂದರ್ಯ ನಿಷ್ಠತೆಗಳು ಇದ್ದರೆ, ಜನಪದರ ಸಗಣಿ ಗೊಂಬೆಗಳಲ್ಲಿ ಏನಿದ್ದರೂ ಸಹಜತೆ, ಮುಗ್ದತೆಗಳೇ ವಿಶೇಷವೆನಿಸುತ್ತಿವೆ.

ದೀಪಾವಳಿ ಅಮವಾಸೆಯ ಲಕ್ಷ್ಮೀ ಪೂಜೆಯ ಮರು ದಿವಸ ಬಲಿಪಾಡ್ಯದಂದು ಶೆಗಣಿಯಿಂದ ಮಾಡಿದ ಪಾಂಡವರನ್ನು ಪ್ರತಿಷ್ಠಾಪನೆ ಮಾಡುತ್ತಾರೆ. ಶೆಗಣಿಯನ್ನು ಶಂಖಾಕೃತಿಯಲ್ಲಿ ಮಾಡಿ ಐದು ಪಾಂಡವರನ್ನು ನಿರ್ಮಿಸುತ್ತಾರೆ. ಅವುಗಳ ತಲೆಯಮೇಲೆ ಒಂದು ದುಂಡನೆಯ ಭಾಗವನ್ನು ಜೋಡಿಸಿರುತ್ತಾರೆ. ಅವರಿಗೆ ನೈವೇದ್ಯ ಮಾಡುವ ಆಹಾರವಾದ ಮೊಸರು ಅನ್ನ ಹಾಗೂ ಹೊನ್ನ ಅಂಬ್ರೀಯ ಅಚ್ಚ ಹಳದಿಯ ಹೂವುಗಳನ್ನು ಹಾಗೂ ಉತ್ತರಾಣಿಯ ಕಡ್ಡಿಗಳನ್ನು ಆ ದುಂಡನೆಯ ಭಾಗದಲ್ಲಿ ಚುಚ್ಚುತ್ತಾರೆ. ಈ ಐವರು ಪಾಂಡವರ ಮಧ್ಯ ಒಂದು ಶೆಗಣಿಗೊಂಬೆ ಮಾಡಿರುತ್ತಾರೆ. ಬಹುಶಃ ಆ ಗೊಂಬೆಯೇ ವಧೆ ಮಾಡಲ್ಪಟ್ಟ ದುರ್ಯೋಧನನ ಸಂಕೇತವಿರಬಹುದು. ಈ ಪಾಂಡವರು ಕೂಡಾ ದುಷ್ಟಶಕ್ತಿಗೆ ಕೊನೆ ಇದೆ ಎನ್ನುವುದನ್ನು ತೋರುವ ಹಾಗೂ ಇತಿಹಾಸವನ್ನು ಸಾಮಾನ್ಯರು ಮೆಲಕು ಹಾಕುವ ಜನಪದ ಬಗೆ ಇದು.

ತಾಯಿ ತನ್ನ ಮಗುವನ್ನು ಬಗಲಲ್ಲಿ ಹೇಗೆ ಕೂಡ್ರಿಸಿಕೊಳ್ಳುವ ಹಾಗೆಯೇ ಈ ಕಿಸಗಾಲು ಗೊಂಬೆಯು ತನ್ನ ಬಗಲಲ್ಲಿ ಒಂದು ಮಗುವನ್ನು ಕೂಡ್ರಿಸಿಕೊಂಡಿರುತ್ತದೆ. ಈ ಪಾಠವನ್ನು ಮಕ್ಕಳು ಪಾಲಿಸಲೆಂದು ಆ ಗೊಂಬೆಯ ಕಾಲುಗಳನ್ನು ಅಗಲ ಮಾಡಿರುತ್ತಾರೆ. ಮಕ್ಕಳು ಆ ಗೊಂಬೆಗಳನ್ನು ತಮ್ಮ ನಡದಲ್ಲಿ ಕೂಡ್ರಿಸಿಕೊಂಡು ಮಗುವಿನ ತಾಯಿಗಿಂತಲೂ ಚೆನ್ನಾಗಿ ನಟಿಸುತ್ತಾ ಆಟವಾಡುತ್ತಾರೆ. ಇದೇ ಶೆಗಣೆಯಿಂದ ಗುಬ್ಬಿ, ಕಿಸಗಾಲ ಗೊಂಬೆ, ತಾಯಿ ಮಗು, ನಂದಿ, ಶಿವ ಪಾರ್ವತಿ, ನವಿಲು, ಚಿಗರೆಯ ಮುಖ, ಬೀಸುವಕಲ್ಲು, ಆನೆ, ಬಸವಣ್ಣ, ಕೌಂತಿಪಟ್ಟಿ ಮತ್ತು ಆಟಿಕೆ ಸಾಮಾನುಗಳಾದ ಬಂಡಿ, ಲಾರಿ, ಕಾರುಗಳನ್ನು, ಕಟ್ಟಿಗೆ ಪಟ್ಟಿಗಳಿಂದ ರಚಿಸುತ್ತಾರೆ. ಈ ಶೆಗಣೆಗೊಂಬಿಗಳನ್ನು ತಯಾರಿಸುವ ಕಲಾವಿದರು ಹೇಳುವುದೇನಂದರೆ- "ನಮ್ಮ ದುಡಿತಕ್ಕೆ ತಕ್ಕ ಸಂಭಾವನೆ ದೊರೆಯುವುದಿಲ್ಲ" ಮೊದಲಿನಿಂದ (ವಂಶಪಾರಂಪರಿಕವಾಗಿ) ಬಂದ ಕಲೆ ಎಂದು ಮುಂದುವರಿಸಿಕೊಂಡು ಹೊರಟಿದ್ದೇವೆ ಎನ್ನುತ್ತಾರೆ.

ಶೆಗಣಿಗೊಂಬೆಗಳನ್ನು ಬನಶಂಕರಿ, ಇಟಗಿ ಮತ್ತು ಹಂಪಿ, ಹುಲಿಗಿ ಜಾತ್ರೆಯಲ್ಲಿ ಈ ಕಿಸಗಾಲ ಗೊಂಬೆಗಳಿಗೆ ಎಲ್ಲಿಲ್ಲದ ಬೇಡಿಕೆ. ಈಗಲೂ ಕೂಡ ಜಾತ್ರೆಯಲ್ಲಿ ಕೇವಲ ಐದು ರೂಪಾಯಿಗಳಿಗೆ ಒಂದರಂತೆ ಮಾರಾಟ ಮಾಡಲಾಗುತ್ತದೆ. ಬನಶಂಕರಿ ಜಾತ್ರೆಯಲ್ಲಿ ಕಾಯಿ ಪಲ್ಲೆಯಂತೆ ಚಟಪಟನೆ ಮಾರಾಟವಾಗುವ ಈ ಗೊಂಬೆಗಳು ಮಾರಾಟಗಾರರಿಗೆ ಕಡಿಮೆ ಆದಾಯವನ್ನು ತಂದು ಕೊಡುತ್ತದೆ. ಅದೂ ಸಹ ವರ್ಷ ಪೂರ್ತಿ ಶೆಗಣಿ ಗೊಂಬೆಗಳನ್ನು ರಚಿಸುತ್ತಾ ಇರುತ್ತಾರೆ.

೧೪. ಪಿ.ಆರ್.ತಿಪ್ಪೇಸ್ವಾಮಿ (ಪ್ರ.ಸಂ) : ಶಿಲ್ಪಕಲಾ ಪ್ರಪಂಚ, ಪುಟ ೪೭೦

ಮನರಂಜನೆಯ ಸಲುವಾಗಿ ಆಡುವ ಆಟಗಳು ಹಲವಾರು ಇವೆ. ಅವುಗಳಲ್ಲಿ ಕೆಲವು ಆಟಗಳಲ್ಲಿ ಆಕರ್ಷಕವಾದ ಶಿಲ್ಪಗಳು ಆಟದ ವಸ್ತುಗಳಾಗಿ ಬಳಸಲ್ಪಡುತ್ತವೆ. ಮಕ್ಕಳಾಟದಲ್ಲಿ ಅನೇಕ ವಿಧದ ಆಟಿಕೆ ಶಿಲ್ಪಗಳಿರುತ್ತವೆ. ಆದರೆ ಜನಪದರ ಶಿಲ್ಪದ ದೃಷ್ಟಿಯಿಂದ ಗೊಂಬೆ ಶಿಲ್ಪಗಳು ಗಮನಾರ್ಹವಾಗುತ್ತವೆ. ಈ ಗೊಂಬೆಗಳಲ್ಲಿ ಕೂಸಿನ ಗೊಂಬೆ, ಕೊಡದ ಗೊಂಬೆ, ಮುಂತಾದವುಗಳು ಪ್ರಮುಖವಾಗಿವೆ. ಇವೆಲ್ಲ ಸಾಮಾನ್ಯವಾಗಿ ಮಕ್ಕಳಿಗೆ ಆಟದೊಂದಿಗೆ ಮನರಂಜನೆಯನ್ನು ಒದಗಿಸುತ್ತದೆ. ಈ ಗೊಂಬೆ ಶಿಲ್ಪಗಳ ಮಾಧ್ಯಮ ರಚನಾ ಕ್ರಮ ಎಲ್ಲವೂ ಕುತೂಹಲಕರವಾಗಿರುತ್ತವೆ. ಈ ಗೊಂಬೆಗಳ ಸೌಂದರ್ಯವನ್ನು ಸವಿಯುವುದೇ ಒಂದು ಸೊಗಸು.

ಕಲಾಕೃತಿಗಳ ಕುರಿತ ಚರ್ಚೆ

ತಾಯಿ ಮಗು

ಸೆಗಣಿಗೊಂಬೆಗಳಿಗೆ ಕಿವಿ, ಮೂಗು, ಕೈಬೆರಳು, ಕಾಲುಬೆರಳು, ತೋರುವಂತಿರುತ್ತವೆ. ನಿಂತ ಬಂಗೆಯಲ್ಲಿರುವ ಮಹಿಳೆಯರ ಶಿಲ್ಪ ಇದಾಗಿದೆ. ಬಗಲಲ್ಲಿ ಮಗುವಿದೆ. ಸೆಗಣಿಗೊಂಬೆ ಶಿಲ್ಪಗಳು ಸರಳ ಮುಗ್ದತೆಗಳಿಂದ ಕೂಡಿರುತ್ತವೆ. ಮೈಬಣ್ಣವಾಗಿ ಹಳದಿ, ಕುಪ್ಪಸಕ್ಕೆ ನೀಲಿ, ಮತ್ತು ಸೀರೆಗೆ ಗುಲಾಬಿ ಬಣ್ಣವನ್ನು ಲೇಪಿಸಲಾಗಿದೆ. ಕಣ್ಣು, ಕಿವಿ, ಮೂಗು, ತುಟಿ, ಕೈಬೆರಳು, ಕಾಲುಬೆರಳನ್ನು ಕಪ್ಪು ಬಣ್ಣದಿಂದ ಚಿತ್ರಿಸಲಾಗಿದೆ.

ರೈತ ಮಹಿಳೆಯ ಗೊಂಬೆಗಳು.

ರೈತ ಮಹಿಳೆಯರ ಎರಡು ಶಿಲ್ಪಗಳು ಒಂದೇ ಭಂಗಿಯಲ್ಲಿವೆ. ಕೈಯಲ್ಲಿ ಕೋಲು, ಬಗಲಿನಲ್ಲಿ ಕುರಿಮರಿ ಮತ್ತು ಮುಂದೆ ಹುಲ್ಲು ತಿನ್ನಲು ಜಿಗಿಯುತ್ತಿರುವ ಕುರಿಇದೆ. ದುಂಡನೆಯ ಮುಖಹೊಂದಿರುವ ಈ ಶಿಲ್ಪಗಳಿಗೆ ಕೆಂಪು, ಹಸಿರು, ತಿಳಿ ಕೆಂಪು, ಹಳದಿ ಬಣ್ಣವನ್ನು ಲೇಪಿಸಲಾಗಿದೆ. ಕೊರಳಿನಲ್ಲಿ ಆಭರಣ, ಕೈಯಲ್ಲಿ ಬಳೆ, ಕಾಲಿನಲ್ಲಿ ಕಡಗಳಿಗೆ ಲಜಾವರ ಬಣ್ಣ ಲೇಪಿಸಿದ್ದಾರೆ.

ತಾಯಿ ಮಗು

ದೊಡ್ಡ ಮುಖ ಹೊಂದಿರುವ ಈ ಶಿಲ್ಪದ ಬಗಲಲ್ಲಿ ಮಗುವಿದೆ. ಮಗುವು ಮುಂದೆ ಬಾಗಿರುವಂತಿದೆ. ಅಗಲವಾದ ಕಣ್ಣುಗಳು, ದೊಡ್ಡ ಮೂಗು, ಕಿವಿಗಳನ್ನು ಕಪ್ಪು ಬಣ್ಣದ ರೇಖೆಯಿಂದ ತೋರಿಸಲಾಗಿದೆ. ಕುಪ್ಪಸಕ್ಕೆ ಹಸಿರು, ಸೀರೆಗೆ ಕೆಂಪು ಬಣ್ಣ ಮತ್ತು ಮೈಬಣ್ಣವಾಗಿ ಹಳದಿ ಬಣ್ಣವಿದೆ. ಮಗುವಿನ ವಸ್ತ್ರದ ಬಣ್ಣ ಜಾಂಬಳಿವಿದೆ. ಕೈಬೆರಳು, ಕಾಲುಬೆರಳು ರೇಖೆಗಳಿಂದ ಚಿತ್ರಿಸಲಾಗಿದೆ.


ತಾಯಿ ಮಗು ಮತ್ತು ಕೊಡ ಹೊತ್ತ ಮಹಿಳೆ

ತಾಯಿ ಮಗುವಿನ ಶಿಲ್ಪವು ಸರಳ ಮುಗ್ಧತೆಯಿಂದ ಕೂಡಿದೆ. ಶಿಲ್ಪವಾಗಿದೆ. ತಾಯಿಯು ತನ್ನ ಬಲಗಲಲ್ಲಿ ಮಗುವನ್ನು ಎತ್ತಿಕೊಂಡಿದ್ದಾಳೆ. ಹಳದಿ ಬಣ್ಣವು ಮೈಬಣ್ಣವಾಗಿದೆ. ಕುಪ್ಪಸ ನೀಲಿ ಬಣ್ಣ ಸೀರೆಗೆ ಕೆಂಪು ಬಣ್ಣವನ್ನು ಲೇಪಿಸಲಾಗಿದೆ. ಮಗುವಿನ ವಸ್ತ್ರ ನೀಲಿ ಬಣ್ಣದ್ದಾಗಿದೆ. ತಾಯಿಯ ಶಿರದ ಮೇಲೆ ಕಿರೀಟ, ಅಗಲವಾದ ಕಣ್ಣುಗಳು, ಮೂಗು, ಕಿವಿಗಳನ್ನು ಕಪ್ಪು ಬಣ್ಣದ ರೇಖೆಯಿಂದ ಚಿತ್ರಿಸಿದ್ದಾರೆ. ಈ ಶಿಲ್ಪದಲ್ಲಿ ಮಹಿಳೆಯು ಬಗಲಲ್ಲಿ ಕೊಡವನ್ನಿರಿಸಿಕೊಂಡಿದ್ದಾಳೆ. ಹಳದಿ ಮೈಬಣ್ಣವಾಗಿದ್ದು, ಸೀರೆಗೆ ಹಸಿರು, ಕುಪ್ಪಸಕ್ಕೆ ಕೆಂಪುಬಣ್ಣವನ್ನು ಲೇಪಿಸಲಾಗಿದೆ. ಕಣ್ಣು, ಕಿವಿಗಳನ್ನು ಕಪ್ಪು ಬಣ್ಣದ ರೇಖೆಯಿಂದ ಚಿತ್ರಿಸಿದ್ದಾರೆ.

ನಂದಿಯೊಂದಿಗೆ ಶಿವ – ಪಾರ್ವತಿ.



ಈ ಶೆಗಣಿ ಗೊಂಬೆ ಶಿಲ್ಪದಲ್ಲಿ ನಂದಿಯ ಮೇಲೆ ಆಸೀನರಾಗಿರುವ ಶಿವನನ್ನು ಪಾರ್ವತಿಗಿಂತ ದೊಡ್ಡದಾಗಿ ತೋರಿಸಿದ್ದಾರೆ. ನಂದಿಯನ್ನು ಹಳದಿ ಬಣ್ಣದಿಂದ ಅಲಂಕರಿಸಿದ್ದಾರೆ. ನಂದಿಯ ಮುಂದೆ ಕಪ್ಪು ಬಣ್ಣದಿಂದ ಲಿಂಗವನ್ನು ತೋರ್ಪಡಿಸಿದ್ದು, ಶಿವನಿಗೆ ಮೈಬಣ್ಣವಾಗಿ ಹಳದಿ, ಕೇಸರಿ, ಕೆಂಪು ಬಣ್ಣ ಮತ್ತು ಪಾರ್ವತಿಗೆ ಹಳದಿ ಬಣ್ಣದಿಂದ ಅಲಂಕರಿಸಿದ್ದಾರೆ. ಹಸಿರುವರ್ಣದಿಂದ ಸೀರೆಯನ್ನು ರೂಪಿಸಿದ್ದರೆ, ಕಣ್ಣು, ಕಿವಿ, ಮೂಗು, ತುಟಿ,ಕಾಲ್ಬೆರಳು, ಕೈಬೆರಳುಗಳನ್ನು ಕಪ್ಪು ಬಣ್ಣದ ರೇಖೆಗಳಿಂದ ಚಿತ್ರಿಸಿದ್ದಾರೆ.





ಶೇಗಣಿಯ ತಾಯಿ ಮಗು ಗೊಂಬೆ



ಶೇಗಣಿಯ ಕೃಷಿಕ ಮಹಿಳೆಯರ ಗೊಂಬೆಗಳು



[illegible]

[illegible]



[illegible]


[illegible]



ನಂದಿಯೊಂದಿಗೆ ಶಿವ ಪಾರ್ವತಿಯರ ಶೆಗಣಿಯ ಗೊಂಬೆ



ಶೆಗಣಿಯ ಕಿಸಗಾಲು ಗೊಂಬೆ





ಪ್ರಭಾವಳಿ



ಮುಖ

ಆಟಿಕೆ ಗೊಂಬೆಗಳು



ಅಂತಿಮವಾಗಿ ಸಿದ್ಧಗೊಂಡ ಕಟ್ಟಿಗೆ ಮತ್ತು ಶೆಗಣಿ ಮಾಧ್ಯಮದ ಕಿನ್ನಾಳದ ಗೊಂಬೆಗಳು



ಕಟ್ಟಿಗೆ ಮಾಧ್ಯಮ



ಶೆಗಣಿ ಮಾಧ್ಯಮ



ಕಿನ್ನಾಳ ಗೊಂಬೆಗಳಿಗೆ ಅಂತಿಮ ಹಂತದ
ವರ್ಣಸ್ಪರ್ಶ ಮಾಡುತ್ತಿರುವ ಏಕಪ್ಪ ಚಿತ್ರಗಾರ

ಕಿಸಗಾಲು ಗೊಂಬೆ

ಉತ್ತರ ಕರ್ನಾಟಕದ ಪ್ರತಿಯೊಂದು ಊರಿನ ಮನೆ ಮನೆಗಳಲ್ಲಿ ಕಂಡುಬರುವ ಕಿಸಗಾಲ ಗೊಂಬೆ ಶಿಲ್ಪಗಳು ಅಪ್ಪಟ ಜಾನಪದ ಸೊಗಡನ್ನು ಉಳಿಸಿಕೊಂಡು ಬಂದವುಗಳಾಗಿವೆ. ಕಿಸಗಾಲ ಗೊಂಬೆಗಳು ಕಾಲನ್ನು ಅಗಲ ಮಾಡಿ ಪ್ರಸವ ಭಂಗಿಯಲ್ಲಿ ಕುಳಿತ ಶಿಲ್ಪಗೊಂಬೆಗಳಾಗಿವೆಯಲ್ಲದೇ ಪ್ರತಿಯೊಂದು ಗೊಂಬೆಯ ಬಗಲಲ್ಲಿ ಕೂಸನ್ನು ಹೊಂದಿರುತ್ತದೆ. ಮೈಬಣ್ಣವಾಗಿ ಹಳದಿ ಬಣ್ಣ, ಕುಪ್ಪಸಕ್ಕೆ ಗುಲಾಬಿ, ಲಂಗಕ್ಕೆ ತಿಳಿ ನೀಲಿ, ಬಣ್ಣವನ್ನು ಲೇಪಿಸುತ್ತಿರುತ್ತಾರೆ. ಕಪ್ಪು ಬಣ್ಣದಿಂದ ಕಣ್ಣು, ಕಿವಿ, ಕೈ ಬೆರಳು, ಕಾಲ್ಬೆರಳು ಮತ್ತು ಆಭರಣಗಳನ್ನು ರೇಖೆಯಿಂದ ಬರೆಯಲಾಗುವುದು. ಶಿಲ್ಪಗಳು ಕೈಕಾಲುಗಳನ್ನು ಅಗಲವಾಗಿಸಿ ಮುಂದಕ್ಕೆ ಚಾಚಿ ಕುಳಿತ ಭಂಗಿಯಲ್ಲಿರುತ್ತದೆ. ಕಿಸಗಾಲ ಗೊಂಬೆಗಳನ್ನು ಸಂತಾನಪೇಕ್ಷಿಗಳು ಒಯ್ಯುತ್ತಾರೆಂದು ಪ್ರತೀತಿ ಇದ್ದು, ಮಕ್ಕಳಲ್ಲಿ ತಾಯ್ತನದ ಅರಿವು ಮೂಡಿಸಲು ಕಿಸಗಾಲು ಗೊಂಬೆಗಳನ್ನು ಖರೀದಿಸಿ ಮನೆಯಲ್ಲಿ ಪ್ರದರ್ಶಿಸುತ್ತಾರೆ.

ಹೀಗೆ ಕಿನ್ನಾಳ ಕಲೆಯು ವಿಭಿನ್ನ ರೂಪದ ಕಲೆಯಾಗಿ ಮಕ್ಕಳಿಂದ ವೃದ್ಧರಾದಿರಾಗಿ ಬಳಕೆಯಾಗುವ ಕಲಾತ್ಮಕ ವಸ್ತುಗಳನ್ನು ಸಿದ್ಧಪಡಿಸುವಲ್ಲಿ ಕಿನ್ನಾಳ ಕಲಾವಿದರು ಶ್ರಮ ಸ್ಮರಣೀಯ. ಶೆಗಣಿಯಂತಹ ಮಾಧ್ಯಮವನ್ನು ಕಲಾಕೃತಿಯಾಗಿ ರೂಪಿಸುವ ಅವರ ಬೌದ್ಧಿಕತೆ ಅಭೂತಪೂರ್ವವಾದುದು ಎಂಬುದಕ್ಕೆ ಈ ಮೇಲಿನ ಕಲಾಕೃತಿಗಳ ವಿಶ್ಲೇಷಣೆಯೇ ಸಾಕ್ಷಿ.

*****

ಅಧ್ಯಾಯ : ಏಳು

ಕಿನ್ನಾಳ ಕಲೆಯ ಮೇಲಾದ ಪ್ರಭಾವ, ಪ್ರೇರಣೆ, ತಂತ್ರಗಾರಿಕೆ, ಶೈಲಿ

ಇಂದಿನ ಕಿನ್ನಾಳ ಕಲಾವಿದರು ಪರಂಪರಾಗತವಾಗಿ ಬಂದ ಕಿನ್ನಾಳ ಶೈಲಿಯ ರಚನಾಕ್ರಮವನ್ನು ಅನುಸರಿಸುತ್ತಿಲ್ಲ. ಬದಲಾಗುತ್ತಿರುವ ಕಾಲ, ಜನರ ಅಭಿರುಚಿಗಳಿಗೆ ತಕ್ಕಂತೆ ವಸ್ತು ಮತ್ತು ರೂಪಗಳನ್ನು ಬದಲಾಯಿಸಿಕೊಂಡಿದ್ದಾರೆ. ಅದರೂ ಕೂಡ ಪರಪಂರೆಯಿಂದ ಬಂದ ವಿಜಯನಗರ ಭಿತ್ತಿಚಿತ್ರಗಳ ಶೈಲಿಯ ಹಲವಾರು ಅಂಶಗಳು ಇಂದಿಗೂ ಉಳಿದು ಬಂದಿರುವುದು ಗಮನಾರ್ಹ. ಇಂದಿನ ಚಿತ್ರಗಾರರು ಹಲವಾರು ಹೊಸರೂಪಗಳನ್ನು, ವಿನ್ಯಾಸಗಳನ್ನು ತಮ್ಮ ರಚನೆಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಉತ್ತರ ಕರ್ನಾಟಕದ ಜನಪದ ಕಲೆಯ ಸೊಬಗನ್ನು ಮೈಗೂಡಿಸಿಕೊಂಡಿರುವದನ್ನು ಕಾಣಬಹುದು. ಕಿನ್ನಾಳ ಕಲಾವಿದರು ಮೂಲತಹ ಪರಂಪರೆಯ ಶೈಲಿಯಲ್ಲಿ ತರಬೇತಿ ಹೊಂದಿ ಕುಶಲರಾಗಿರುವುದು ವಾಸ್ತವ. ಆದರೆ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವ್ಯಾಪಾರಿ ಮನೋಭಾವ ಬೆಳೆಸಿಕೊಂಡು ಪರಂಪರೆಯ ಶೈಲಿಗೆ ವಾಣಿಜ್ಯ ರೂಪ ಕೊಟ್ಟಿರುವುದು ವಾಸ್ತವ ಸಂಗತಿಯಾಗಿದೆ. ಹೀಗೆ ಕಿನ್ನಾಳ ಚಿತ್ರಶೈಲಿ ಎಷ್ಟೇ ಪ್ರಭಾವಗಳಿಗೆ ಒಳಗಾಗಿದ್ದರೂ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದೆ.

ರಚನೆಯ ಶೈಲಿಯಲ್ಲೂ ಹಲವಾರು ಹೊಸ ಅಂಶಗಳನ್ನು ಕಾಣಬಹುದು. ಐತಿಹಾಸಿಕ ಬೆಳವಣಿಗೆಯನ್ನು ಗಮನಿಸಬಹುದು. ವಿಜಯನಗರ ಚಿತ್ರಶೈಲಿ ಶಿಲ್ಪ ಶೈಲಿಗಳಿಂದ ಹಾಗೆ ದಖನಿ ಸುಲ್ತಾನರ ಕಾಲದ ಚಿಕಣಿಚಿತ್ರಗಳ ಶೈಲಿ, ಜೈನ ಓಲೆಗರಿ, ಹಸ್ತಪ್ರತಿಗಳ ಚಿತ್ರಶೈಲಿಗಳ ಪ್ರೇರಣೆ, ಪ್ರಭಾವಗಳಿಂದ ಕಿನ್ನಾಳ ಶೈಲಿ ರೂಪಗೊಂಡಿದೆ. ರೇಖೆ, ವಿನ್ಯಾಸ, ವರ್ಣ ಸಂಯೋಜನೆ, ಆಕೃತಿಗಳ ರಚನಾ ವಿನ್ಯಾಸಗಳಲ್ಲಿ ಪ್ರಭಾವವನ್ನು ಗುರುತಿಸಬಹುದು. ಹೀಗಾಗಿ ಕಿನ್ನಾಳ ಶೈಲಿಯ ಐತಿಹಾಸಿಕ ಬೆಳವಣಿಗೆಯು ಗಮನಾರ್ಹವಾಗಿದೆ.[೧]

ಒಂದು ಚಿತ್ರ ರಚಿಸಬೇಕಾದರೆ ಅದಕ್ಕೆ ಬೇಕಾದ ಮೇಲ್ಮೈಯನ್ನು ತಯಾರಿಸಿಕೊಳ್ಳುವುದು ರೂಢಿ. ಹಾಗೆ ಮಾಡದಿದ್ದರೆ ಚಿತ್ರರಚನೆಯ ಗುಣಮಟ್ಟ ನಿರ್ವಹಣೆ ಮಾಡಲಾಗದು. ಹಾಕಿದ ಬಣ್ಣಗಳು ಸರಿಯಾಗಿ ಕೂಡುವುದಿಲ್ಲ, ಅಂದರೆ ಆ ಚಿತ್ರವು ಬೇಗ ಹಾಳಾಗಬಹುದು. ಉದಾಹರಣೆಗೆ ಅಜಂತಾ, ಭಾಗ್, ಎಲ್ಲೋರ, ಸಿತ್ತಾನವಾಸಲ್, ಬದಾಮಿಯ ಗುಹೆಗಳಲ್ಲಿ ಇರುವ ಚಿತ್ರಗಳು ಇದಕ್ಕೆ ಸಾಕ್ಷಿ. ಅಜಂತಾದ ೯, ೧೨,ಮತ್ತು ೧೭ ಗುಹೆಗಳಲ್ಲಿರುವ ಚಿತ್ರಗಳನ್ನು ಕ್ರಿ.ಪೂ.ಮೊದಲನೆ ಶತಮಾನದಲ್ಲಿ ರಚಿಸಿದ್ದಿರಬಹುದೆಂದು ಊಹಿಸಲಾಗಿದೆ. ಅಂದರೆ ಈ ಶತಮಾನಕ್ಕೆ ಸರಿಯಾಗಿ ಎರಡು ಸಾವಿರ ವರ್ಷಗಳಷ್ಟು ಹಳೆಯದಾದ ಆ ಚಿತ್ರಗಳು ಇಂದಿಗೂ ಬಹುಪಾಲು ಹಾಗೆ ಇವೆ. ಇತರ ಹಲವಾರು ಗುಹೆಗಳಲ್ಲಿ ನಾಶವಾಗಿವೆ.ಆಗುತ್ತಿವೆ. ವಿಜಯನಗರ ಕಾಲದ ಲೇಪಾಕ್ಷಿ ಹಂಪೆಯ ಪಂಪಾಪತಿ ದೇವಸ್ಥಾನದಲ್ಲಿ ರಚಿಸಿದ ಚಿತ್ರಗಳು ಕೂಡಾ ಇದೇ ರೀತಿ ತಾಂತ್ರಿಕ ಮೂಲದ ಮೇಲೆ ರಚಿಸಿದವು ಇಂದಿಗೂ ಕೂಡಾ ಚೆನ್ನಾಗಿಯೇ ಇವೆ. ಇವೆಲ್ಲ ಫ್ರೆಸ್ಕೊ' ಮಾಧ್ಯಮದಲ್ಲಿ ರಚಿಸಿದವುಗಳಾಗಿವೆ. ಅವುಗಳಿಗೆ

೦೧. ಆರ್.ಎಚ್.ಕುಲಕರ್ಣಿ : ಕಿನ್ನಾಳ ಚಿತ್ರಕಲೆ, ಪುಟ ೯

ಉಪಯೋಗಿಸಿದ ಬಣ್ಣಗಳೆಲ್ಲ ನೈಸರ್ಗಿಕವಾದವು. ಪ್ರಕೃತಿಯಲ್ಲಿ ಸಿಗುವ ವಿವಿಧ ಬಣ್ಣದ ಕಲ್ಲುಗಳು, ಎಲೆ ಹೂಗಳನ್ನು ಉಪಯೋಗಿಸಿ ಬಣ್ಣ ತಯಾರಿಸುತ್ತಿದ್ದರು. ಇವುಗಳ ಮಿಶ್ರಣದಿಂದ ಬಣ್ಣಗಳನ್ನು ಹಲವಾರು ಕಡೆ ಉಪಯೋಗಿಸಿದ್ದಾರೆ. ಮುಖ್ಯವಾಗಿ ಅಂದು ರಚಿಸುತ್ತಿದ್ದ ಸಹನಾಮ (ಪರ್ಶಿಯನ್ ದೇಶದ ದಂತಕಥೆಯ) ಚಿತ್ರಣಕ್ಕೆ ಈ ಬಣ್ಣಗಳನ್ನು ಉಪಯೋಗಿಸುತ್ತಿದ್ದರು. ಬಹುಶಃ ಇವೇ ಬಣ್ಣಗಳು ದಕ್ಷಿಣ ರಾಜ್ಯಗಳಿಗೂ ಆಮದಾಗಿರಲು ಸಾಧ್ಯ. ಆ ನಂತರ ೧೫ ನೇ ಶತಮಾನದಲ್ಲಿ ಭಾರತದಲ್ಲಿ ರಚಿತವಾದ ಭಾರತೀಯ ಕಥಾವಸ್ತುವಿನ ಚಿತ್ರಗಳಿಗೆ ಬಹುತೇಕ ಆಮದಾದ ಬಣ್ಣಗಳನ್ನೇ ಉಪಯೋಗಿಸುತ್ತಿದ್ದರು. ಬಹುಶಃ ಕಿನ್ನಾಳ ಶೈಲಿಯಲ್ಲೂ ಇದೇ ತೆರನಾದ ಬಣ್ಣಗಳು ಉಪಯೋಗ ಆಗಿರಲೂಬಹುದು. ಪ್ರಸ್ತುತ ಕಿನ್ನಾಳ ಶೈಲಿಯ ಚಿತ್ರರಚನೆ ಕೂಡ ಇದೇ ವಿಧಾನಕ್ಕೆ ಸೇರುತ್ತದೆ. ಇವರು ಚಿತ್ರ ರಚಿಸುವುದು ಮರದ ಹಲಿಗೆ ಮೇಲೆಯಾದರು ಹಂಪೆಯ ಅಥವಾ ಲೇಪಾಕ್ಷಿಯ ಅನುಕರಣಾತ್ಮಕ ಶೈಲಿಯನ್ನು ಗಮನಿಸಬಹುದು. ಅಂದರೆ ಭಿತ್ತಿಚಿತ್ರ ಶೈಲಿಯನ್ನು ಹಲಗೆ ಚಿತ್ರಣಕ್ಕೆ ಅಳವಡಿಸಿಕೊಳ್ಳಲಾಗಿದೆ.

ಐತಿಹಾಸಿಕವಾಗಿ ಶೈಲಿಯ ಬೆಳವಣಿಗೆಯನ್ನು ನಾವು ಕ್ರಿ.ಶ.೧೫೪೦ರಿಂದ ಗುರುತಿಸಬಹುದು. ವಿಜಯನಗರದಲ್ಲಿ ಅಚ್ಯುತರಾಯನ ಕಾಲ, ಅದೇ ಸಮಯದಲ್ಲಿ ಲೇಪಾಕ್ಷಿಯ ಮಂಟಪಗಳಲ್ಲಿ ಮತ್ತು ಹಂಪೆಯ ಪಂಪಾಪತಿಯ ದೇವಸ್ಥಾನದಲ್ಲಿ ಚಿತ್ರಗಳನ್ನು ರಚಿಸಲಾಯಿತು. ಕ್ರಿ.ಶ.೧೫೪೦ರಿಂದ ಸುಮಾರು ೨೦೦ವರ್ಷಗಳವರೆಗೆ ಯಾವುದೇ ತೆರೆನಾದ ಪುರಾವೆಗಳಾಗಲಿ ಕಿನ್ನಾಳ ಶೈಲಿಯ ಬಗ್ಗೆ ನಮಗೆ ಮಾಹಿತಿ ಸಿಗುವದಿಲ್ಲ. ಆದರೂ ಕೂಡ ಈ ಕಿನ್ನಾಳ ಕಲಾವಿದರ ಪೂರ್ವಜರು ಅಂದು ಹಂಪೆಯಲ್ಲಿ ಇದ್ದು ಇದೇ ಕೆಲಸ ಮಾಡುತ್ತಿದ್ದರು ಎಂದು ಊಹಿಸಬಹುದಾಗಿದೆ. ಈ ಶೈಲಿಯ ಉಗಮ ಕ್ರಿ.ಶ ೧೫೪೦ ಎಂದು ನಿಖರವಾಗಿ ಹೇಳಲಾಗುವದಿಲ್ಲವಾದರೂ ಅದರ ಮೂಲಭೂತ ಕವಲು, ಬೆಳವಣಿಗೆಯು ಆ ಕಾಲದಲ್ಲಿಯೇ ಆಯಿತು ಎನ್ನಬಹುದು. ಆ ಕಾಲದ ಭಿತ್ತಿ ಚಿತ್ರಗಳು ಕಿನ್ನಾಳ ಶೈಲಿಯ ಮೂಲವಾಗಿವೆ.[೨]

ಕಿನ್ನಾಳದಲ್ಲಿ ರಚಿತವಾದ ಹಲವು ಹಳೆಯ ಚಿತ್ರಗಳು ನಾಶವಾಗಿ ಭಾಗಶಃ ಉಳಿದು ಬಂದರುವಂತವು ದೊರೆತಿವೆ. ಇವು ಸುಮಾರು ೧೮೦ರಿಂದ ೨೦೦ ವರ್ಷಗಳಷ್ಟು ಹಿಂದಿನವು. ಈಗ ಉಳಿದಿರುವ ರೇಖಾ ಚಿತ್ರಗಳ ಆಧಾರದಿಂದ ಕಿನ್ನಾಳದ ಮೂಲ ಪುರುಷ ಸಂಜೀವಪ್ಪನ ಕಾಲದಲ್ಲಿ ರಚಿತವಾದ ಚಿತ್ರಗಳ ಆಧಾರದಿಂದ ಶೈಲಿಯ ಬೆಳವಣಿಗೆಯನ್ನು ಗುರುತಿಸಬಹುದು. ಈ ಚಿತ್ರಗಳಲ್ಲಿ ಇರುವ ವರ್ಣಸಂಯೋಜನೆ ರೇಖಾ ವಿನ್ಯಾಸ ಎಲ್ಲವೂ ಹಂಪಿಯ ಪಂಪಾಪತಿ ದೇವಸ್ಥಾನದ ಮತ್ತು ಲೇಪಾಕ್ಷಿಯ ಕಲ್ಯಾಣ ಮಂಟಪದ ಭಿತ್ತಿಚಿತ್ರಗಳಿಗೆ ತೀರ ಹತ್ತಿರವಾದುದು ಎನಿಸುತ್ತದೆ. ಕಿನ್ನಾಳ ಶೈಲಿ ವಿಜಯನಗರ ಶೈಲಿಯ ಆ ನಂತರದ ಬೆಳವಣಿಗೆ ಎಂಬುದು ಸ್ಪಷ್ಟವಾಗುತ್ತದೆ.

ಕಿನ್ನಾಳದ ಕಲಾಕೃತಿಗಳು ರೇಖಾ ಪ್ರಾಧಾನ್ಯವಾದವುಗಳು. ಪಹಾಡಿ ಮಿನೇಚರ ಶೈಲಿಯಲ್ಲಿ ಬರುವ ಬಸೋಲಿ ಶಾಲೆಯ ಚಿತ್ರಗಳಂತೆ ಅಥವಾ ಧಖನಿ (ಬಿಜಾಪುರ, ೧೬ನೇ ಶತಮಾನ) ಚಿತ್ರಗಳಲ್ಲಿ ಇರುವಂತೆ ಕಿನ್ನಾಳ ಶೈಲಿಯ ರೇಖೆಗಳು ಇವೆ. ದೇಹದ ಒಟ್ಟಾರೆ ದೃಶ್ಯದ ತುಂಬಾ ಗಮನಾರ್ಹವಾದುದು. ದುಂಡುಮುಖ ತ್ರಿಕೋನವನ್ನು ಹೋಲುವ ಮೂಗು, ಅಗಲವಾದ ಕಣ್ಣುಗಳು, ವಿಶಾಲವಾದ ಎದೆ, ಚಿಕ್ಕ ನಡು ಹಾಗೂ ಬಳುಕುವಂತೆ ಕಾಣುವ ಕಾಲುಗಳು ಹೀಗೆ ದೇಹದ ಪ್ರಮುಖ ಅಂಶಗಳನ್ನು ವಿಂಗಡಿಸಬಹುದು. ಒಂದು ವಿಶಿಷ್ಟತೆ ಎಂದರೆ ಕಣ್ಣುಗಳನ್ನು ಚಿತ್ರಿಸುವ ರೀತಿ. ಇಲ್ಲಿ ಒಂದು ಕಡೆ ಮುಖ ಮಾಡಿದಾಗಲೂ ಮತ್ತು ಮುಂದಿನಿಂದ ಕಾಣುವ ಕಣ್ಣುಗಳು ಯಾವ ರೀತಿ ಇರುತ್ತವೆಯೋ ಮತ್ತು ಆ ವಾಲುವಿಕೆಗೆ ತಕ್ಕಂತೆ ಕಣ್ಣುಗಳ ಪಥ ಬದಲಾಗುತ್ತಿದೆಯೋ ಆ ರೀತಿ ಇರುವುದಿಲ್ಲ. ಎಲ್ಲಾ ಕಡೆ ಮುಂದಿನಿಂದ ನೋಡಿದಾಗ ಕಾಣುವ ಕಣ್ಣುಗಳನ್ನು ಚಿತ್ರಿಸುತ್ತಾರೆ. ಇನ್ನು ಮೂಗು ಅರ್ಧ ತ್ರಿಕೋನದ ರೀತಿ ಇರುತ್ತದೆ. ಚಿಕ್ಕ ತುಟಿಗಳು ಆ ಮೂಗಿನ ತರಹವೇ ತ್ರಿಕೋನವನ್ನು ಹೋಲುವ ಚಿಕ್ಕ ಗದ್ದ ಇರುತ್ತದೆ. (ಇಲ್ಲೂ ಜೈನ ಹಸ್ತಪ್ರತಿಗಳನ್ನು ಜ್ಞಾಪಿಸಿಕೊಳ್ಳಬಹುದು) ಈ ಲಕ್ಷಣಗಳು ಸ್ತ್ರೀ ಪುರುಷ ಆಕೃತಿಗಳಲ್ಲಿ ಸಾಮಾನ್ಯವಾಗಿ ಇರುತ್ತವೆ. ಸಿಂಹಾಸನದ ತರಹ ರೇಖಾಕೃತಿಯ ರೂಪಗಳು ಇರುತ್ತವೆ. ಇದರಲ್ಲಿ ಸಿಂಹದ ಮುಖ ಕಾಲುಗಳನ್ನು ಆಸನದ ಜೊತೆಗೆ ಚಿತ್ರಿಸುತ್ತಾರೆ. ಇಲ್ಲಿ ಆಕೃತಿಗಳ ಸಂಯೋಜನೆ ಹಲಗೆಯ ಉದ್ದ, ಅಗಲ ಇವುಗಳ ಮೇಲೆ ನಿರ್ದೇಶಿಸಿದ ಚಿತ್ರಣವಾಗಿರುತ್ತದೆ. ಕಿನ್ನಾಳ ಶೈಲಿಯಲ್ಲಿ ಬೌದ್ಧ ಕಲೆಯ ಅಂಶಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೦೨. ಆರ್.ಎಚ್.ಕುಲಕರ್ಣಿ : ಕಿನ್ನಾಳ ಚಿತ್ರಕಲೆ, ಪುಟ ೯


ಕಮಾನು ಚೈತ್ಯ ಮೂಲದಿಂದ ಬಂದಂತಹದ್ದು. ಮರದ ಹಲಗೆಯ ಅಂಚಿನ ಸುತ್ತಲೂ ಇರುವ ಈ ಬಳ್ಳಿಗಳ ಚಿತ್ರಗಳನ್ನು ಅಜಂತಾದ ಗುಹೆಗಳ ಒಳಮಾಳಿಗೆಯಲ್ಲಿ ನೋಡಬಹುದು. ಇಂತಹುದೇ ಅಂಶಗಳನ್ನು ಪಂಪಾಪತಿ ದೇವಸ್ಥಾನ ಮತ್ತು ಲೇಪಾಕ್ಷಿ ದೇವಸ್ಥಾನಗಳ ಭಿತ್ತಿಚಿತ್ರಗಳಲ್ಲಿ ಕಾಣಬಹುದು. ಇಲ್ಲಿ ಈ ಬಳ್ಳಿಗಳನ್ನು ಚೌಕ ವೃತ್ತ, ತ್ರಿಕೋನದ ತೆರಪುಗಲ ಮಧ್ಯೆ ಚಿತ್ರಿಸಿದರು. ಕಿನ್ನಾಳ ಶೈಲಿಯಲ್ಲಿ ಇವುಗಳಲ್ಲಿ ನಾನಾ ತರಹದ ಬಳ್ಳಿಗಳ ಸಾದೃಶ್ಯಕ ರೂಪ ಆಕೃತಿಗಳನ್ನು ನೋಡಬಹುದು. ಇದಕ್ಕಿಂತಲೂ ಪರ್ಶಿಯನ್ ಅರಬಸ್ಕ್(ಬಳ್ಳಿ ಚಿತ್ರ) ಹೋಲಿಸಬಹುದು.

ಐತಿಹಾಸಿಕವಾಗಿ ವಿಜಯನಗರ ಚಿತ್ರಶೈಲಿಯೂ ಸ್ಥಳೀಯ ಹಾಗೂ ಚೋಳ ಶಿಲ್ಪಕಲೆಯ ನೈಜ ರೂಪ ರೇಷೆಗಳನ್ನು ಒಳಗೊಂಡಿದ್ದು, ಆನಂತರ ಅದರ ಬೆಳವಣಿಗೆಯ ಹಂತದಲ್ಲಿ ಪೂರ್ತಿಯಾಗಿ ಮಧುರೆ ನಾಯಕರ ದೇವಸ್ಥಾನಗಳ ವಾಸ್ತುಶೈಲಿಯ ಅಂಶಗಳನ್ನು ಮೈಗೂಡಿಸಿಕೊಂಡಿತು. ಆನಂತರದಲ್ಲಿ ಅದರದೇ ಆದ ಪರಿಪೂರ್ಣ ಶೈಲಿ ರೂಪುಗೊಂಡಿದೆ. ಕಿನ್ನಾಳ ಶೈಲಿ ವಿಜಯನಗರ ರಾಜ್ಯದ ಹದ್ದಿನಲ್ಲೇ ಬೆಳೆದುದ್ದನ್ನು ಹಲವಾರು ಸಮಾನ ಅಂಶಗಳನ್ನು ಆಧಾರದಿಂದ ಗುರುತಿಸಬಹುದು.[೩]

ಮೊದಲನೆಯದಾಗಿ ಮೂರ್ತಿಗಳ ಸಾಮಾನ್ಯ ಲಕ್ಷಣಗಳನ್ನು ನೊಡಬಹುದು. ಕಿನ್ನಾಳ ಚಿತ್ರಗಾರರು ಸಾಮಾನ್ಯವಾಗಿ ಮರದಲ್ಲಿಯೇ ಮೂರ್ತಿಗಳನ್ನು ಮಾಡುವರು. ಇವರ ಮೂರ್ತಿಗಳು ರಚನೆಯಲ್ಲಿ ವಿಜಯನಗರದ ಪ್ರೇರಣೆಯನ್ನು ನೋಡಬಹುದು. ಅದು ಗೌರಿ ಪರಮೇಶ್ವರ ಆಗಿರಲಿ ಅಥವಾ ಉತ್ಸವದ ವಾಹನ ಬೊಂಬೆಗಳಾಗಲಿ ಅಲ್ಲಿ ವಿಜಯನಗರದ ದೇವಸ್ಥಾನಗಳ ಗೋಪುರದ ಅಲಂಕಾರಕ್ಕೆ ಬೊಂಬೆಗಳ ಮೂಲ ರೂಪ ಎದ್ದು ಕಾಣುತ್ತದೆ. ಇಲ್ಲೂ ಕೂಡ ವಿಜಯನಗರ ಶೈಲಿ ಉಳಿವನ್ನು ಕಾಣುತ್ತೇವೆ. ಅವುಗಳ ಅಗಲವಾದ ಕಣ್ಣು, ನೀಳವಾದ ಮೂಗು ಅಲಂಕಾರ ಹಾಗೂ ಸಾಮಾನ್ಯ ಲಕ್ಷಣಗಳು ಜೊತೆಗೆ ನೇರವಾದ ಬಣ್ಣಗಳನ್ನು ಹಾಕುವುದರಿಂದ ತುಂಬಾ ಆಕರ್ಷಕವಾಗಿ ಕಾಣುತ್ತವೆ. ಇಲ್ಲಿ ಇನ್ನೊಂದು ವಿಶೇಷವೆಂದರೆ ಕಿನ್ನಾಳ ಚಿತ್ರಗಾರರು ತಮ್ಮ ಚಿತ್ರ ಶೈಲಿಯಲ್ಲಿ ಜನಪದ ಅಂಶಗಳನ್ನು ಮೈಗೂಡಿಸಿಕೊಂಡಿರುವುದು. ಇದು ಆ ಪ್ರದೇಶದ ಉಡುಗೆ ತೊಡುಗೆ ಸಂಪ್ರದಾಯ ಇವುಗಳಿಂದ ಬಂದದ್ದಾಗಿರುತ್ತದೆ. ಪ್ರಸ್ತುತ ಕಿನ್ನಾಳ ಶೈಲಿಯ ಬಣ್ಣಗಳಲ್ಲಿ ಉತ್ತರ ಕರ್ನಾಟಕದ ವಾತಾವರಣದಲ್ಲಿ ಕಾಣಬಹುದಾದ ಬದಲಾವಣೆ ಅಥವಾ ಒಂದು ತೆರನಾದ ಕ್ರಿಯಾತ್ಮಕತೆಯನ್ನು ನೋಡಬಹುದು. ಇಲ್ಲಿ ಸ್ತ್ರೀ ಪುರುಷ ಆಕೃತಿಗಳ ಬಣ್ಣ ಉಡುಗೆ ತೊಡುಗೆಗಳಲ್ಲಿ ಆ ಜಾನಪದದ ಅಂಶಗಳು ಎದ್ದು ಕಾಣಿತ್ತವೆ.

ಜುಬ್ಬಾ, ಪೇಟ, ವಲ್ಲಿ ಇವು ಆ ಪ್ರದೇಶದ ಸಾಂಕೇತಿಕತೆಯನ್ನು ಪ್ರತಿನಿಧಿಸುತ್ತದೆ. ಈ ಬೆಳವಣಿಗೆಯನ್ನು ವಿಜಯನಗರ ನಂತರ ಬೆಳೆದು ಬಂದಿರುವ ಯಾವುದೇ ಭಾಗದ ಪ್ರಾಂತದ ಚಿತ್ರಗಳಲ್ಲಿ ನೋಡಬಹುದು. ಉದಾಹರಣೆಗೆ ಆಂಧ್ರದ ತೊಗಲಿನ ಗೊಂಬೆಗಳು ಮೂಲತಃ ಶಾಸ್ತ್ರೀಯ ಶೈಲಿಯಿಂದ ಬೆಳೆದಿದ್ದರೂ ಆ ಪ್ರದೇಶದ ಸ್ಥಳೀಯತೆಯತನ್ನು ತೋರಿಸುತ್ತವೆ. ಕಿನ್ನಾಳ ಶೈಳಿಯಲ್ಲಿ ಸರಳ ರೂಪ ಲಕ್ಷಣದಿಂದ ಇದೊಂದು ಜನಪದ ಸಂಪ್ರದಾಯದ ಚಿತ್ರವಿರುವುದೆಂದು ಎನಿಸುತ್ತದೆ. ಒಟ್ಟಾಗಿ ಹೇಳುವುದಾದರೆ ಆಯಾ ಪ್ರದೇಶದ ಸಂಸ್ಕೃತಿಗೆ ತಕ್ಕಂತೆ ಅಲ್ಲಿನ ಚಿತ್ರ ಶೈಲಿ ಬದಲಾಗುತ್ತದೆ.

ಪಲ್ಲವರು ಅವರ ನಂತರ ಚೋಳರ ಪರಂಪರೆಯಿಂದ ಬಂದ ಶೈಲಿಯೇ ಎಂಬುದು ನಿಜ. ವಿಜಯನಗರ ಶೈಲಿಯ ಒಂದು ಬೆಳವಣಿಗೆ ಕಿನ್ನಾಳ ಶೈಲಿ. ಐತಿಹಾಸಿಕವಾಗಿ ವಿಜಯನಗರದ ಚಿತ್ರ ಶೈಲಿ ಚೋಳಶಿಲ್ಪದ ರೂಪರೇಷೆಗಳು ಹಾಗೂ ಸ್ಥಳೀಯವಾದ ಚಿತ್ರಶೈಲಿಯ ವೈಶಿಷ್ಟ್ಯಗಳಿಂದ ಬೆಳವಣಿಗೆ ಹೊಂದಿದ್ದಾಗಿದೆ. ಆನಂತರ ಮಧುರೈ ನಾಯಕರ ದೇವಸ್ಥಾನಗಳ ವಾಸ್ತುವಿನ ಅಂಶಗಳನ್ನು ಮೈಗೂಡಿಸಿಕೊಂಡು ಪರಿಪೂರ್ಣ ಸ್ವತಂತ್ರ ಸ್ವರೂಪವನ್ನು ವಿಜಯನಗರ ಶೈಲಿ ಪಡೆಯಿತು. ಕಿನ್ನಾಳ ಶೈಲಿ ವಿಜಯನಗರದ ಹದ್ದಿನಲ್ಲಿ ಬೆಳವಣಿಗೆ ಹೊಂದಿದ ಕಾರಣ ಅಲ್ಲಿ ಹಲವು ಅಂಶಗಳು ಇದರಲ್ಲಿ ಕಾಣಬರುತ್ತವೆ.



೦೩. ಆರ್.ಎಚ್.ಕುಲಕರ್ಣಿ : ಕಿನ್ನಾಳ ಚಿತ್ರಕಲೆ, ಪುಟ ೧೨

ಅಧ್ಯಾಯ : ಎಂಟು

ಕಿನ್ನಾಳ ಕಲೆಯ ಕಲಾವಿದರು, ಮಾರಾಟ, ಪ್ರದರ್ಶನ, ಪ್ರೋತ್ಸಾಹ ಮತ್ತು ಸಮಕಾಲೀನ ಸ್ಥಿತಿಗತಿ

ಕಿನ್ನಾಳ ಗ್ರಾಮದಲ್ಲಿ ಚಿತ್ರಗಾರರ (ಜಿನಗಾರರ) ಒಂದು ಓಣಿಯೇ ಇದೆ. ಇಲ್ಲಿ ಚಿತ್ರಗಾರರು ಕುಟುಂಬದ ಸದಸ್ಯರು ತಮ್ಮ ತಮ್ಮ ಕೆಲಸದಲ್ಲಿ ನಿರತರಾಗಿರುತ್ತಾರೆ. ಅಪ್ಪಟ ಜನಪದ ಕಲೆಯಾದ ಕಿನ್ನಾಳ ಕಲೆಯನ್ನು ಮುಂದುವರೆಸುತ್ತ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಚಿತ್ರಗಾರರ ಬಗ್ಗೆ ಒಂದು ಜನಪದ ಗೀತೆ ಹೀಗೆ.

ತುಂಬಿ ಸೂಸಲಿ ಚಿತ್ರದ ಪಟವೆ
ಪಂಚಾಳರ ನಿಂಗೋಜಿ ಜಿನಗಾರ ನಾಗೋಜಿ
ಚಿತ್ರ ಬರೆದಾರ ಶಿವಲಿಂಗ ನಂದಿ ಶಿವಹರನೇ ಬಲ್ಲ ಚಿತ್ರಗಾರಣ್ಣ ॥
ತುಂಬಿ ಸೂಸಲಿ ಚಿತ್ರದ ಪಟವೆ
ಹಂಪಿಯ ಗುಡಿಯಾಗ ಕೇಂಪೇಳು ಬಣ್ಣ ಬಳಿದು
ಸಂಪ ಮಾಮರಕ ಗಿಣಿ ಬರೆದ ಶಿವಹರನೆ ಬಲ್ಲ
ಚಿತ್ರಗಾರಣ್ಣ ತುಂಬಿ ಸೂಸಲಿ ಚಿತ್ರದ ಪಟವು ॥ [೧೧]

ಎಂದು ಹಳ್ಳಿಗರು ಪೂರ್ವಕಾಲದ ಸುಪ್ರಸಿದ್ಧ ಚಿತ್ರಕಾರ ಪಾಂಚಾಳ ಲಿಂಗೋಜನನ್ನು, ಜಿನಗಾರ ನಾಗೋಜನನ್ನು ಹಾಡಿ ಅವರ ಹೆಸರುಗಳನ್ನು ಈ ಪದ್ಯದ ಮೂಲಕ ಉಳಿಸಿ ಕನ್ನಡ ಜನಾಂಗಕ್ಕೆ ಮಹದುಪಕಾರ ಮಾಡಿದ್ದಾರೆ.

ಕಿನ್ನಾಳದಲ್ಲಿ ತಯಾರಾಗುವ ಶಿಲ್ಪಗಳು, ಚಿತ್ರಗಳು ಕಿನ್ನಾಳ ಕಲೆಯೆಂದೆ ಹೆಸರುವಾಸಿಯಾಗಿವೆ. ಈ ಜನಪದ ಕಲೆಯನ್ನು ಆರ್ಯಕ್ಷತ್ರಿಯ ಜನಾಂಗಕ್ಕೆ ಸೇರಿದ ಚಿತ್ರಗಾರರು ಅಥವಾ ಜಿನಗಾರರು ಬಣ್ಣಗಾರರು ರಚನೆ ಮಾಡುತ್ತಾ ಬಂದಿದ್ದಾರೆ. ಇವರನ್ನು ಸಾಮಾನ್ಯವಾಗಿ ಚಿತ್ರಗಾರರು ಎಂದೇ ಕರೆಯುತ್ತಾರೆ. ಆಂಧ್ರಪ್ರದೇಶದ ಅನಂತಪುರ ಬಳ್ಳಾರಿ ಜಿಲ್ಲೆ ಹೊಸಪೇಟೆ ಕೂಡ್ಲಿಗಿ, ಕೊಟ್ಟೂರು, ಇಟಗಿ, ಹರಪನಹಳ್ಳಿ, ಕನಕಗಿರಿ ಮುಂತಾದ ಊರುಗಳಲ್ಲಿ ಕಂಡು ಬರುತ್ತಾರೆ. ಕಿನ್ನಾಳ ಗ್ರಾಮವಂತೂ ಜನಪದ ಚಿತ್ರ ಶಿಲ್ಪಕಲೆಯ ಮುಖ್ಯ ಕೇಂದ್ರವೆನಿಸಿದೆ. ಇಲ್ಲಿ ಚಿತ್ರಗಾರರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಇಂದಿಗೂ ಇವರನ್ನು ಜನಪದ ಕಲಾವಿದರೆಂದು ಗುರುತಿಸಲಾಗುತ್ತಿದೆ. ಕಲಾತ್ಮಕ ಕಾರ್ಯಗಳ ನಿರ್ವಹಣೆ ಚಿತ್ರ ರಚನೆ ಶಿಲ್ಪ ರಚನೆ ಅವರ ಬದುಕಿನ ಆಧಾರವಾಗಿ ಭಾಗವಾಗಿ ಇಂದಿಗೂ ಉಳಿದು ಬಂದಿದೆ.

ಕಿನ್ನಾಳ ಕಲಾವಿದರು ಬದಲಾಗುತ್ತಿರುವ ಕಾಲ, ಜನರ ಅಭಿರುಚಿಗಳಿಗೆ ತಕ್ಕಂತೆ ವಸ್ತು ಮತ್ತು ರೂಪಗಳನ್ನು ಬದಲಾಯಿಸಿಕೊಂಡಿದ್ದಾರೆ. ಆದರೂ ಕೂಡ ಪರಂಪರೆಯಿಂದ ಬಂದ ವಿಜಯನಗರ ಭಿತ್ತಿಚಿತ್ರಗಳ ಶೈಲಿಯ

೧೧. ಡಾ.ಬಿ.ಎಸ್.ಗದ್ಗಿಮಠ : ಗದ್ಗಿಮಠ ಬರಹಗಳು, ಪುಟ ೨೪೨

ಹಲವಾರು ಅಂಶಗಳು ಇಂದಿಗೂ ಉಳಿದು ಬಂದಿರುವುದು ಗಮನಾರ್ಹ ವಿಷಯ. ಈ ಕಲಾವಿದರು ಹಲವಾರು ಹೊಸರೂಪಗಳನ್ನು, ವಿನ್ಯಾಸಗಳನ್ನು ತಮ್ಮ ರಚನೆಯಲ್ಲಿ ಅಳವಡಿಸಿಕೊಂಡಿದ್ದಾರೆ. ವಿಶೇಷವಾಗಿ ಉತ್ತರ ಕರ್ನಾಟಕದ ಜನಪದ ಕಲೆಯ ಸೊಬಗನ್ನು ಮೈಗೂಡಿಸಿಕೊಂಡಿರುವುದನ್ನು ಕಾಣಬಹುದು. ಕಿನ್ನಾಳ ಕಲಾವಿದರು ಮೂಲತಃ ಪರಂಪರಾಗತ ಶೈಲಿಯಲ್ಲಿ ತರಬೇತಿ ಹೊಂದಿ ಕುಶಲಕರ್ಮಿಗಳಾಗಿರುವುದು ವಾಸ್ತವ. ಹೀಗೆ ಕಿನ್ನಾಳ ಚಿತ್ರ ಶೈಲಿ ಎಷ್ಟೇ ಪ್ರಭಾವಗಳಿಗೆ ಒಳಗಾಗಿದ್ದರೂ ಅದು ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದೆ ಎನ್ನಬಹುದು.[೨]

ಕಿನ್ನಾಳ ಕಲಾವಿದರು ಇಂದು ಮಾಡುವ ಕೃತಿಗಳು, ಕೆತ್ತನೆಯ ಕೆಲಸಗಳು ಹಲವಾರು ಚಿತ್ರ ರಚನೆ, ಮರದ ಮೂರ್ತಿಗಳನ್ನು, ದೇವಸ್ಥಾನಕ್ಕೆ ಬೇಕಾಗುವ ಉತ್ಸವ ಮೂರ್ತಿಗಳು, ಅವುಗಳ ವಾಹನಗಳನ್ನು ಮಾಡುವುದು ಗ್ರಾಮದೇವತೆ, ಗ್ರಾಮ ದೇವತೆಯ ಹಳೆಯ ಮೂರ್ತಿಗಳಿಗೆ ಬಣ್ಣ ಹಾಕುವುದು, ರಥಗಳ ಅಲಂಕಾರಿಕ ಗೊಂಬೆಗಳು, ನವಗ್ರಹ ದೇವತೆಗಳು, ಕಿನ್ನಾಳ ಗೌರಿಯಂದೇ ಪ್ರಸಿದ್ಧವಾಗಿರುವ ಕಿನ್ನಾಳ ಕಟ್ಟಿಗೆಯ ಗೌರಿ ವಿಗ್ರಹ ಇವುಗಳ ಜೊತೆಗೆ ತೊಟ್ಟಿಲು, ಹಣ್ಣು ಹಂಪಲು, ಕಾಮ-ರತಿ ವಿಗ್ರಹಗಳನ್ನು ಮಾಡುತ್ತಾರೆ. ವಿಶೇಷವಾಗಿ ಕಿನ್ನಾಳ ಚೌಕಿಗಳನ್ನು ಈ ಕಲಾವಿದರು ರಚಿಸುತ್ತಾರೆ. ಇಂದಿನ ಕಾಲದ ಜೀವನ ಗತಿಗೆ ಸ್ಪಂದಿಸುತ್ತಾ ಹೊಸ ವಿಷಯ ವಸ್ತುಗಳನ್ನು ಪರಂಪರೆಯ ಶೈಲಿಯಲ್ಲಿ ವ್ಯಕ್ತಪಡಿಸುತ್ತಾ ಇದ್ದಾರೆ.

ಕಿನ್ನಾಳ ಗ್ರಾಮದಲ್ಲಿ ಸುಮಾರು ಅರವತ್ತು ಕುಟುಂಬವಿದ್ದು ಕೆಲವು ಕುಟುಂಬಗಳು ತಮ್ಮ ವಂಶ ಪಾರಂಪರ್ಯವಾಗಿ ಬಂದ ಕಿನ್ನಾಳ ಕಲೆಯನ್ನು ಬಿಟ್ಟು ಬೇರೆ ಬೇರೆ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ. ಸುಮಾರು ಹತ್ತು ಹನ್ನೆರಡು ವರ್ಷಗಳ ಹಿಂದೆ ೩೦ರಿಂದ೩೫ಕುಟುಂಬಗಳು ಕಿನ್ನಾಳ ಕಲೆಯ ಕಲಾಕೃತಿಗಳನ್ನು ರಚಿಸುತ್ತಾ ತಮ್ಮ ಜೀವನ ನಡೆಸುತ್ತಿದ್ದರು. ಆದರೆ ಆಧುನಿಕ ಯುಗದ ಮತ್ತು ತಾಂತ್ರಿಕತೆ ಕೈಗಾರಿಕರಣದಿಂದಾಗಿ ಕಿನ್ನಾಳ ಕಲೆಯ ಮೇಲೆ ಬಹಳಷ್ಟು ಪರಿಣಾಮ ಬೀರಿದೆ. ಏಕೆಂದರೆ ಸಿದ್ಧಗೊಂಬೆಗಳು ಕಡಿಮೆ ಬೆಲೆಗೆ ದೊರಕುವಾಗ ಈ ಅಪ್ಪಟ ಜನಪದ ಕಲೆಗೆ ಬೇಡಿಕೆ ಕಡಿಮೆಯಾಗಿರುವುದರನ್ನು ಕಾಣುತ್ತೇವೆ. ಈಗ ಕಿನ್ನಾಳದಲ್ಲಿ ೧೦-೧೫ ಕುಟುಂಬಗಳು ಸದ್ಯ ಕೆಲಸ ನಿರ್ವಹಿಸತ್ತವೆ. ಈ ಚಿತ್ರಗಾರರಲ್ಲಿ ಹಲವರು ಬಡವರಾಗಿದ್ದಾರೆ. ಇವತ್ತಿಗೂ ಇವರ ಜೀವನ ಕಿನ್ನಾಳ ಕಲಾಕೃತಿಗಳನ್ನು ಮಾರಾಟ ಮಾಡಿ ಬದುಕುವುದಾಗಿದೆ.

ಇಂದಿನ ಆಧುನಿಕ ಕಾಲದಲ್ಲಿ ಇಲ್ಲಿನ ಕಲಾಕೃತಿಗಳಿಗೆ ಬೇಡಿಕೆ ಕಡಿಮೆಯಾಗಿರುವುದೇ ಇವರ ಜೀವ ಕಷ್ಟಕರವಾಗಿರುವುದಕ್ಕೆ ಕಾರಣವಾಗಿದೆ. ಆದರೂ ದೇಶ ವಿದೇಶದವರು ಈ ಕಲೆಯ ಶ್ರೇಷ್ಠತೆಯನ್ನು ಒಪ್ಪಿಕೊಂಡಿರುವುದೂ ಸತ್ಯ. ಸುಪ್ರಸಿದ್ದ ಕಲಾ ವಿಮರ್ಶಕರಾದ ಇ.ಬಿ.ಹ್ಯಾವೆಲರಂಥವರು ಕೂಡ ಕಿನ್ನಾಳ ಕಲೆಯ ಸೌಂದರ್ಯಕ್ಕೆ ಮನಸೋತು ಮುಕ್ತ ಕಂಠದಿಂದ ಈ ರೀತಿಯ ಮಾತುಗಳನ್ನು ದಾಖಲಿಸಿದ್ದಾರೆ. "ಯಾವ ಪ್ರತಿಷ್ಠಿತ ಕಲಾ ಸಂಸ್ಥೆಯ ಪದವೀಧರರಿಗೂ ಕಡಿಮೆ ಇಲ್ಲದ ಕಲಾ ಪ್ರಾವಿಣ್ಯತೆಯನ್ನು ಭಾರತದ ಗ್ರಾಮಿಣ ಕಲಾವಿದರಾದ ಈ ಕಿನ್ನಾಳ ಕಲಾವಿದರು ಹೊಂದಿದ್ದಾರೆ" ಎಂಬ ಮಾತು ವಾಸ್ತವದಿಂದ ಕೂಡಿದ ಅಂಶವಾಗಿದೆ. ರಾಜ್ಯ ಮಟ್ಟದ ಹಲವು ಪ್ರಶಸ್ತಿಗಳನ್ನು ಕಿನ್ನಾಳ ಕಲಾವಿದರು ಪಡೆದಿರುತ್ತಾರೆ. ಕೆಲವು ಕಲಾವಿದರ ಪರಿಚಯ ಇಲ್ಲಿದೆ.


ದಿ.ವೆಂಕೋಬಪ್ಪ ಕೃಷ್ಣಪ್ಪ ಚಿತ್ರಗಾರ

೧೯೬೯ರಲ್ಲಿ ಪ್ರಪ್ರಥಮ ರಾಜ್ಯ ಪ್ರಶಸ್ತಿ ವಿಜೇತ ಕಲಾವಿದ ಕೃಷ್ಣಪ್ಪ ಚಿತ್ರಗಾರನ ಮಗನಾಗಿ ಹುಟ್ಟಿದ ವೆಂಕೋಬಪ್ಪ ಚಿತ್ರಗಾರರು ಬಾಲ್ಯದಿಂದಲೇ ಕಿನ್ನಾಳ ಕಲಾಕೃತಿಗಳನ್ನು ತಮ್ಮ ತಂದೆಯವರಿಂದ ಕಲಿತರು. ದ್ವಾರ ಪಾಲಕರು ತೇರಿನ ಅಲಂಕಾರಕ್ಕಾಗಿ ಬಳಸುವ ಗೊಂಬೆಗಳು, ಪಲ್ಲಕ್ಕಿ, ಛತ್ರಿ, ಗೊಂಬೆಗಳನ್ನು ರಚಿಸುತ್ತಿದ್ದರು. ಎಂ.ವೈ.ಘೋರ್ಪಡೆಯವರು ಸಂಡೂರಿನಲ್ಲಿ ಕರಕುಶಲಕೇಂದ್ರವೊಂದನ್ನು ಸ್ಥಾಪಿಸಿ ಆ ಕೇಂದ್ರದ ಮೂಲಕ ಈ ಕಲೆಯನ್ನು ಅಭಿವೃದ್ಧಿಪಡಿಸಲು ಈ ಕಲೆಯ ತರಬೇತಿಗೆ ವ್ಯವಸ್ಥೆ ಮಾಡಿದ್ದರು. ನಾಡಿನ ಬೇರೆ ಬೇರೆ ಭಾಗದಿಂದ ಕಿನ್ನಾಳ ಚಿತ್ರಗಾರಿಕೆಯನ್ನು ಕಲಿಯಲು ಬರುವ ಅಭ್ಯರ್ಥಿಗಳು ಕಿನ್ನಾಳ ಕಲೆಯನ್ನು ತರಬೇತಿ ನೀಡಲು ವೆಂಕೋಬಪ್ಪ ಚಿತ್ರಗಾರರನ್ನು ಮುಖ್ಯಸ್ಥರನ್ನಾಗಿ ನೇಮಿಸಿಕೊಂಡಿದ್ದರು.

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ಮಂಡಲಿಯಿಂದ ಇವರಿಗೆ ೧೯೮೫ನೇ ಸಾಲಿನಲ್ಲಿ 'ಶಿಲ್ಪಾಚಾರ್ಯ'ರೆಂಬ ಪ್ರಶಸ್ತಿಯನ್ನು ಕಂಚಿನ ಫಲಕದೊಂದಿಗೆ ಅಂದಿನ ಕರ್ನಾಟಕ ರಾಜ್ಯಪಾಲರಾದ ಶ್ರೀ

೦೨. ಆರ್.ಎಚ್.ಕುಲಕರ್ಣಿ : ಕಿನ್ನಾಳ ಚಿತ್ರಕಲೆ, ಪುಟ ೬





ಶ್ರೀ ಏಕಪ್ಪ ಚಿತ್ರಗಾರ





ಶ್ರೀ ನಾರಾಯಣಪ್ಪ ಚಿತ್ರಗಾರ





ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರೊಂದಿಗೆ ಶ್ರೀ ನಾರಾಯಣಪ್ಪ ಚಿತ್ರಗಾರ

ಎ.ಎನ್.ಬ್ಯಾನರ್ಜಿ ಅವರಿಂದ ಪಡೆದುಕೊಂಡರು. ೧೯೯೧ನೇ ಸಾಲಿನಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಯನ್ನು ಸಹ ಇವರಿಗೆ ನೀಡಿ ಗೌರವಿಸಿದೆ. ವೆಂಕೋಬಪ್ಪನವರು ೧೯೮೪ರಲ್ಲಿ ಕರಕುಶಲ ಮಂಡಲಿಯ ರಾಜ್ಯ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯರಾಗಿ ನೇಮಕಗೊಂಡಿದ್ದರು. ವೆಂಕೋಬಪ್ಪನವರ ಮಗ ಸೋಮಣ್ಣ ಸಹ ರಾಜ್ಯ ಪ್ರಶಸ್ತಿ ಪಡೆದು ಒಂದೇ ಕುಟುಂಬದಲ್ಲೇ ಮೂರು ರಾಜ್ಯ ಪ್ರಶಸ್ತಿಯನ್ನು ಪಡೆದ ಏಕೈಕ ಕಿನ್ನಾಳ ಕುಟುಂಬ ಇದಾಗಿದೆ. ಸೋಮಣ್ಣ ಚಿತ್ರಗಾರ ಸಹ ಹೊಸ ಹೊಸ ರೀತಿಯ ಕಲಾಕೃತಿಗಳನ್ನು ರಚಿಸಸುತ್ತಾ, ಕಿನ್ನಾಳ ಕಲೆಯ ಶ್ರೇಯೋಭಿವೃದ್ಧಿಗಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಏಕಪ್ಪ ರಾಮಚಂದ್ರಪ್ಪ ಚಿತ್ರಗಾರ


ರಾಜ್ಯ ಪ್ರಶಸ್ತಿ ವಿಜೇತ ದಿವಂತ ರಾಮಚಂದ್ರಪ್ಪ ಚಿತ್ರಗಾರರ ಮಗನಾಗ ೧೦.೫.೧೯೪೩ರಲ್ಲಿ ಏಕಪ್ಪ ಚಿತ್ರಗಾರರು ಜನಿಸಿದರು. ಪ್ರಾರಂಭದ ಶಿಕ್ಷಣವನ್ನು ಕಿನ್ನಾಳದಲ್ಲಿ ಪಡೆದರು. ತಮ್ಮ ತಂದೆಯವರಿಂದ ಕಿನ್ನಾಳ ಕಲೆಯಲ್ಲಿ ಪರಿಣತಿ ಪಡೆದು ಕರ್ನಾಟಕದ ಹಲವಾರು ದೇವಾಲಯಗಳಿಗೆ ದ್ವಾರಪಾಲಕರು, ದಶಾವತಾರದ ಗೊಂಬೆ ಮತ್ತು ಗ್ರಾಮದೇವತೆಗಳ ಮೂರ್ತಿಗಳನ್ನು ರಚಿಸಿಕೊಟ್ಟಿದ್ದಾರೆ. ಏಕಪ್ಪ ಚಿತ್ರಗಾರರಿಗೆ ಮಂಜುನಾಥ, ಅಣ್ಣಪ್ಪ, ಲತಾ, ಆನಂದ ಎನ್ನುವ ಮಕ್ಕಳಿದ್ದಾರೆ. ಇವರು ಮುಂದುವರೆಸಿಕೊಂಡು ಬಂದಿರುವ ಕಿನ್ನಾಳ ಕಲೆಯಲ್ಲಿ ಪರಿಣತಿ ಪಡೆದಿದ್ದಾರೆ. ತಂದೆಯ ಜೊತೆಗೆ ಇವರೂ ಸಹ ಕಲಾಕೃತಿಗಳನ್ನು ರಚಿಸುತ್ತಾ ಇರುತ್ತಾರೆ.

ಇವರಲ್ಲಿ ಅಣ್ಣಪ್ಪ ಚಿತ್ರಗಾರ ಕಲೆಯಲ್ಲಿ ಆರ್ಟ ಮಾಸ್ಟರ ಪದವಿಯನ್ನು ಪಡೆದು ಚೌಕಿ ಮಣೆಗಳನ್ನು ರಚಿಸುವಲ್ಲಿ ಸಿದ್ಧ ಹಸ್ತರು. ಏಕಪ್ಪನವರು ಹೆಚ್ಚಾಗಿ ದೇವರ ಮೂರ್ತಿ ಗ್ರಾಮ ದೇವತೆಗಳು ಪಲ್ಲಕ್ಕಿ, ಕೊಡೆ, ದ್ವಾರಪಾಲಕರು, ತೇರಿನ ಬೊಂಬೆಗಳು, ತೊಟ್ಟಿಲುಗೌರಿ ಲಕ್ಷ್ಮಿ, ಕಿನ್ನಾಳಚೌಕಿ, ಗಣೇಶ, ನಂದಿ, ಮೂರ್ತಿ ಶಿಲ್ಪಗಳನ್ನು ರಚಿಸುತ್ತಾರೆ. ಕರಕುಶಲ ಅಭಿವೃದ್ಧಿ ನಿಗಮದ ನಡೆಸಲ್ಪಟ್ಟ ಕಾರ್ಯಾಗಾರದಲ್ಲಿ ಒಂದು ವರ್ಷ ಕಾಲ ಶಿಕ್ಷಕರಾಗಿ ನೇಮಕಗೊಂಡ ಅನೇಕ ವಿದ್ಯಾರ್ಥಿಗಳಿಗೆ ಕಿನ್ನಾಳ ಕಲೆಗೆ ಮಾರ್ಗದಶನ ನೀಡಿದ್ದಾರೆ. ಮತ್ತು ಜಿಲ್ಲಾಡಳಿತದಿಂದ ನಡೆಸಲ್ಪಟ್ಟ ಕಿನ್ನಾಳ ಕಲೆಯ ಮಾರಾಟ ಮಾಡುವ ಸಂಸ್ಥೆಯ ಅಧ್ಯಕ್ಷರಾಗಿ ೩ ವರ್ಷ ಸೇವೆ ಸಲ್ಲಿಸಿದ್ದಾರೆ.

ಏಕಪ್ಪನವರು ಹಲವಾರು ಕಾರ್ಯಾಗಾರದಲ್ಲಿ ನಿರ್ದೇಶಕರಾಗಿ ಕಿನ್ನಾಳ ಕಲೆಯನ್ನು ಕಲಾವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಿದ್ದಾರೆ. ಇದರಿಂದ ಕಿನ್ನಾಳ ಕಲೆಯನ್ನು ಬೆಳೆಸುವಲ್ಲಿ ಇಂತಹ ಕಾರ್ಯಾಗಾರವು ಪ್ರಮುಖ ಸ್ಥಾನ ಪಡೆಯುತ್ತದೆ. ೨೦೦೫ ರಲ್ಲಿ ಮಹಾಲಸಾ ಕಲಾಶಾಲೆ ಮಂಗಳೂರು ಈ ಕಲಾಶಾಲೆಯ ಕಲಾವಿದ್ಯಾರ್ಥಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿ ಕಿನ್ನಾಳ ಶಾಲೆಯಲ್ಲಿ ತರಬೇತಿ ಹೊಂದಿದ್ದಾರೆ. ೨೦೦೫ರಲ್ಲಿ ರವೀಂದ್ರ ಕಲಾನಿಕೇತನ ತುಮಕೂರ, ೨೦೦೫ ಶ್ರೀ ಬಸವೇಶ್ವರ ಚಿತ್ರಕಲಾಶಾಲೆ ಹುಮನಾಬಾದ, ೨೦೦೫ರಲ್ಲಿ ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯ ಬಸವಕಲ್ಯಾಣ, ೨೦೦೩ರಲ್ಲಿ ಶ್ರೀ ಕಲಾನಿಕೇತನ ಮೈಸೂರು ಮುಂತಾದ ಕಲಾಶಾಲೆಗಳ ಆಹ್ವಾನದ ಮೇರೆಗೆ ಹೋಗಿ ಕಿನ್ನಾಳ ಕಲೆ ತರಬೇತಿಯನ್ನು ನೀಡಿದ್ದಾರೆ. ಮರೆಯಾಗುತ್ತಿರುವ ಕಿನ್ನಾಳ ಕಲೆಯನ್ನು ಕಲಾವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ. ೨೦೦೩ರಲ್ಲಿ ಅಖಿಲ ಭಾರತ ಸಾಂಪ್ರದಾಯಿಕ ಚಿತ್ರಕಲಾ ಕಾರ್ಯಗಾರದಲ್ಲಿ ಭಾಗವಹಿಸಿ ಕಲಾಕೃತಿಗಳನ್ನು ರಚಿಸಿದ್ದಾರೆ. ಹಂಪಿ ಉತ್ಸವ, ಚಿತ್ರಸಂತೆಯಲ್ಲಿ ಭಾಗವಹಿಸಿ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ.

ಸೋಮಣ್ಣ ವೆಂಕೋಬಪ್ಪ ಚಿತ್ರಗಾರ

ಸೋಮಣ್ಣ ಚಿತ್ರಗಾರರಿಗೆ ತಮ್ಮ ತಂದೆ ದಿ॥ ವೆಂಕೋಬಪ್ಪ ಚಿತ್ರಗಾರ ಮತ್ತು ಅಜ್ಜ ದಿ॥ ಕೃಷ್ಣಪ್ಪ ಚಿತ್ರಗಾರರಿಂದ ಬಳುವಳಿಯಾಗಿ ಬಂದಿರುವ ಕಿನ್ನಾಳ ಕಲೆಯನ್ನು ಮುಂದುವರಿಸುತ್ತಾ ಬಂದಿದ್ದಾರೆ. ಸೋಮಣ್ಣನವರು ೧೯೪೭ರಲ್ಲಿ ಕಿನ್ನಾಳದಲ್ಲಿ ಜನಿಸಿದರು. ಸೋಮಣ್ಣ ಚಿತ್ರಗಾರ ಕಿನ್ನಾಳ ಕಲೆಯ ಪೋಷಣೆಯಲ್ಲಿ ಸಾಕಷ್ಟು ಪರಿಶ್ರಮಿಸಿದ್ದಾರೆ. ಆಧುನಿಕ ಆಕರ್ಷಣೆಗಳ ಅರ್ಭಟದಲ್ಲಿಯೂ ಈ ಕಲೆಯನ್ನು ಉಳಿಸಿಕೊಂಡು ಬಂದಿರುವ ಕಿನ್ನಾಳ ಗ್ರಾಮದ ಹಲವು ಕುಂಟುಂಬಗಳಲ್ಲಿ ಸೋಮಣ್ಣನವರ ಕುಟುಂಬವು ಕಿನ್ನಾಳ ಕಲೆಯು ನಶಿಸಿ ಹೋಗಬಾರದೆಂಬ ಉದ್ದೇಶದಿಂದ ಅನುವಂಶಿಕವಾಗಿ ಬಂದಕಲೆಯನ್ನು ಪೋಷಿಸಿ ಬೆಳಸಿಕೊಂಡು ಹೋಗುವ ಸಲುವಾಗಿ ಮಕ್ಕಳಿಗೆ ಈ ಕಲೆಯನ್ನು ಹೇಳಿಕೊಡುತ್ತಿದ್ದಾರೆ.





ಕಿನ್ನಾಳ ಕಲೆಯ ಕಲಾವಿದರು



ಶ್ರೀ ಸೋಮಣ್ಣ ಚಿತ್ರಗಾರ
ಮತ್ತು ಅವರ ಚೌಕಿ ಕಲಾಕೃತಿ



ಶ್ರೀ ಶೇಷಪ್ಪ ಚಿತ್ರಗಾರ ತಮ್ಮ ಕೃತಿಗಳೊಂದಿಗೆ

ಕಿನ್ನಾಳ ಕಲೆಯನ್ನು ದಾವಣಗೆರೆಯಲ್ಲಿ ನೆಲೆಸಿರುವ ಸೋಮಣ್ಣ ಚಿತ್ರಗಾರ ತಮ್ಮ ಮಕ್ಕಳೊಂದಿಗೆ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಕಿನ್ನಾಳ ಗ್ರಾಮದ ಸೋಮಣ್ಣನವರು ಗದುಗಿನ ವಿಜಯ ಕಲಾಮಂದಿರದಲ್ಲಿ ಆರ್ಟ ಮಾಸ್ಟರ್ ಮತ್ತು ಚಿತ್ರಕಲೆಯ ಡಿಪ್ಲೋಮಾ ಪಡೆದಿದ್ದಾರೆ. ಈ ಜನಪದ ಕಲೆ ತಮ್ಮ ಪೂರ್ವಿಕರೊಂದಿಗೆ ಕಣ್ಮರೆ ಆಗಬಾರದೆಂಬ ಕಾರಣಕ್ಕಾಗಿ ಸೋಮಣ್ಣ ಚಿತ್ರಗಾರರು ತಮ್ಮ ಪರಿಶ್ರಮವನ್ನು ಮುಂದುವರಿಸಿದ್ದಾರೆ. ಕಿನ್ನಾಳ ಚೌಕಿ ನಿರ್ಮಿಸುವಲ್ಲಿ ತಮ್ಮ ಪ್ರತಿಭೆಯನ್ನು ಗುರುತಿಸಿಕೊಂಡಿರುವ ಇವರು ವೃತ್ತಿಯಲ್ಲಿ ಕಲಾಶಿಕ್ಷಕರಾಗಿ ರಾಜ್ಯದ ಹಲವಾರು ಕಡೆ ಸೇವೆ ಸಲ್ಲಿಸಿದ್ದಾರೆ. ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಕೆಲಸ ನಿರ್ವಹಿಸಿದ್ದಾರೆ. ಪರಿವೀಕ್ಷಕರಾಗಿಯೂ, ಬೆಂಗಳೂರಿನ ಆಯುಕ್ತರ ಕಛೇರಿಯಲ್ಲಿ ಸಹಾಯಕ ನಿರ್ದೇಶಕರಾಗಿಯೂ, ಸುದೀರ್ಘವಾದ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದರು.

ಸೋಮಣ್ಣನವರು ಇಂದಿನ ತಲೆಮಾರಿನಲ್ಲಿ ಕಿನ್ನಾಳ ಚೌಕಿ ರಚಿಸುವಲ್ಲಿ ಪರಿಣಿತರಾಗಿದ್ದಾರೆ. ಮನಮೋಹಕ ಕಿನ್ನಾಳ ಚೌಕಿಗಳನ್ನು ವಿವಿಧ ಮಾದರಿಗಳಲ್ಲಿ ರಚಿಸುವುದರಲ್ಲಿ ಇವರು ಸಿದ್ಧಹಸ್ತರು. ಅಷ್ಟಕೋನಾಕೃತಿಯ ಹಲಗೆಯ ಎಂಟು ಕಾಲುಗಳ ಆಧಾರ ನೀಡಿ ತಾವೇ ನೈಸರ್ಗಿಕವಾಗಿ ತಯಾರಿಸಿದ "ಲಜಾವರ" ಬಣ್ಣದಿಂದ ಸುಂದರಚಿತ್ರಗಳು ಹೂವು, ಬಳ್ಳಿಗಳನ್ನು ಸೂಕ್ಷ್ಮವಾಗಿ ಚಿತ್ರಿಸುತ್ತಾರೆ. ಅಷ್ಟಭುಜಾಕೃತಿ ನಕ್ಷತ್ರಾಕೃತಿ, ಸ್ವಸ್ತಿಕ್, ವರ್ತುಳಗಳ ಮುಂತಾದ ಆಕಾರದ ಚೌಕಿಗಳನ್ನು ತಯಾರಿಸುವುದಲ್ಲದೇ ಫಲಕಗಳು ನವಗ್ರಹ, ಅಷ್ಟದಿಕ್ಪಾಲಕರು, ಶಿವ ಪಾರ್ವತಿ, ಗೌರಿ ಮೂರ್ತಿಗಳನ್ನು ರಚಿಸಿರುತ್ತಾರೆ.

ಸೋಮಣ್ಣನವರು ತಯಾರಿಸಿದ ಅಷ್ಟ ಭುಜಾಕೃತಿ ಪ್ರಭಾವಳಿ ಚೌಕಿಗೆ ಕರ್ನಾಟಕ ಸರ್ಕಾರವು ೧೯೯೧ರಲ್ಲಿ ಪ್ರಶಂಸಾ ಪತ್ರನೀಡಿ ಸನ್ಮಾಸಿದೆ. ೧೯೯೨ರಲ್ಲಿ ಇವರ ಪ್ರಭಾವಳಿ ಚೌಕಿಗೆ ರಾಜ್ಯ ಪ್ರಶಸ್ತಿ, ೧೯೯೩ರಲ್ಲಿ ರಾಯಚೂರಿನ ಜಿಲ್ಲಾಮಟ್ಟದ ಅತ್ಯುತ್ತಮ ಕಲಾಶಿಕ್ಷಕ ಪ್ರಶಸ್ತಿ, ೧೯೯೭ರಲ್ಲಿ ಮೈಸೂರಿನ ರಾಮಸನ್ಸ ಪ್ರತಿಷ್ಠಾನದ "ಶಿಲ್ಪ ಶ್ರೀ ಕಲಾಪ್ರಶಸ್ತಿ" ನೀಡಿ ಗೌರವಿಸಿದೆ. ಸೋಮಣ್ಣನವರ ಅಜ್ಜ ದಿ. ಕೃಷ್ಣಪ್ಪ ೧೯೬೯ರಲ್ಲಿ ಪ್ರಥಮಬಾರಿಗೆ ರಾಜ್ಯ ಪ್ರಶಸ್ತಿ ಪಡೆದ ಕಿನ್ನಾಳ ಕಲಾವಿದ ತಂದೆ ದಿ. ವೆಂಕೋಬಪ್ಪ ಸಹ ೧೯೮೫ರಲ್ಲಿ ರಾಜ್ಯ ಪ್ರಶಸ್ತಿ ಪಡೆದಿದ್ದನ್ನು ಇಲ್ಲಿ ನೆನಪಿಸಬಹುದು. ಈ ಒಂದೇ ಕುಟುಂಬದಲ್ಲಿ ಮೂರು ರಾಜ್ಯ ಪ್ರಶಸ್ತಿ ಪಡೆದ ಗೌರವಕ್ಕೆ ಪಾತ್ರರಾದ ಕಲಾವಿದರಾಗಿದ್ದಾರೆ.

೧೯೯೩ರಲ್ಲಿ ಹೈದ್ರಾಬಾದಿನಲ್ಲಿ ನಡೆದ ದಕ್ಷಿಣವಲಯದ ಸಾಂಸ್ಕೃತಿಕ ಕೇಂದ್ರ ಆಯೋಜಿಸಿದ ರಾಷ್ಟ್ರಮಟ್ಟದ ಕಲಾ ಶಿಬಿರದಲ್ಲಿ ರಾಜ್ಯದ ಪರವಾಗಿ ಭಾಗವಹಿಸಿ ಕಿನ್ನಾಳಕಲಾ ಪ್ರತಿಭೆಯನ್ನು ನಡೆಸಿದ್ದರು. ೧೯೯೪ರಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿ ಹೊನ್ನಾವರದಲ್ಲಿ ಆಯೋಜಿಸಿದ ಸಾಂಪ್ರದಾಯಿಕ ಕಲಾ ಶಿಬಿರದಲ್ಲಿ ಭಾಗವಹಿಸಿ ಸನ್ಮಾನಿತರಾಗಿದ್ದಾರೆ. ಕಿನ್ನಾಳ ಕಲೆಯನ್ನು ದಾವಣಗೆರೆಯಲ್ಲಿ ನೆಲೆಸಿರುವ ಸೋಮಣ್ಣನವರು ತಮ್ಮ ಮಕ್ಕಳೊಂದಿಗೆ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. "ನಮ್ಮ ಅಜ್ಜನವರ ಮತ್ತು ತಂದೆಯವರ ಮಾರ್ಗದರ್ಶನದಲ್ಲಿ ಬಾಲ್ಯದಲ್ಲೇ ಕಿನ್ನಾಳದ ಸಾಂಪ್ರದಾಯಕ ಕಲೆಯಲ್ಲಿ ತರಬೇತಿ ಪಡೆದ, ವಿಜಯನಗರ ಅರಸರ ಕಾಲದಿಂದಲೂ ಮನ್ನಣೆಗೆ ಪಾತ್ರವಾಗಿರುವ ಇಂತಹ ಒಂದು ಗ್ರಾಮೀಣ ಕಲೆಯು ನಶಿಸಿ ಹೋಗಬಾರದೆಂಬ ಉದ್ದೇಶದಿಂದ ಅನುವಂಶಿಕವಾಗಿ ನನಗೆ ಬಂದ ಈ ಕಲೆಯನ್ನು ಪೋಷಿಸಿ ಬೆಳಸಿಕೊಂಡು ಹೋಗುವ ಸಲುವಾಗಿ ಮಕ್ಕಳಿಗೂ ಈ ಕಲೆಯನ್ನು ಹೇಳಿಕೊಡುತ್ತಿದ್ದೇನೆ" ಎಂದು ಸೋಮಣ್ಣನವರು ಹೇಳುತ್ತಾರೆ.

ನಾರಾಯಣಪ್ಪ ಸೀನಪ್ಪ ಚಿತ್ರಗಾರ

ನಾರಾಯಣಪ್ಪ ಚಿತ್ರಗಾರ ೧೯೪೦ರಲ್ಲಿ ಸೀನಪ್ಪ ಚಿತ್ರಗಾರನ ಮಗನಾಗಿ ಜನಿಸಿದರು. ತಮ್ಮ ಕುಲಕಸುಬಾಗಿರುವ ಕಿನ್ನಾಳ ಕಲೆಯಲ್ಲಿ ಆಸಕ್ತಿ ಮೂಡಿದ್ದರಿಂದ ಏಳನೆಯ ತರಗತಿಗೆ ಶಾಲೆಯನ್ನು ಬಿಟ್ಟು ತಮ್ಮ ೧೫ ನೆಯ ವಯಸ್ಸಿಗೆ ಕಲಾಕೃತಿಗಳನ್ನು ರಚಿಸಲು ಪ್ರಾರಂಭಿಸಿದರು. ನಾರಾಯಣಪ್ಪನವರ ಮಗ ಕಿಶೋರ ಸಹ ಕಲಾಕೃತಿಗಳ ರಚನೆ ಮಾಡುತ್ತಾರೆ. ತಂದೆಯೊಂದಿಗೆ ಕಿಶೋರ್ ಕಲಾಕೃತಿಗಳನ್ನು ರಚಿಸುತ್ತಾರೆ. ವಂಶ ಪಾರಂಪರಿಕವಾಗಿ ಬೆಳೆದುಬಂದ ಕಲೆಯನ್ನು ಮುಂದುವರೆಸುತ್ತಾ ಬಂದಿರುವ ಕೆಲವೇ ಕೆಲವು ಕುಟುಂಬಗಳಲ್ಲಿ ನಾರಾಯಣಪ್ಪನವರ ಕುಟುಂಬವು ಒಂದು.

ನಾರಾಯಣಪ್ಪನವರು ವಿಶೇಷವಾಗಿ "ಕಿನ್ನಾಳ ಚೌಕಿಗಳನ್ನು ಹೆಚ್ಚಾಗಿ ರಚಿಸುತ್ತಾರೆ. ಅಷ್ಟಭುಜಾಕೃತಿ ವರ್ತುಳ, ಸಿಂಹಾಸನ ಚೌಕಿ, ಟೇಬಲ್ ಚೌಕಿ ಮತ್ತು ನರ್ತನೆಗೊಂಬೆಗಳನ್ನೂ ಸಹ ರಚಿಸುತ್ತಾರೆ. ರಥದ ಅಲಂಕಾರಕ್ಕೆ ಬೇಕಾಗುವ ಗೊಂಬೆಗಳು ದ್ವಾರಪಾಲಕರು ಫಲಕಗಳನ್ನು ರಚಿಸುವಲ್ಲಿ ನಿಪುಣರು. ಹಾಗೆಯೇ ಇವರು ರಚಿಸುವ ನರ್ತಗೊಂಬೆಗಳಿಗೆ ಬಹಳ ಬೇಡಿಕೆಯಿದೆ. ನಾರಾಯಣಪ್ಪನವರು ಕಾವೇರಿ ಎಂಪೋರಿಯಂ ಬೆಂಗಳೂರು, ಕೌಶಲ್ಯ ಮಳಿಗೆಗಳಿಗೆ ಕಲಾಕೃತಿಗಳನ್ನು ಕೊಡುತ್ತಾರೆ. ಹೆಬ್ಬೇವು, ಬೇವು, ನುಗ್ಗೆ ಕಟ್ಟಿಗೆಗಳಲ್ಲಿ ದೊಡ್ಡ ಗಾತ್ರದ ತೇರಿನ ಗೊಂಬೆಗಳಾದ ದ್ವಾರಪಾಲಕರು, ತಾಯಿ ಮಗು, ಪಲ್ಲಕ್ಕಿಗಳನ್ನು ಸಹ ರಚಿಸುತ್ತಾರೆ.

ಗ್ರಾಮೀಣ ಕಲೆಯನ್ನು ಜೀವನದ ಉಸಿರಾಗಿಸಿಕೊಂಡು ಅದನ್ನು ಉಳಿಸಿಕೊಂಡು ಬಂದಿರುವ ಕೆಲವೇ ಕಲಾವಿದರಗಳಲ್ಲಿ ನಾರಾಯಣಪ್ಪನವರ ಸಾಧನೆ ಉತ್ತಮವಾಗಿದೆ. ನಾರಾಯಣಪ್ಪನವರು ೧೯೮೫ರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿ, ಕರ್ನಾಟಕ ಲಲಿತಕಲಾ ಅಕಾಡಮಿ ನಡೆಸಿದ ಕಲಾ ಶಿಬಿರ, ೧೯೮೯ರಲ್ಲಿ ಕರ್ನಾಟಕ ಲಲಿತಕಲಾ ಅಕಾಡಮಿ ತನ್ನ ಸದಸ್ಯರಿಗಾಗಿ ಏರ್ಪಡಿಸಿದ ಕಲಾ ಶಿಬಿರ ಮತ್ತು ಸಾರ್ಕ ಸಮ್ಮೇಳನದಲ್ಲಿ ನಡೆದ ಕಲಾ ಶಿಬಿರದಲ್ಲಿ ಭಾಗವಹಿಸಿದ್ದಾರೆ. ಮತ್ತು ಹೊರರಾಜ್ಯಗಳಲ್ಲಿ ಸಹ ಪಾಲ್ಗೊಂಡು ನಾರಾಯಣಪ್ಪನವರು ಪಾಂಡಿಚೇರಿ ಹರಿಯಾಣ ರಾಜ್ಯದ ಸೂರಜಕುಂಡ, ರಾಜಸ್ಥಾನದ ಉದಯಪುರದ ಶಿಲ್ಪ ಗ್ರಾಮ, ಇಂದಿರಾಗಾಂಧಿ ಮಾನವ ಸಂಗ್ರಹಾಲಯ, ಭೂಪಾಲ, ಆಸ್ಸಾಂನ ಗೌಹಾಟಿ ಮತ್ತು ಬೆಂಗಳೂರು, ಉಡುಪಿಗಳಲ್ಲಿ ತಮ್ಮ ಚಿತ್ರಗಳನ್ನು ಪ್ರದರ್ಶಿಸಿದ್ದಾರೆ.

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಶ್ರೀಯುತರಿಗೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರಿಂದ ೧೯೮೭ನೆಯ ಸಾಲಿನ ರಾಜ್ಯ ಪ್ರಶಂಸನಾ ಪತ್ರವನ್ನು ನೀಡಿ ಗೌರವಿಸಿದೆ. ೧೯೮೬ರಲ್ಲಿ ಕರ್ನಾಟಕ ಲಲಿತಕಲಾ ಅಕಾಡಮಿ ಪ್ರಶಸ್ತಿ ಪಡೆದಿದ್ದಾರೆ. ೨೦೦೫ರಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಿಂದ ರಾಜ್ಯ ಪ್ರಶಸ್ತಿ ಇವರಿಗೆ ಸಂದಿದೆ.

ಮಂಗಳೂರಿನ ಮಹಾಲಸಾ ಚಿತ್ರಕಲಾ ಶಾಲೆ ಮತ್ತು ಮೈಸೂರಿನ ಶ್ರೀ ಕಲಾ ನಿಕೇತನ ಚಿತ್ರಕಲಾ ಶಾಲೆಯಲ್ಲಿ ಕಿನ್ನಾಳ ಕಲೆಯ ಕಾರ್ಯಾಗಾರದ ನಿರ್ದೇಶಕರಾಗಿ ಕಿನ್ನಾಳ ಕಲೆಯನ್ನು ರಚಿಸುವ ವಿಧಿ ವಿಧಾನ ಬಣ್ಣಗಳ ಬಳಕೆ, ಚಿತ್ರರಚಿಸುವ ವಿಧಾನಗಳನ್ನು ಕಲಾ ವಿಧ್ಯಾರ್ಥಿಗಳಿಗೆ ಕಲಿಸಿದ್ದಾರೆ. ಕಿನ್ನಾಳ ಕಲೆಯ ಸೌಂದರ್ಯವನ್ನು ಯುವಕಲಾವಿದರು ತಿಳಿದು ಮುಂದಿನ ಪೀಳಿಗೆಗೆ ಈ ಕಲೆಯನ್ನು ಮುಂದುವರೆಸಿದರೆ ಸಾಕು ಎನ್ನುತ್ತಾರೆ ನಾರಾಯಣಪ್ಪನವರು.

ಭಾಗ್ಯಮ್ಮ ಚಿತ್ರಗಾರ

ಹನಮಂತಪ್ಪ ಚಿತ್ರಗಾರ ಮಗಳಾಗಿ ಕಿನ್ನಾಳದಲ್ಲಿ ಜನಿಸಿದರು. ಭಾಗ್ಯಮ್ಮ ತನ್ನ ಬಾಲ್ಯದಿಂದಲೇ ಕಲೆಯಲ್ಲಿ ಆಸಕ್ತಿ ಮೂಡಿ ಅಂದಿನಿಂದ ಕಿನ್ನಾಳ ಕಲಾಕೃತಿಗಳ ರಚನೆಯಲ್ಲಿ ತೊಡಗಿರುವ ಭಾಗ್ಯಮ್ಮನವರಿಗೆ ೧೯೯೩ರಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಿಂದ ರಾಜ್ಯ ಪ್ರಶಸ್ತಿ, ೧೯೯೩ರಲ್ಲಿ ಭಾರತ ಸರಕಾರದ ವಸ್ತ್ರ ಮಂತ್ರಾಲಯ ಇವರಿಂದ ಮೆರಿಟ್ ಸರ್ಟಿಫಿಕೇಟ್ ಲಭಿಸಿದೆ.

ಭಾಗ್ಯಮ್ಮನವರು ಹಲವಾರು ಕಾರ್ಯಗಳಲ್ಲಿ ಭಾಗವಹಿಸಿದ್ದಾರೆ. ಅವುಗಳಲ್ಲಿ ೨೦೦೪ರಲ್ಲಿ ರಿಜಿನಲ್ ಡಿಸೈನ್ ಮತ್ತು ಟೆಕ್ನಿಕಲ್ ಸೆಂಟರ್‌ದಿಂದ ನಡೆದ ಕಿನ್ನಾಳ ಕಲಾಕೃತಿಗಳನ್ನು ರಚಿಸುವುದು ಕಾರ್ಯಾಗಾರದಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಕಾವೇರಿ ಎಂಪೋರಿಯಂನವರು ನಡೆಸಿದ ಕಾರ್ಯಗಾರದಲ್ಲಿ ಭಾಗವಹಿಸಿ ಕಲಾಕೃತಿಗಳನ್ನು ರಚಿಸಿದ್ದಾರೆ.

ಭಾಗ್ಯಮ್ಮನವರು ದಶಕಗಳ ಹಿಂದೆ ಸೆಗಣಿ ಗೊಂಬೆಗಳನ್ನು ತಯಾರಿಸುತ್ತಿದ್ದರು. ತಾಯಿ ಮಗು, ನಿಂತ ಗೊಂಬೆ, ಮುದಿ ಎತ್ತು, ಆಟಿಕೆ ಸಾಮಾನುಗಳು ಮುಂತಾದ ಕಲಾಕೃತಿಗಳು ಮಾರಾಟ ಮಾಡಲಿಕ್ಕೆ ೧೦-೧೨ ಕಿ.ಮೀ. ನಡೆದುಕೊಂಡು ಹೋಗಿ ಮಾರಾಟ ಮಾಡಿದರೆ ಕೇವಲ ೧೦-೧೫ ರೂ ಸಿಗುತ್ತಿತ್ತು. ಎಂದು ತಮ್ಮ ಹಿಂದಿನ ನೆನಪನ್ನು ಹೇಳುವ ಭಾಗ್ಯಮ್ಮನವರು ಕಾವೇರಿ ಎಂಪೋರಿಯಂನವರಿಗೆ ಬೇಕಾಗುವ ಮತ್ತು ಮಾರಾಟವಾಗುವ

ಕಿನ್ನಾಳ ಕಲೆಯ ಕಲಾವಿದೆಯರು





ಶ್ರೀಮತಿ ಚಂದ್ರಮ್ಮ ಚಿತ್ರಗಾರ



ಶ್ರೀಮತಿ ಹೇಮವ್ವ
ಚಿತ್ರಗಾರ





ಶ್ರೀಮತಿ ಸೀತಮ್ಮ ಚಿತ್ರಗಾರ



ಶ್ರೀಮತಿ ಭಾಗ್ಯಮ್ಮ ಚಿತ್ರಗಾರ



ಶ್ರೀಮತಿ ಭಾಗ್ಯಮ್ಮ ಚಿತ್ರಗಾರ ರಚಿಸಿದ 'ಕಾಮಧೇನು'

ಕಲಾಕೃತಿಗಳನ್ನು ರಚಿಸಲು ಪ್ರಾರಂಭಿಸಿದರು. ಅಂದಿನಿಂದ ಸಗಣಿಗೊಂಬೆಗಳನ್ನು ರಚಿಸುವುದನ್ನು ಬಿಟ್ಟು ಕಟ್ಟಿಗೆಯಲ್ಲಿ ಮೂರ್ತಿ ಗೊಂಬೆಗಳನ್ನು ರಚಿಸಲು ಪ್ರಾರಂಭಿಸಿದರು. ಕಾಮಧೇನು, ದಂಪತಿಗಳು, ನರ್ತನಗೊಂಬೆ, ಹನುಮಂತ, ಬೀಸುಕಲ್ಲು ಗೊಂಬೆ, ತಾಯಿ ಮಗು, ಸಿಂಹಗೊಂಬೆ, ಬಸವಣ್ಣ, ಮುಂತಾದ ಕಲಾಕೃತಿಗಳನ್ನು ರಚಿಸುವ ಭಾಗ್ಯಮ್ಮನವರಿಗೆ ಸರಕಾರದಿಂದ ೫೦೦ ರೂ ಮಾಶಾಸನ ದೊರೆಯುತ್ತಿದೆ.

ಹೇಮವ್ವ ಚಿತ್ರಗಾರ

ಚಂದ್ರಮ್ಮ ಚಿತ್ರಗಾರ ಮಗಳಾಗಿ ಹೇಮವ್ವ ಚಿತ್ರಗಾರ ಕಿನ್ನಾಳದಲ್ಲಿ ಜನಿಸಿದರು. ಬಾಲ್ಯದಿಂದಲೇ ಕಲಾಕೃತಿಗಳನ್ನು ರಚಿಸುವುದನ್ನು ತಮ್ಮ ತಾಯಿಯ ಮುಖಾಂತರ ಕಲಿತ ಹೇಮವ್ವನವರು, ಸಗಣಿ ಗೊಂಬೆಗಳನ್ನು ರಚಿಸುವಲ್ಲಿ ಸಿದ್ಧಹಸ್ತರು. ಕಿಸಗಾಲಗೊಂಬೆ, ಸಿಂಹಗೊಂಬೆ, ತಾಯಿಗೊಂಬೆ, ಬೀಸುಕಲ್ಲು, ಮಹಿಳೆ, ತೊಟ್ಟಿಲುಗೌರಿ, ಕೀಲುಗೌರಿ ಮುಂತಾದ ಕಲಾಕೃತಿಗಳನ್ನು ರಚಿಸಿ ಬನಶಂಕರಿ ಜಾತ್ರೆ, ಮೈಲಾರಲಿಂಗನ ಜಾತ್ರೆ, ಇಟಗಿ ಜಾತ್ರೆ, ಹುಲಿಗಿ, ಹಂಪೆ, ಅಂಬಾದೇವಿ ಜಾತ್ರೆ, ಗಂಗಾವತಿ ಮುಂತಾದ ಜಾತ್ರೆಗಳಿಗೆ ಹೋಗಿ ಕೇವಲ ೩/- ರೂ., ೫/-ರೂ. ಗಳಿಗೆ ಮಾರಾಟ ಮಾಡಿ ಬರುತ್ತಿದ್ದರು. ಇದರಿಂದ ಆರ್ಥಿಕ ಸ್ಥಿತಿ ಉತ್ತಮವಾಗಲಿಲ್ಲ. ಈಗ ಹೇಮವ್ವನವರು ಮಾರುಕಟ್ಟೆಯಲ್ಲಿ ಉತ್ತಮಬೆಲೆಯಲ್ಲಿ ಮಾರಾಟವಾಗುವ ಕಲಾಕೃತಿಗಳನ್ನು ರಚಿಸುತ್ತಾರೆ. ಸಗಣಿ, ಕಿಟ್ಟ, ಕಟ್ಟಿಗೆಗಳಿಂದ ಸುಂದರ ಕಲಾಕೃತಿಗಳನ್ನು ರಚಿಸುವಲ್ಲಿ ಹೇಮವ್ವನವರು ಪರಿಣಿತಿ ಹೊಂದಿದ್ದಾರೆ.

೨೦೦೧ ಮತ್ತು ೨೦೦೪ರಲ್ಲಿ ಕಿನ್ನಾಳದಲ್ಲಿ ನಡೆದ ಭಾರತ ಸರಕಾರದ ರೀಜನಲ್ ಡಿಸೈನ ಸೆಂಟರ್ ಮತ್ತು ಟೆಕ್ನಿಕಲ್ ಡೆವಲಪ್‌ಮೆಂಟ್ ಸೆಂಟರನವರು ನಡೆಸಿದ ಕಾರ್ಯಾಗಾರದಲ್ಲಿ ಭಾಗವಹಿಸಿ ಕಿನ್ನಾಳ ಕಲಾಕೃತಿಗಳನ್ನು ರಚಿಸಿದ್ದಾರೆ. ೧೯೮೭-೮೮ರಲ್ಲಿ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಕಿನ್ನಾಳದಲ್ಲಿ ನಡೆಸಿದ ಕಿನ್ನಾಳ ಕಲೆಯ ಕಾರ್ಯಾಗಾರದಲ್ಲಿ ೨೫ ಜನ ಮಹಿಳೆಯರಿಗೆ ಕುಶಲ ಕಲೆಯನ್ನು ಹೇಮವ್ವನವರು ಸಹಾಯಕ ಮಾಸ್ಟರ್ ಕ್ರಾಫ್ಟಮನ್ ಆಗಿ ತರಬೇತಿ ನೀಡಿದ್ದಾರೆ. ಹೇಮವ್ವನವರು ತಯಾರಿಸಿದ ಕಲಾಕೃತಿಗಳನ್ನು ಕಾವೇರಿ ಎಂಪೋರಿಯಂನವರು ಖರೀದಿಸುತ್ತಾರೆ. ಹೇಮವ್ವನವರಿಗೆ ರಾಜ್ಯ ಸರ್ಕಾರದಿಂದ ೫೦೦/- ರೂ. ಮಾಶಾಸನ ನೀಡುತ್ತಿದೆ.

ಸೀತಮ್ಮ ಚಿತ್ರಗಾರ

ಸೀತಮ್ಮನವರು ವಂಶ ಪಾರಂಪರಿಕವಾಗಿ ಬಂದ ಕಲೆಯನ್ನು ಮುಂದುವರೆಸುತ್ತಾ ಬರುತ್ತಿದ್ದಾರೆ. ಸೀತಮ್ಮನವರ ಗಂಡ ಗಂಗಪ್ಪ ಚಿತ್ರಗಾರರು ಕಾಮ-ರತಿ ಶಿಲ್ಪಗಳನ್ನು ತಯಾರಿಸುತ್ತಾರೆ. ಮಗ ಮಲ್ಲಪ್ಪ, ಸೊಸೆ ಮಂಜುಳಾ ಚಿತ್ರಗಾರ ಸಹ ಕಲಾಕೃತಿಗಳನ್ನು ರಚಿಸುತ್ತಾ ಇರುತ್ತಾರೆ. ವರ್ಷ ಪೂರ್ತಿ ಬಿಡುವಿಲ್ಲದೇ ಕಲಾಕೃತಿಗಳನ್ನು ರಚಿಸುವಲ್ಲಿ ನಿರತವಾಗಿರುವ ಸೀತಮ್ಮನವರು ವಿಶೇಷವಾಗಿ ಜಾತ್ರೆಯಲ್ಲಿ ಮಾರಾಟವಾಗುವ ಆಟಿಕೆ ಸಾಮಾನು. ಗೊಂಬೆಗಳನ್ನು ತಯಾರಿಸುತ್ತಾರೆ. ಸಗಣಿ ಗೊಂಬೆಗಳಾದ ತಾಯಿ ಮಗು, ಕಿಸಗಾಲ ಗೊಂಬೆ, ಬೀಸುಕಲ್ಲಿನ ಮಹಿಳೆ, ಆಟಿಕೆ ವಸ್ತುಗಳಾದ ಲಾರಿ, ಕಾರು, ಬಂಡಿ, ತೊಟ್ಟಿಲು ಗೌರಿ, ಶಿವ ಪಾರ್ವತಿ, ಕೀಲು ಗೌರಿ, ಕೌಂತಿ ಪಟ್ಟಿ ಕಲಾಕೃತಿಗಳನ್ನು ತಯಾರಿಸುತ್ತಾರೆ.

ಇವರು ಬಳಸುವ ಪರಿಕರಗಳಲ್ಲಿ ಸಗಣಿಯ ಪಾತ್ರ ಮಹತ್ವದ್ದು. ಹಾಗೆಯೇ ಕಿಟ್ಟ, ಸರಿ. ಬಟ್ಟೆ, ಕಟ್ಟಿಗೆ ಪುಡಿ, ಮತ್ತು ಪುಡಿ ವರ್ಣಗಳು. ಪುಡಿ ಬಣ್ಣಕ್ಕೆ ಮೀನು ಸರಿ ಮಿಶ್ರಣ ಮಾಡಿ ಬಣ್ಣಲೇಪನ ಮಾಡುತ್ತಾರೆ. ಹಳದಿ, ಗುಲಾಬಿ, ಹಸಿರು, ಬಣ್ಣಗಳನ್ನು ಕಲಾಕೃತಿಗಳಿಗೆ ಲೇಪನ ಮಾಡುತ್ತಾರೆ. ಬನಶಂಕರಿ, ಮೈಲಾರಲಿಂಗ, ಹಂಪಿ, ಹುಲಿಗಿ, ಗಂಗಾವತಿ, ಇಟಗಿ, ಮುಂತಾದ ಜಾತ್ರೆಗಳಿಗೆ ತಾವು ತಯಾರಿಸಿದ ಕಲಾಕೃತಿಗಳನ್ನು ೫/-೧೦ ರೂ.ಗಳಿಗೆ ಮಾರಾಟ ಮಾಡಿ ತಮ್ಮ ಜೀವನವನ್ನು ನಡೆಸುತ್ತಾ ಬಂದಿದ್ದಾರೆ. ಆರ್ಥಿಕವಾಗಿ ಕಷ್ಟದಲ್ಲಿದ್ದರೂ ವಂಶ ಪಾರಂಪರಿಕವಾಗಿ ಬಂದ ಕಲೆಯನ್ನು ಉಳಿಸಲು ಕಲಾಕೃತಿಗಳನ್ನು ರಚಿಸುತ್ತಾ ತಮ್ಮ ಜೀವನವನ್ನು ನಡೆಸುತ್ತಾ ಇದ್ದಾರೆ. ಗಂಗಪ್ಪನವರಿಗೆ ತಿಂಗಳಿಗೆ ೫೦೦/- ರೂ ಮಾಶಾಸನ ಸರ್ಕಾರದಿಂದ ಬರುತ್ತಿರುವುದು ಜೀವನಕ್ಕೆ ಸ್ವಲ್ಪ ಆಸರೆಯಾಗಿದೆ. ಎನ್ನುತ್ತಾರೆ ಸೀತಮ್ಮನವರು.

ಶೇಷಪ್ಪ ಚಿತ್ರಗಾರ

ಹನುಮಂತಪ್ಪ ಚಿತ್ರಗಾರನ ಮಗನಾಗಿ ೫-೪-೧೯೪೪ರಲ್ಲಿ ಜನಿಸಿದ ಶೇಷಪ್ಪನವರು ತಮ್ಮ ಕಸುಬಾದ ಬಡಿಗೆತನವನ್ನು ಕಲಿತು ತಾವು ಸಹ ಬಡಿಗತನವನ್ನು ಮುಂದುವರೆಸುತ್ತಾ ಬಂದರು. ಆದರೆ ಕಿನ್ನಾಳ ಗ್ರಾಮದಲ್ಲಿ ಕಲೆಯನ್ನು ಮುಂದುವರೆಸಲು ಹಲವಾರು ಕಾರ್ಯಕ್ರಮ ಕಾರ್ಯಾಗಾರಗಳನ್ನು ಸರ್ಕಾದವರು ಏರ್ಪಡಿಸುತ್ತಿದ್ದರು. ೧-೧೦-೧೯೮೦ರಿಂದ ೩೧-೩-೧೯೮೧ ರಿಂದ ೫ ತಿಂಗಳವರೆಗೆ ನಡೆದ ಕಾರ್ಯಾಗಾರದಲ್ಲಿ ಶೇಷಪ್ಪನವರು ಭಾಗವಹಿಸಿದರು. ಕಿನ್ನಾಳ ಕಲೆಯನ್ನು ರಚಿಸುವುದನ್ನು ಕಾರ್ಯಾಗಾರ ಮುಖ್ಯಸ್ಥರಾದ ಶ್ರೀ ರಾಮಚಂದ್ರಪ್ಪ ಚಿತ್ರಗಾರರವರಿಂದ ಕಲಿತರು. ಈ ಕಾರ್ಯಾಗಾರವನ್ನು ರಾಜ್ಯಸರಕಾರದ ಡಿಪಾರ್ಟಮೆಂಟ್ ಆಫ್ ಇಂಡಸ್ಟ್ರೀಸ್ ಮತ್ತು ಕಾಮರ್ಸ ಅವರು ಏರ್ಪಡಿಸಿದ್ದರು. ಈ ಕಾರ್ಯಾಗಾರದಲ್ಲಿ ಪರಿಣಿತಿ ಪಡೆದ ಮೇಲೆ ಕಿನ್ನಾಳ ಕಲಾಕೃತಿಗಳನ್ನು ರಚಿಸುತ್ತ ಜೀವನ ಸಾಗಿಸುತ್ತಿದ್ದಾರೆ.

ಶೇಷಪ್ಪನವರು ವಿಶೇಷವಾಗಿ ಹಣ್ಣು ಹಂಪಲು, ಮತ್ತು ತರಕಾರಿ ತಟ್ಟೆ ತಯಾರಿಸುವಲ್ಲಿ ಪರಿಣಿತಿ ಹೊಂದಿದ್ದಾರೆ. ಹಣ್ಣುಗಳಾದ ಪೇರಲ, ದ್ರಾಕ್ಷಿ, ಸೀತಾಫಲ, ದಾಳಿಂಬೆ, ಸೇಬು, ಲಿಂಬೆ, ಮೋಸಂಬಿ, ಮಾವು, ಮತ್ತು ತರಕಾರಿಗಳಾದ ಹೀರೆಕಾಯಿ, ಮೂಲಂಗಿ ಹಾಗಲಕಾಯಿ, ಗಜ್ಜರಿ ಮುಂತಾದವುಗಳನ್ನು ನೈಜರೂಪವೆನ್ನುವಷ್ಟು ಸುಂದರವಾಗಿ ರಚಿಸುತ್ತಾರೆ. ಭಾರತ ಸರಕಾರದ ಮಿನಿಸ್ಟ್ರಿ ಆಫ್ ಟೆಕ್ಸಟೈಲ್ ಪ್ರಾದೇಶಿಕ ವಿನ್ಯಾಸ ಹಾಗೂ ತಾಂತ್ರಿಕ ಅಭಿವೃದ್ಧಿ ಕೇಂದ್ರದ ಅಡಿಯಲ್ಲಿ ೨೦-೧೦-೧೯೯೯ರಿಂದ ೩೦-೧೦-೧೯೯೯ರವರೆಗೆ ನಡೆದ ಕಾರ್ಯಾಗಾರದಲ್ಲಿ ಭಾಗವಹಿಸಿದರು. ಪ್ರಾದೇಶಿಕ ವಿನ್ಯಾಸ ಹಾಗೂ ತಾಂತ್ರಿಕ ಅಭಿವೃದ್ಧಿ ಕೇಂದ್ರದಡಿಯಲ್ಲಿ ೨೦೦೪ರಲ್ಲಿ ನಡೆದ ಕಿನ್ನಾಳ ಕಲಾ ಕಾರ್ಯಾಗಾರದಲ್ಲಿ ಭಾಗವಹಿಸಿದ್ದಾರೆ. ಶೇಷಪ್ಪನವರು ಹಣ್ಣು, ತರಕಾರಿ, ವಸ್ತುಗಳನ್ನು ರಚಿಸಲಿಕ್ಕೆ ನುಗ್ಗೆ ಕಟ್ಟಿಗೆಯನ್ನು ಉಪಯೋಗಿಸುತ್ತಾರೆ. ಈ ಕಟ್ಟಿಗೆ ಅತೀ ಹಗುರವಾಗಿ ಇರುತ್ತದೆ.

ಶೇಷಪ್ಪನವರ ಹೆಂಡತಿಯವರು ಲಕ್ಷ್ಮೀ ಬಾಯಿ ಸಹ ಕಲಾಕೃತಿಗಳ ರಚನೆಯಲ್ಲಿ ಸಹಾಯ ಮಾಡುತ್ತಾರೆ. ಮನೆತುಂಬ ಹಣ್ಣು ಹಂಪಲು ಮತ್ತು ತರಕಾರಿ ತಟ್ಟೆಗಳಿಂದ ತುಂಬಿರುವುದು ಅವರ ಕೆಲಸಕ್ಕೆ ಸಾಕ್ಷಿಯಾಗಿದೆ. ಕರ್ನಾಟಕ ಹ್ಯಾಂಡಿ ಕ್ರಾಫ್ಟ್ ಆರ್ಟಿಸನ್ಸ ವೆಲ್ಫೇರ್ ಅಸೋಸಿಯೇಷನ್‌ವರು ೨೦೦೫ರಲ್ಲಿ ನಡೆಸಿದ ಕರಕುಶಲ ಕಲಾಕೃತಿಗಳ ಪ್ರದರ್ಶನದಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ೨೦೦೫ರಲ್ಲಿ ಬೆಂಗಳೂರು ಅರಮನೆ ಆವರಣದಲ್ಲಿ ನಡೆದ ಫಸ್ಟ್ ಎವರ್ ಸ್ಟೇಟ್ ಲೇವಲ್ ಹ್ಯಾಂಡಿಕ್ರಾಪ್ಟ ಪ್ರದರ್ಶನದಲ್ಲಿ ಸಹ ಭಾಗವಹಿಸಿ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಸರಳ ಸ್ವಭಾವದ ವ್ಯಕ್ತಿಯಾಗಿರುವ ಶೇಷಪ್ಪನವರು ತಮ್ಮ ಕಲಾಕೃತಿಗಳನ್ನು ಕಾವೇರಿ ಎಂಪೋರಿಯಂನವರಿಗೆ ಮಾರಾಟ ಮಡುತ್ತಾರೆ.

ವರ್ತುಳ ಆಯತಾಕಾರದ ತಟ್ಟೆಯಲ್ಲಿ ಹಣ್ಣುಗಳನ್ನು ಜೋಡಿಸುತ್ತಾರೆ. ವಿವಿಧ ಅಳತೆಯ ಅಂದರೆ ಸಣ್ಣ ತಟ್ಟೆ ದೊಡ್ಡ ತಟ್ಟೆಗಳಲ್ಲಿ ಹಣ್ಣು ಅಥವಾ ತರಕಾರಿಗಳನ್ನು ಸರಿಯಾಗಿ ಜೋಡಿಸುತ್ತಾರೆ. ರಚಿಸಿದ ಹಣ್ಣು ಹಂಪಲುಗಳಿಗೆ ಎನಾಮೆಲ್ ಬಣ್ಣಗಳನ್ನು ಲೇಪಿಸುತ್ತಾರೆ.

ಧರ್ಮಣ್ಣ ಅಂಬಣ್ಣ ಚಿತ್ರಗಾರ

೧೯೪೪ರಲ್ಲಿ ರಾಜ್ಯ ಪ್ರಶಸ್ತಿ ವಿಜೇತ ಅಂಬಣ್ಣ ಚಿತ್ರಗಾರರ ಮಗನಾಗಿ ಜನಿಸಿದ ಧರ್ಮಣ್ಣ ಚಿತ್ರಗಾರ ತಮ್ಮ ವಂಶಪಾರಂಪರಿಕವಾಗಿ ಬಂದ ಕಿನ್ನಾಳ ಕಲೆಯನ್ನು ಮುಂದುವರೆಸುತ್ತಾ ಬಂದಿದ್ದಾರೆ. ಧರ್ಮಣ್ಣನವರ ಹೆಂಡತಿ ನೀಲಮ್ಮ, ಮಗಳು ಇಂದುಮತಿ, ಮಗ ರಾಮು ಮತ್ತು ವೆಂಕಣ್ಣ ಕಲಾಕೃತಿಗಳನ್ನು ರಚನೆಯಲ್ಲಿ ನೆರವಾಗುತ್ತಾರೆ. ಧರ್ಮಣ್ಣನವರು ವಿಶೇಷವಾಗಿ ಗ್ರಾಮದೇವತೆಗಳನ್ನು ತಯಾರಿಸುತ್ತಾರೆ. ೧೦ರಿಂದ ೧೨ ಅಡಿ ಎತ್ತರವಿರುವ ದೊಡ್ಡ ದೊಡ್ಡ ಗ್ರಾಮದೇವತೆಗಳನ್ನು ರಚಿಸುತ್ತಾರೆ. ದ್ಯಾಮವ್ವನಿಗೆ ೧೦ ರಿಂದ ೧೨ ಕೈಗಳು ಇರುತ್ತವೆ. ಕೈಗಳು ಬಿಡಿಬಿಡಿಯಾಗಿ ರಚಿಸಿ ಆಮೇಲೆ ಕೀಲಿನಿಂದ ಜೋಡಿಸುತ್ತಾರೆ. ದೊಡ್ಡ ಮೂರ್ತಿಗಳು ಇರುವುದರಿಂದ ಹಗುರವಾದ ಕಟ್ಟಿಗೆಯಲ್ಲಿ ರಚಿಸುತ್ತಾರೆ. ರಕ್ತಗೂನಿ, ಹಿರೇಬೇವು, ಹತ್ತಿ, ಮಾವು, ಮುಂತಾದ ಬಗೆಯ ಕಟ್ಟಿಗೆಗಳನ್ನು ಇವರು ಬಳಸುತ್ತಾರೆ. ಗ್ರಾಮದೇವತೆಗಳಾದ ದ್ಯಾಮವ್ವ, ದುರ್ಗಮ್ಮ ಮತ್ತು ತೇರಿಗೆ ಅಲಂಕಾರಕ್ಕಾಗಿ ಕಟ್ಟುವ ಗೊಂಬೆಗಳಾದ ದ್ವಾರಪಾಲಕ, ಹೆಣ್ಣುಗೊಂಬೆ, ಸಿಂಹ, ಅಲ್ಲದೆ, ಶಿವಪಾರ್ವತಿ, ಗಣಪ, ಕಾಮರತಿ, ಕೀಲುಗೌರಿ, ಮಂಟಪಗೌರಿ, ಪಲ್ಲಕ್ಕಿ ಛತ್ರಿ, ಮತ್ತು ಆಟಿಕೆ ಸಾಮಾನುಗಳನ್ನು ರಚಿಸುತ್ತಾರೆ.

ಧರ್ಮಣ್ಣನವರು ಹಳೆ ತೇರಿನ ಗೊಂಬೆಗಳಿಗೆ ಸಹ ಬಣ್ಣ ಲೇಪನಮಾಡಿ ಕೊಡುತ್ತಾರೆ. ನೀಲಮ್ಮ ಚಿತ್ರಗಾರ ಪಲ್ಲಕ್ಕಿ, ಛತ್ರ, ಮುಂತಾದ ಕಲಾಕೃತಿಗಳಿಗೆ ಬಣ್ಣ ಲೇಪಿಸುತ್ತಾರೆ. ಇವರು ರಚಿಸಿದ ಕಲಾಕೃತಿಗಳನ್ನು ಕಾವೇರಿ ಎಂಪೋರಿಯಂನವರಿಗೆ ಮಾರಾಟ ಮಾಡುತ್ತಾರೆ. ಇವರು ರಚಿಸಿದ ಗ್ರಾಮದೇವತೆಗಳು ಕೊಪ್ಪಳ, ಬಳ್ಳಾರಿ, ರಾಯಚೂರು, ಧಾರವಾಡ, ಜಿಲ್ಲೆಗಳಲ್ಲಿವೆ. ಇವರು ಗ್ರಾಮದೇವತೆಗಳ ಮೂರ್ತಿ ರಚಿಸುವಲ್ಲಿ ಸಿದ್ಧರು.

ಪ್ರೋತ್ಸಾಹ ಮತ್ತು ಮಾರಾಟ

ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದ ಹಲವು ಕಾಯಿದೆ ಕಟ್ಟಳೆ ನಿರ್ಬಂಧಗಳಿಂದ ಮತ್ತು ಆಧುನಿಕ ತಂತ್ರಜ್ಞಾನ ಪ್ರಭಾವದಿಂದ ಸಾಂಪ್ರದಾಯಿಕ ಕರಕುಶಲ ಕಲೆಗಳ ಮೇಲೆ ಭಾರಿ ಪೆಟ್ಟು ಬಿದ್ದಿತು. ಇದರಿಂದ ಕುಶಲಕರ್ಮಿಗಳ ತತ್ತರಿಸಿ ಹೋದರು. ೧೮ ಮತ್ತು ೧೯ ಶತಮಾನಗಳಲ್ಲಿ ನಗರಕೇಂದ್ರಿತ ಕೈಗಾರಿಕೆಗಳು ಯಂತ್ರಗಳಿಂದ ಉತ್ಪಾದಿಸಿದ ವಸ್ತುಗಳು ಹಳ್ಳಿಗಳ ಕಡೆಗೆ ಹರಿಯತೊಡಗಿದಂತೆ ಆ ಕ್ಷಣದಿಂದಲೇ ಹಳ್ಳಿಗಳಲ್ಲಿದ್ದು ಸಾಂಪ್ರದಾಯಿಕ ಕುಶಲಕರ್ಮಿಗಳ ಅದರ ಗಾಢ ಪರಿಣಾಮಗಳನ್ನು ಅನುಭವಿಸಬೇಕಾಯಿತು. ಕುಶಲ ಕರ್ಮಿಗಳು ತಮ್ಮ ಕೈಗಳಿಂದ ಸಿದ್ಧಪಡಿಸಿ ಮಾರಾಟ ಮಾಡುವ ವಸ್ತುಗಳಿಗಿಂತ ಕೈಗಾರಿಕೆಗಳು ಉತ್ಪಾದಿಸುವ ವಸ್ತುಗಳು ಬೆಲೆಗಳು ಕಡಿಮೆ ಆದರೆ ಈಗ ಕೈಗಾರಿಗೆಗಳು ಉತ್ಪಾದಿಸುವ ವಸ್ತುಗಳ ಬೆಲೆಗಳಿಗಿಂತ ಕುಶಲಕರ್ಮಿಗಳು ತಯಾರಿಸುವ ವಸ್ತುಗಳ ಬೆಲೆಗಳೇ ಜಾಸ್ತಿಯಾಗಿವೆ. ಕೈಗಾರಿಕೆಗಳು ಉತ್ಪಾದಿಸುವ ವಸ್ತುಗಳಿಗಿಂತ ಕುಶಲಕರ್ಮಿಗಳು ತಯಾರಿಸುವ ವಸ್ತುಗಳ ಬೆಲೆ ಅಧಿಕವಾದರೂ ಗ್ರಾಹಕರು ಕೊಳ್ಳುತ್ತಾರೆ. ಇದಕ್ಕೆ ಬಹು ಮುಖ್ಯ ಕಾರಣ ಕರಕುಶಲ ಕಲೆಗಳಲ್ಲಿ ವ್ಯಕ್ತವಾಗುವ ಸೌಂದರ್ಯ, ವಿನ್ಯಾಸ, ಬಣ್ಣ, ಕೌಶಲ್ಯ, ಮತ್ತು ಜನಪದ ಮತ್ತು ಸಾಂಪ್ರದಾಯಿಕ ಪ್ರಜ್ಞೆ ಮುಂತಾದ ಮೌಲ್ಯಗಳು ಹಾಗೂ ಗುಣಗಳು.[೩]

ಕರಕುಶಲ ಕಲೆಗೆ ವ್ಯಾಪಕವಾಗಿ ವ್ಯವಸ್ಥಿತವಾಗಿ ಬೆಲ ಬಂದದ್ದು ಸ್ವಾತಂತ್ರ್ಯ ನಂತರವೇ. ೧೯೫೨ರಲ್ಲಿ ಕರಕುಶಲ ಕೈಗಾರಿಕೆಗಳ ಸಮಿತಿಗೆ ಕಮಲಾದೇವಿ ಚಟ್ಟೋಪಾಧ್ಯಾಯ ಅಧ್ಯಕ್ಷರಾಗಿ ಬಂದರು. ಅವರು ಕಲಾಕೃತಿಗಳನ್ನು ಗುರುತಿಸಿದಷ್ಟೇ ಅಲ್ಲ ಕಲಾವಿದರಿಗೂ ಸ್ಥಾನಮಾನ ಗೌರವಗಳನ್ನು ತಂದುಕೊಡಲು ಶ್ರಮಿಸಿದರು. ಇದರಿಂದ ದೇಶಕ್ಕೂ ಕಲಾವಿದರಿಗೂ ಲಾಭವಾಯಿತು.[೪]

ಕಲಾವಿದರ ಕಲೆಯನ್ನು ಅರಸುತ್ತಾ ಕಮಲಾದೇವಿ ಅವರು ರಾಷ್ಟ್ರದ ಮೂಲೆ ಮೂಲೆಗಳನ್ನೆಲ್ಲಾ ಶೋಧಿಸಿದರು. ಅಜ್ಞಾನವಾಗಿ ಅಡಗಿದ್ದ ಕಲಾ ಸಂಪತ್ತನ್ನು ಬೆಳಕಿಗೆ ತಂದರು. ಭಾರತೀಯ ಕಲಾಕೃತಿಗಳ ತಂತ್ರಗಾರಿಕೆ, ರಚನೆ, ಕಲಾತ್ಮಕತೆ ಇತ್ಯಾದಿಗಳನ್ನು ಕುರಿತು ದೇಶ ವಿದೇಶಗಳಲ್ಲಿ ಉಪನ್ಯಾಸ ನೀಡಿದರು. ಕಾರ್ಯಾಗಾರಗಳನ್ನು ರೂಪಿಸಿ, ಕಲಾವಿದರಿಂದ ಪ್ರಾತ್ಯಕ್ಷಿಕೆಗಳನ್ನು ಕೊಡಿಸಿದರು. ಕಲಾವಿದರು ನೆಲಸಿದ್ದ ಪ್ರದೇಶ ಎಂತಹ ಗುಡ್ಡಗಾಡಗಿರಲಿ, ಹೊಲಸು ತುಂಬಿದ ಪ್ರದೇಶವಾಗಿರಲಿ. ಅವರು ಅಲ್ಲಿಗೆ ಹೋಗುತ್ತಿದ್ದರು. ಕಲೆಯ ಬಗ್ಗೆ ಆಳವಾಗಿ ತಿಳಿಯುತ್ತಿದ್ದರು. ಕಲಾವಿದರ ಕೌಟುಂಬಿಕ ಹಿನ್ನೆಲೆ ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿದು ಸಾಂತ್ವಾನ ಹೇಳಿ ಧೈರ್ಯ ಸ್ವಾಭಿಮಾನ ಹಾಗೂ ಕೃತಿಗಳ ಬಗ್ಗೆ ಹೆಮ್ಮೆ ಪಡುತ್ತಿದ್ದರು. ಕಲೆಗೆ ಕಲಾವಿದರಿಗೆ ಗೌರವ ತಂದು ಕೊಟ್ಟರು. ಕಲಾಕೃತಿ ರಚನೆಯಿಂದಲೂ ಜೀವನ ಸಾಗಿಸಬಹುದೆಂದು ತೋರಿಸಿಕೊಟ್ಟರು.[೫]

ಕಮಲಾದೇವಿ ಅವರ ಪ್ರಯತ್ನದಿಂದಾಗಿ ಕೇಂದ್ರ ಹಾಗೂ ಹಲವಾರು ರಾಜ್ಯಗಳಲ್ಲಿ ಕ್ರಾಫ್ಟ್ ಹಾಗೂ ಡಿಸೈನ್ ಸೆಂಟರ್ (ಕರಕುಶಲ ಕಲಾ ಕೇಂದ್ರಗಳು) ಆರಂಭವಾದವು. ಇನ್ನಿಲ್ಲದಂತೆ ನಶಿಸಿ ಹೋಗುತ್ತಿದ್ದ ಭಾರತೀಯ ಕರಕುಶಲ ಕಲೆಗೆ ಕಮಲಾದೇವಿ ಅವರು ಪುನರುಜ್ಜೀವನ ನೀಡಿದರು. ೧೯೬೨ರಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಕುಗ್ರಾಮವಾದ ಕಿನ್ನಾಳಕ್ಕೆ ಎತ್ತಿನ ಬಂಡಿಯಲ್ಲಿ ಕುಳಿತು ಭೇಟಿ ನೀಡಿದ್ದರು. ಕಮಲಾದೇವಿಯವರು ಆಗಿನ ಕಾಲದ ಹಿರಿಯ ಕಲಾವಿದರು ತಯಾರಿಸಿದ ಕಿನ್ನಾಳ ಕಲಾಕೃತಿಗಳನ್ನು ನೋಡಿ ಈ ಕಲಾವಿದರ ಪ್ರತಿಭೆಗೆ ಮಾರು ಹೋಗುವುದರೊಂದಿಗೆ ಅವರ ಹೀನಾಯ ಸ್ಥಿತಿ ಕಂಡು ಮರುಗಿದರು.

ಕಿನ್ನಾಳ ಕಲೆ ಅಳಿವಿನಂಚಿನಲ್ಲಿ ತಲುಪಿರುವುದನ್ನು ಕಂಡು ಕಲೆಯ ಪುನರುತ್ಥಾನಕ್ಕೆ ಶ್ರಮಿಸಲು ಅಖಿಲಭಾರತ ಕರಕುಶಲ ಮಂಡಳಿಯು ಕಿನ್ನಾಳ ಕಲಾಕೃತಿಗಳನ್ನು ಖರೀದಿಸಿತು. ಶ್ರೀಮತಿ ಕಮಲಾದೇವಿ

೦೩. ಡಾ.ಕರೀಗೌಡ ಬೀಚನಹಳ್ಳಿ : ಕರಕುಶಲ ಕಲೆಗಳು, ಪುಟ ೪೮
೦೪. -ಅದೇ- ಪುಟ ೩೨
೦೫. -ಅದೇ- ಪುಟ ೩೨

ಅವರು ವಹಿಸಿದ ಆಸಕ್ತಿಯ ಪರಿಣಾಮವಾಗಿಯೇ ಕಿನ್ನಾಳ ಕಲಾಕೃತಿಗಳು ನಮೂನೆಗಳನ್ನು ಸಂಗ್ರಹಿಸುವ, ಕಲಾಕಾರರಿಗೆ ತಾಂತ್ರಿಕ ಮಾರ್ಗದರ್ಶನ ನೀಡುವುದು, ಕಚ್ಚಾ ಸಾಮಗ್ರಿಗಳು ಹಾಗೂ ಸಲಕರಣೆಗಳನ್ನು ಒದಗಿಸುವುದರ ಮೂಲಕ ಹೀಗೆ ನಾನಾ ವಿಧದಲ್ಲಿ ಅಖಿಲ ಭಾರತ ಕರಕುಶಲ ಅಭಿವೃದ್ಧಿ ಮಂಡಳಿ ಕಿನ್ನಾಳ ಕಲೆಯ ಪುನರುತ್ಥಾನಕ್ಕೆ ನೆರವಾಗುತ್ತಿದೆ.[೬]

೧೯೬೫ರಲ್ಲಿ ಬೆಂಗಳೂರಿನ ವಿಶ್ವೇಶ್ವರಯ್ಯ ಮ್ಯೂಸಿಯಂನಲ್ಲಿ ಕಲಾ ಪ್ರದರ್ಶನ ಏರ್ಪಡಿಸಿದರು. ನಂತರ ದೆಹಲಿಯಲ್ಲಿಯೂ ಕೂಡ ಕಿನ್ನಾಳ ಕಲಾಕೃತಿಗಳ ಪ್ರದರ್ಶನ ಮಾಡಿಸಿ, ಈ ಕಲೆಯ ಪರಿಚಯವನ್ನು ನಾಡಿನ ಹಾಗೂ ದೇಶದ ಜನತೆಗೆ ಮಾಡಿಸಿದ್ದು ಅಲ್ಲದೇ, ಕರ್ನಾಟಕದಲ್ಲಿಯೇ ಕರಕುಶಲ ಅಭಿವೃದ್ಧಿ ನಿಗಮದ ಮುಖಾಂತರ ಈ ಕಲಾಕೃತಿಗಳನ್ನು ಖರೀದಿಸುವ ಮತ್ತು ಕಲಾಕಾರರಿಗೆ ಪ್ರೋತ್ಸಾಹಿಸುವ ವ್ಯವಸ್ಥೆಯನ್ನು ಮಾಡಿದರು. ಕರ್ನಾಟಕ ಕಾವೇರಿ ನಿಗಮವು ಕಿನ್ನಾಳ ಕಲಾವಿದರಿಗೋಸ್ಕರ ಒಂದು ಕಾರ್ಯಾಗಾರವನ್ನು ಕಟ್ಟಿಸಿದ್ದು ಅಲ್ಲಿ ನುರಿತ ಕಲಾವಿದರುಗಳಿಂದ ಆಗಾಗ ಈ ಕಲೆಯ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸುತ್ತಿದೆ.

"ದಿ ಹ್ಯಾಂಡಿ ಕ್ರಾಫ್ಟ್ ಸರ್ವೇ ಮೋನೋಗ್ರಾಫ್‌ನ ೧೯೬೧ರ ವರದಿ" ಮಾಡಿರುವ ಉಲ್ಲೇಖ ವರದಿ ಹೀಗೆ ಹೇಳುತ್ತಿದೆ. ಉದ್ಯಮಕ್ಕೆ ಭವಿಷ್ಯವಿಲ್ಲ, ಪ್ರೋತ್ಸಾಹವಿಲ್ಲ, ಹಣವಿಲ್ಲ, ಹೊಟ್ಟೆಗಿಲ್ಲ ಎಂಬಂತಹ ಸ್ಥಿತಿಯಲ್ಲಿಯೂ ಈ (ಕಿನ್ನಾಳದ) ಕಲೆಯನ್ನು ತೊಡಗಿಸಿಕೊಂಡಿರುವ ಕಲಾವಿದರ ಆಸಕ್ತಿ ಅತ್ಯಂತ ಆಳವಾದುದು. ಅನಾದೃಶ್ಯವಾದುದು. ಪಾರಂಪರಿಕವಾಗಿ ಬಂದ ಕಲೆಗೆ ಅವರು ಕೊಡುತ್ತಿರುವ ಗೌರವೂ ಅನನ್ಯವಾದುದು. ಹೀಗಿರುವ ಪರಿಸ್ಥಿತಿಯಲ್ಲಿ ಕಲಾವಿದರ ಜೀವನ ಮಟ್ಟ ಸುಧಾರಣೆಯಾಗದು. ಪ್ಲಾಸ್ಟಿಕ ಬೊಂಬೆಗಳ ಈ ಯುಗದಲ್ಲಿ ಥಳುಕು ಬಳಕೆ ಭವಿಷ್ಯವಾಗಿರುವ ಪರಿಸ್ಥಿತಿಯಲ್ಲಿ ಈ ಗುಡಿ ಕೈಗಾರಿಕೆ ಕಷ್ಟದ ದಿನಗಳನ್ನು ಎದುರಿಸಬೇಕಾಗಿ ಬಂದಿದೆ. ಆದರೆ ಈ ವಸ್ತುಗಳು ವೈವಿಧ್ಯ, ಅವುಗಳ ಚಿತ್ತಾರ, ವರ್ಣವಿನ್ಯಾಸ ದಶಕಗಳ ಕಾಲ ಮಾಸದೇ ಉಳಿಯುವ ಬಣ್ಣದ ಮೋಡಿ ಅನನ್ಯ. ಈ ಹಿನ್ನೆಲೆಯಲ್ಲಿ ವೈಜ್ಞಾನಿಕ ದೃಷ್ಟಿಕೋನದಿಂದ ಈ ಕಲೆಯನ್ನು ಉಳಿಸಿ ಬೆಳೆಸುವ ಕೆಲಸವಾಗಬೇಕು. ಜೊತೆಗೆ ಕಲಾವಿದರಲ್ಲಿ ಆತ್ಮ ವಿಶ್ವಾಸ, ಬದುಕಿನಲ್ಲಿ ಭರವಸೆ ಮೂಡಿಸಬೇಕು. ಕರಕುಶಲ ತಜ್ಞರು ಇದಕ್ಕಾಗಿ ಗಂಭೀರ ಮತ್ತು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಕಲಾವಿದರಿಗೆ ಅವರು ನಂಬಿದ ಕಲೆ ಅನ್ನ ಕೊಡುತ್ತದೆ ಎನ್ನುವುದು ಖಾತ್ರಿಯಾದಾಗ ಅದಕ್ಕೆ ಮುನಶ್ಚೇತನ ಬಂದೀತು." ಈ ವರದಿ ಸಂಬಂಧಿಸಿದ ಇಲಾಖೆಯ ಕಡತಕ್ಕೆ ಸೇರಿ ಈಗ ನಾಲ್ಕುದಶಕಗಳು ಸಂದಿ ಹೋಗಿವೆ.

ಕಿನ್ನಾಳ ಕಳಾವಿದರಿಗೆ ನೆರವಾಗಲೆಂದು ಕಮಲಾದೇವಿಯವರು ಹುಟ್ಟಿಸಿದ ಡಚ್ ಸರಕಾರದ ನೆರವಿನ ಯೋಜನೆಯೊಂದು ಅಖಿಲ ಭಾರತ ಕರಕುಶಲ ಮಂಡಲಿ ೧೯೫೮-೫೯ರಲ್ಲಿ ಮಂಜೂರಾತಿ ನೀಡಿತ್ತು. ಇದರ ಮುಖ್ಯ ಉದ್ದೇಶ ಕಲಾವಿದರಿಗೆ ವೈವಿಧ್ಯಮಯವಾದ ತರಬೇತಿಯನ್ನು ನೀಡುವುದಾಗಿತ್ತು. ಆದರೆ ಈ ಯೋಜನೆ ಜಾರಿಗೆ ಬರಲಿಲ್ಲ. ಈ ಕಲಾವಿದರ ಏಳಿಗೆಗೆ ಇನ್ನೊಂದು ಯತ್ನವಾಗಿ ೧೯೫೮ರಲ್ಲಿ ಚಿತ್ರಗಾರ ಕೋ ಆಪ್‌ರೇಟಿವ್ ಸೊಸಾಯಿಟಿಯೊಂದು ೨೯ ಸದಸ್ಯರೊಂದಿಗೆ ಅಸ್ತಿತ್ವಕ್ಕೆ ಬಂದಿತು. ಇದಕ್ಕೆ ಅಂದಿನ ಮೈಸೂರು ಸರಕಾರ ೬೮೦೦/- ಸಾಲ ಹಾಗೂ ೭೩೦೦/-ರೂಪಾಯಿಗಳನ್ನು ನೆರವನ್ನು ನೀಡಿತು. ಕರಕುಶಲ ಮಂಡಲಿಯು ತುಸು ನೆರವನ್ನು ನೀಡಿತು.

ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಿಂದ ಕಿನ್ನಾಳ ಕಲಾವಿದರಿಗಾಗಿ ೬೦ ಮನೆಗಳನ್ನು ಕಟ್ಟಿಸಿಕೊಡಲಾಗಿದೆ. ಮತ್ತು ಹಿರಿಯ ಕಲಾವಿದರಿಗೆ ಸರಕಾರದಿಂದ ತಿಂಗಳಿಗೆ ೫೦೦/- ರೂ. ಮಾಶಾಸನ ಸಿಗುತ್ತಿದೆ. ರಾಷ್ಟ್ರೀಯ ಕರಕುಶಲ ಹಾಗೂ ಕೈಮಗ್ಗ ವಸ್ತು ಪ್ರದರ್ಶನಾಲಯ ೧೯೫೬ರಲ್ಲಿ ದೆಹಲಿಯಲ್ಲಿ ಅಖಿಲ ಭಾರತ ಕರಕುಶಲ ನಿಗಮದಿಂದ ಆರಂಭವಾಯಿತು. ಇದು ಕೇವಲ ಸಂಗ್ರಹ, ನಕಲು ಮಾಡುವಿಕೆ, ಪ್ರದರ್ಶನ ಇತ್ಯಾದಿಗಳಿಗಿಂತ ಪರಂಪರಾನುಗತವಾಗಿ ಬಂದಿದ್ದ ಕೃತಿ ನಿರ್ಮಾಣ ಕಾರ್ಯವು ಮುಂದುವರೆಯುವ ಕೊಂಡಿಯಂತೆ ರೂಪಗೊಳ್ಳಬೇಕೆಂಬ ಆಶಯವುಳ್ಳದ್ದಾಗಿತ್ತು.

ಗ್ರಾಮೀಣ ಪ್ರದೇಶದಿಂದ ಕಲಾವಿದರನ್ನು ಆಹ್ವಾನಿಸಿ ನುರಿತ ಹಿರಿಯ ಕಲಾವಿದರಿಂದ ಕ್ರಮಬದ್ಧ ಅಭ್ಯಾಸ ನೀಡಿ ಅಥವಾ ಕಾರ್ಯಾಗಾರ ಏರ್ಪಡಿಸಿ, ಮತ್ತೆ ತಮ್ಮ ಪ್ರದೇಶದಲ್ಲಿ ಕಲೆಯನ್ನು ಮುಂದುವರೆಸುವಂತೆ

---

೦೬. ಡಾ.ಕರೀಗೌಡ ಬೀಚನಹಳ್ಳಿ : ಕರಕುಶಲ ಕಲೆಗಳು, ಪುಟ ೩೩

ಪ್ರೋತ್ಸಾಹಿಸುವುದು ಮುಖ್ಯ ಉದ್ದೇಶವಾಗಿತ್ತು. ಹಾಗೂ ಕಲಾವಿದರ ಕೃತಿ ನಿರ್ಮಾಣಕ್ಕೆ ಬೇಕಾಗುವ ಮೂಲ ಪದಾರ್ಥಗಳನ್ನು ನೀಡುವುದು. ಸಮೀಪದ ಪಟ್ಟಣ ಪ್ರದೇಶದಲ್ಲಿ ಕೃತಿಗಳ ಮಾರಾಟಕ್ಕೆ ಮಳಿಗೆಗಳನ್ನು ತೆರೆಯುವುದು ಸಹ ನಿಗಮದ ಕಾರ್ಯವಾಗಿತ್ತು. ಕೃತಿಕಾರನಿಗೆ ಮತ್ತು ಖಾಸಗಿ ವ್ಯಕ್ತಿಗಳಿಗೆ ಕೂಡಾ ಕೃತಿ ಮಾರಾಟಕ್ಕೆ ಅನುಕೂಲ ಮಾಡಿಕೊಟ್ಟಿತ್ತು. ನಿಗಮದ ಅಂಗ ಸಂಸ್ಥೆ ಮ್ಯೂಸಿಯಂ ಇಂದು ೨೦ ಸಾವಿರಕ್ಕೂ ಹೆಚ್ಚು ಕಲಾಕೃತಿಗಳನ್ನು ಹೊಂದಿದೆ. ಅವುಗಳಲ್ಲಿ ದಿನನಿತ್ಯದ ಉಪಕರಣಗಳನ್ನು ಮರ, ಸುಡಾವೆ, ಮಣ್ಣು, ದಂತ, ಬಿದಿರಿ ಕೆಲಸ ಇತ್ಯಾದಿಗಳಲ್ಲಿ ರಚಿಸುವುದಲ್ಲದೆ ಆಭರಣ, ಕಸೂತಿ ಕೆಲಸದ ವಸ್ತುಗಳು ಸಂಗ್ರಹಿತವಾಗಿವೆ. ಇವುಗಳನ್ನು ದಾನಿಗಳಿಂದ ಉಚಿತವಾಗಿ ಪಡೆದು, ಕ್ರಯಕ್ಕೆ ಕೊಂಡು ಇಲ್ಲವೇ ಕಾರ್ಯಾಗಾರಗಳಲ್ಲಿ ನಿರ್ದೇಶಿಸಿ ಪಡೆದವುಗಳಾಗಿವೆ. ಎಂಟು ಎಕರೆ ಪ್ರದೇಶದಲ್ಲಿ ತಾತ್ಕಾಲಿಕ ಪ್ರದರ್ಶನಾಲಯ, ಮಳಿಗೆ, ಪ್ರಾತ್ಯಕ್ಷಿಕೆಗಳಿಗೆ ಹೊರನೋಟಕ್ಕೆ ಗ್ರಾಮಾಂತರ ಪ್ರದೇಶದ ವಾಸ್ತುವನ್ನು ಹೋಲುವಂತೆ ನಿರ್ಮಿಸಲಾಗಿದೆ. ನೆಲಕ್ಕೆ ಹೆಂಚಿನ ಹಾಸುಗಲ್ಲುಗಳ, ಹೆಂಚಿನ ಮೇಲ್ಛಾವಣಿ, ತುಳುಸಿಕಟ್ಟೆ, ಚಂಪಾಗಿಡ ಇತ್ಯಾದಿಗಳಿಂದ ಅಲ್ಲಿ ಒಂದು ಗ್ರಾಮೀಣ ವಾತಾವರಣವನ್ನು ತರಲು ಪ್ರಯತ್ನಿಸಲಾಗಿದೆ.

ಪ್ರತಿ ನಿತ್ಯ ಎಂಬಂತೆ ನಡೆಯುವ ಕುಶಕಲಾಕೃತಿ ನಿರ್ಮಾಣ ನೋಡುಗನಿಗೆ ಭಾರತದ ಬೇರೆ ಬೇರೆ ಸ್ಥಳದ ಕಲೆ ಒಂದೇ ಕಡೆಯಲ್ಲಿ ನೋಡಲು ಸಿಗುತ್ತದೆ. ಈಗಾಗಲೇ ಸಂಗ್ರಹಿತ ಕಲಾಕೃತಿಗಳ ಪುಸ್ತಕಗಳು, ಪತ್ರಿಕೆಗಳು ಇಲ್ಲಿವೆ. ಅಖಿಲ ಭಾರತ ಕರಕುಶಲ ಕಲಾವಿದರ ಬಗ್ಗೆ ಮಾಹಿತಿ ಕೇಂದ್ರವಿದೆ. ಕ್ಷೇತ್ರ ಕಾರ್ಯ ನಡೆಸಲು ಅವಕಾಶ ಹಾಗೂ ಅನುದಾನ ನೀಡುವ ಪದ್ಧತಿಯೂ ಇದೆ. ಮ್ಯೂಸಿಯಂನಲ್ಲಿ ಪ್ರಕಟನಾ ವಿಭಾಗವು ಇದ್ದು ಕರಪತ್ರಗಳು, ಕೈಪಿಡಿ ಕಲೆಯ ಕುರಿತು ಬರೆದ ಪುಸ್ತಕಗಳನ್ನು ಪ್ರಕಟಿಸಿದೆ. ೧೯೮೯ರಲ್ಲಿ ಮ್ಯೂಸಿಯಂನಲ್ಲಿಯ ಕೃತಿಗಳ ಆಕಾರ, ರೂಪ ಬಳಕೆ ಇತ್ಯಾದಿ ಕುರಿತು ಸಮಗ್ರ ಅಧ್ಯಯನ ಮಾಡಿ ದಿ ನ್ಯಾಶನಲ್ ಹ್ಯಾಂಡಿ ಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ಸ್ ಎಂಬ ಹೆಸರಿನಲ್ಲಿ ಗ್ರಂಥ ಹೊರತರಲಾಗಿದೆ.

ಕಿನ್ನಾಳ ಕಲೆಯ ಕಾರ್ಯಾಗಾರ

೧. ೧.೧೦.೧೯೮೦ರಿಂದ ೩೧.೩.೧೯೮೧ರವರೆಗೆ ಕರ್ನಾಟಕ ಸರಕಾರದ ಡಿಪಾರ್ಟಮೆಂಟ್ ಆಫ್ ಇಂಡಸ್ಟ್ರೀಸ್ ಆಂಡ್ ಕಾಮರ್ಸ ಇವರಿಂದ ಐದು ತಿಂಗಳ ಕಾಲ ಕಿನ್ನಾಳ ಕಲೆ ಕಾರ್ಯಾಗಾರವನ್ನು ಕಿನ್ನಾಳದಲ್ಲಿ ಏರ್ಪಡಿಸಿತ್ತು. ಯುವ ಮತ್ತು ನಿರುದ್ಯೋಗಿ ಯುವಕ ಯುವತಿಯರಿಗೆ ಕಿನ್ನಾಳ ಕಲೆಯನ್ನು ಕಲಿಸಲು ಹಿರಿಯ ಕಲಾವಿದರಿಂದ ಮಾರ್ಗದರ್ಶನ ನೀಡಿತು.

೨. ೧೯೮೭-೮೮ರಲ್ಲಿ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಕಿನ್ನಾಳದಲ್ಲಿ ನಡೆಸಿದ ಕಿನ್ನಾಳ ಕಲೆಯ ಕಾರ್ಯಾಗಾರದಲ್ಲಿ ೨೫ ಮಹಿಳೆಯರಿಗೆ ತರಬೇತಿಯನ್ನು ನೀಡಲಾಯಿತು.

೩. ಭಾರತ ಸರಕಾರದ ಪ್ರಾದೇಶಿಕ ವಿನ್ಯಾಸ ಹಾಗೂ ತಾಂತ್ರಿಕ ಅಭಿವೃದ್ಧಿ ಕೇಂದ್ರ, ಬೆಂಗಳೂರು ಕಿನ್ನಾಳದಲ್ಲಿ "ಲೈಟ್ ವುಡ್ ಹ್ಯಾಂಡ್ ಪೇಂಟೆಡ್ ಟಾಯ್ಸ್" ಕಲಾಕಾರ್ಯಗಾರವು ಕಿನ್ನಾಳದಲ್ಲಿ ೨೦.೧೦.೧೯೯೯ರಿಂದ ೩೦.೧೦.೧೯೯೦ರವರೆಗೆ ನಡೆಯಿತು. ಈ ಕಾರ್ಯಾಗಾರದಲ್ಲಿ ಕಿನ್ನಾಳದ ಕಲಾವಿದರು ಭಾಗವಹಿಸಿದ್ದರು.

೪. ಭಾರತ ಸರಕಾರದ ಪ್ರಾದೇಶಿಕ ವಿನ್ಯಾಸ ಹಾಗೂ ತಾಂತ್ರಿಕ ಅಭಿವೃದ್ಧಿ ಕೇಂದ್ರ ಬೆಂಗಳೂರು ೨೦೦೧ರ ಅಕ್ಟೋಬರನಲ್ಲಿ ಕಿನ್ನಾಳದಲ್ಲಿ "ಡಿಸೈನ ಡವಲೆಪ್‌ಮೆಂಟ್ ವರ್ಕಶಾಪ್ ಆನ್ ಕಿನ್ನಾಳ ಕ್ರಾಫ್ಟ್" ಎಂಬ ಕಾರ್ಯಾಗಾರದಲ್ಲಿ ಇವರ ಸಾಂಪ್ರದಾಯಿಕ ಕಲೆಗೆ ಕುಂದುಂಟುಗಾದಂತೆ ಗೃಹಾಲಂಕೃತ ವಸ್ತುಗಳಾದ ಗೋಡೆ ಅಲಂಕಾರಿಕಗಳು, ಕನ್ನಡಿ ಚೌಕಟ್ಟುಗಳು, ಚಿತ್ರ ಚೌಕಟ್ಟು, ದೀಪಸ್ತಂಭಗಳು ಮುಂತಾದ ಹೊಸ ವಿನ್ಯಾಸಗಳು ಈ ಕುಶಲಕರ್ಮಿಗಳಿಗೆ ಈ ಕಾರ್ಯಾಗಾರದಲ್ಲಿ ತಿಳಿಸಿಕೊಡಲಾಯಿತು.

೫. ಭಾರತ ಸರಕಾರದ ಪ್ರಾದೇಶಿಕ ವಿನ್ಯಾಸ ಹಾಗೂ ತಾಂತ್ರಿಕ ಅಭಿವೃದ್ಧಿ ಕೇಂದ್ರ ಬೆಂಗಳೂರು ೨೦೦೪ರಲ್ಲಿ ಮತ್ತೊಂದು ಕಾರ್ಯಾಗಾರವನ್ನು ಕಿನ್ನಾಳ ಕಲಾವಿದರಿಗಾಗಿ ಏರ್ಪಡಿಸಿ ಹೊಸ ವಿನ್ಯಾಸಗಳನ್ನು ರಚಿಸಲಿಕ್ಕೆ ಕುಶಲಕರ್ಮಿಗಳಿಗೆ ಹೊಸ ವಿನ್ಯಾಸಗಳನ್ನು ನೀಡಿ ಸಹಾಯ ಮಾಡುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ೮೦ಕ್ಕೂ ಹೆಚ್ಚು ಕಲಾಶಾಲೆಗಳಿವೆ. ಆದರೂ ಕಿನ್ನಾಳ ಕಲೆಗೆ ಉಳಿವು ಮತ್ತು ಕಿನ್ನಾಳ ಕಲೆಯನ್ನು ಕಲಾವಿದ್ಯಾರ್ಥಿಗಳಿಗೆ ಅಭ್ಯಸಿಸಲು ಕಾರ್ಯಾಗಾರ ಶಿಬಿರ ಪ್ರಾತ್ಯಕ್ಷಿಕೆಗಳು ತೀರ ಕಡಿಮೆ ನಡೆದಿವೆ ಎಂದರೆ ತಪ್ಪಾಗಲಾರದು. ಏಕೆಂದರೆ ಎಲ್ಲಾ ಕಲಾಶಾಲೆಗಳಿಗೆ ವರ್ಷಕ್ಕೆ ಒಂದು ಬಾರಿಯಾದರೂ ಶಿಬಿರ, ಕಾರ್ಯಾಗಾರವನ್ನು ಮಾಡಿದರೆ ಕಲಾವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಮತ್ತು ಕಿನ್ನಾಳ ಕಲೆ

ಬೆಳೆಯುತ್ತಿದೆ. ಏಕಪ್ಪ ಮತ್ತು ನಾರಾಯಣಪ್ಪ ಚಿತ್ರಗಾರರು ಕೆಲವು ಕಲಾಶಾಲೆಗಳಿಗೆ ಮುಖ್ಯಸ್ಥರ ಆಸಕ್ತಿಯಿಂದ ನಡೆದ ಕಿನ್ನಾಳ ಕಲಾ ಕಾರ್ಯಾಗಾರಕ್ಕೆ ನಿರ್ದೇಶಕರಾಗಿ ಕಲಾವಿದ್ಯಾರ್ಥಿಗಳಿಗೆ ಕಿನ್ನಾಳ ಕಲೆಯನ್ನು ತರಬೇತಿ ನೀಡಿದ್ದಾರೆ.

ಕೆಲವು ಕಲಾಶಾಲೆಗಳಲ್ಲಿ ನಡೆದ ಕಾರ್ಯಾಗಾರದ ವಿವರ . ೨೦೦೨ರಲ್ಲಿ ಶ್ರೀ ಕಲಾನಿಕೇತನ ಮೈಸೂರು, ೨೦೦೫ರಲ್ಲಿ ರವೀಂದ್ರ ಕಲಾನಿಕೇತನ, ತುಮಕೂರು, ೨೦೦೫-೬ರಲ್ಲಿ ಶ್ರೀ ಬಸವೇಶ್ವರ ಚಿತ್ರಕಲಾ ಶಾಲೆ ಹುಮನಾಬಾದ್, ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯ ಬಸವಕಲ್ಯಾಣ ಮತ್ತು ಮಹಾಲಸಾ ಕಲಾ ಶಾಲೆ ಮಂಗಳೂರು ಕಲಾಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿ ಕಿನ್ನಾಳ ಕಲೆಯಲ್ಲಿ ತರಬೇತಿ ಪಡೆದಿದ್ದಾರೆ.

ಇಂತಹ ಸಾಂಪ್ರದಾಯಿಕ ಕಲಾಶೈಲಿಗಳು ತಮ್ಮದೇ ವೈಶಿಷ್ಟ್ಯತೆಯನ್ನು ಪಡೆದಿವೆ. ಇವುಗಳ ಅಧ್ಯಯನ ಬಹಳ ಮುಖ್ಯವಾಗಿದೆ. ಈ ಕಲೆಯನ್ನು ಉಳಿಸಿ ಬೆಳಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವ ಕರ್ತವ್ಯ ನಮ್ಮದೇ ಆಗಿರುವಾಗ ಕಿನ್ನಾಳ ಕಲೆಯ ಕಾರ್ಯಾಗಾರ ಎಲ್ಲಾ ಕಲಾಶಾಲೆಗಳಲ್ಲಿ ನಡೆದರೆ ಒಳ್ಳೆಯದು.

*****

ಅಧ್ಯಾಯ : ಎಂಟು

ಸಮಾರೋಪ

ಜನಪದ ಸಮೂಹವು ಈ ನಾಡಿಗೆ ನೀಡಿದ ಅಪಾರ ಕೊಡುಗೆಗಳಲ್ಲಿ ಜನಪದ ಕಲೆಯಾದ ಕಿನ್ನಾಳ ಕಲೆ ಒಂದು ಪ್ರಮುಖ ಕಲೆಯಾಗಿದೆ. ಆಯಾ ನಾಡಿನ ಸಂಸ್ಕೃತಿಯ ಸೌರಭಕ್ಕೆ ಮೂಲ ಜನಪದವೇ ಆಗಿದೆ. ಈ ಆಶಯದ ಹಿನ್ನೆಲೆಯಲ್ಲೇ ಕಿನ್ನಾಳ ಕಲೆ ಕಿರು ಸಂಶೋಧನಾ ಪ್ರಬಂಧವು ಸಿದ್ಧಗೊಂಡಿದೆ. ಮೂರ್ತಿಶಿಲ್ಪ ಮತ್ತು ವಿವಿಧ ಮಾಧ್ಯಮದ ವೈವಿಧ್ಯತೆಯ ಹಿನ್ನೆಲೆಯಲ್ಲಿ ಇಲ್ಲಿ ಎಂಟು ಅಧ್ಯಾಯಗಳಲ್ಲಿ ವಿಷಯದ ನಿರೂಪಣೆ ಮತ್ತು ವಿಶ್ಲೇಷಣೆ ಮಾಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಜನಪದ ಕಲೆಗಳು ನಮ್ಮ ಗ್ರಾಮೀಣ ಜನರ ಬದುಕಿನಲ್ಲಿ ಹಾಸುಹೊಕ್ಕಾಗಿದ್ದು ಜನಪದ ಕಲೆಗಳೇ ಶಿಷ್ಟಪದ ಕಲೆಗಳಿಗೆ ಭದ್ರ ಬುನಾದಿಯನ್ನು ಹಾಕಿವೆ ಎಂಬುದನ್ನು ಸಮರ್ಥಿಸುತ್ತ, ಜನಪದ ಕಲೆಯಾದ ಕಿನ್ನಾಳ ಕಲೆ, ಕಲಾವಿದರ ಬದುಕು ಸಂಸ್ಕೃತಿಗಳ ಚೌಕಟ್ಟಿನಲ್ಲಿಯೆ ಈ ಕಲೆ ರೂಪಗೊಂಡು ಕ್ರಮೇಣ ಧಾರ್ಮಿಕ ಆಚರಣೆಗೆ ಒಳಗಾಗಿ ತನ್ನ ಅಸ್ತಿತ್ವವನ್ನು ಕಂಡುಕೊಂಡು ಬೆಳೆದು ಬಂದಿವೆ. ಇದೇ ಅಧ್ಯಾಯದಲ್ಲಿ ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳ ಬಗ್ಗೆ ಮತ್ತು ಕಿನ್ನಾಳ ಕಲೆಯ ಕುರಿತು ಇದುವರೆಗೆ ನಡೆದ ಅಧ್ಯಯನಗಳ ಅವಲೋಕನ ಮಾಡಲಾಗಿದೆ. ಗ್ರಾಮೀಣ ಜನರ ಎಷ್ಟೋ ಕಲೆಗಳು ಅವರ ಬದುಕಿನ ಭಾಗವೇ ಆಗಿ ಅಸ್ಪಷ್ಟ ನೆಲೆಯಲ್ಲಿ ಅಸ್ತಿತ್ವದಲ್ಲಿದ್ದು ಕಾಲಕ್ರಮೇಣ ನಾಗರಿಕ ವರ್ಗದವರ ಸಂಪರ್ಕದಿಂದ ಶಿಷ್ಟರೂಪ ತಾಳುತ್ತ ಬಂದಿರುವುದನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಪ್ರಾಗೈತಿಹಾಸಿಕ ಚಿತ್ರಗಳು ಇರುವ ಮತ್ತು 'ದೇವನಾಂಪ್ರಿಯ ಪ್ರಿಯದರ್ಶಿ' ಎಂದು ಪ್ರಸಿದ್ಧಿ ಪಡೆದ ಅಶೋಕನ ಧರ್ಮ ಶಾಸನಗಳು ಇರುವ ಕೊಪ್ಪಳದಿಂದ ಕೇವಲ ಹನ್ನೊಂದು ಕಿ.ಮೀ ದೂರದಲ್ಲಿರುವ ಗ್ರಾಮ ಕಿನ್ನಾಳ. ಕಿನ್ನಾಳದ ಇತಿಹಾಸ ವಿಜಯನಗರದ ಕಾಲದಷ್ಟು ಹಿಂದಿನದು. ಕಿನ್ನಾಳ ಕಲೆಯ ಬೆಳವಣಿಗೆ ಅರಸರಿಂದ ಚಿತ್ರಗಾರರಿಗೆ ದೊರೆತ ಪೋಷಣೆ, ಪ್ರೇರಣೆ ಮುಂತಾದ ಐತಿಹಾಸಿಕ ಅಂಶಗಳನ್ನು ಹಾಗೂ ವಿಜಯನಗರ ಪತನಾನಂತರ ಕಲಾವಿದರು ಕಿನ್ನಾಳಕ್ಕೆ ಬಂದ ಹಿನ್ನೆಲೆಯನ್ನು ಆಧಾರ ಸಹಿತವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ.



ಮೂರನೆಯ ಅಧ್ಯಾಯದಲ್ಲಿ ಕಿನ್ನಾಳ ಹಸ್ತಪ್ರತಿ ಚಿತ್ರಕಲೆಯದ್ದಾಗಿದೆ. ಈ ಹಸ್ತಪ್ರತಿಗಳಲ್ಲಿ ರೇಖಾ ಚಿತ್ರಗಳದ್ದು ಅವುಗಳನ್ನು ಆಧರಿಸಿಯೇ ಕಿನ್ನಾಳ ಕಲಾವಿದರು ಭಿತ್ತಿಚಿತ್ರ, ದೇವಾಲಯಗಳ ಮೂರ್ತಿಶಿಲ್ಪ ಮತ್ತು ರಥಗಳ ಶಿಲ್ಪಗಳನ್ನು ಶಾಸ್ತ್ರೀಯ ಹಿನ್ನೆಲೆಯಲ್ಲಿ ತಾಳಮಾನದ ಕಲ್ಪನೆಯಿಂದ ಚಿತ್ರಿಸುತ್ತಿದ್ದರು ಎನ್ನುವುದಕ್ಕೆ ಈ ಹಸ್ತಪ್ರತಿಗಳು ಪ್ರಮುಖ ಆಧಾರಗಳಾಗಿವೆ ಎಂಬ ಚರ್ಚೆಯನ್ನು ಈ ಅಧ್ಯಾಯದಲ್ಲಿ ವಿಶೇಷವಾಗಿ ನಡೆಸಲಾಗಿದೆ.

ಅಲ್ಲದೇ ಕಿನ್ನಾಳದ ರೇಖಾಚಿತ್ರಗಳು ವೈವಿಧ್ಯಮಯವಾದ ವಿಷಯ ಹೊಂದಿವೆ. ದಶಾವತಾರ,ರಾಮಾಯಣ, ಮಹಾಭಾರತ, ರಾಜ–ರಾಣಿಯರ ರೇಖಾಚಿತ್ರಗಳೊಂದಿಗೆ ಸಂಗ್ರಹಗೊಂಡಿರುವುದುನ್ನು ಸಮೀಕ್ಷಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮರದ ಮಾಧ್ಯಮದ ಮಹತ್ವವನ್ನು ಹೇಳುತ್ತಾ ಈ ಮಾಧ್ಯಮದಲ್ಲಿ ರಚನೆಗೊಂಡ ಶಿಲ್ಪಗಳ ಸೌಂದರ್ಯ ಪ್ರಜ್ಞೆ, ಧಾರ್ಮಿಕ ಹಿನ್ನೆಲೆ ಹಾಗೂ ವೃತ್ತಿಯ ಹಿನ್ನೆಲೆಯಲ್ಲಿ ಬೆಳೆದು ಬಂದಿವೆ ಎಂಬುದನ್ನು ಹೇಳಿ ಸಮರ್ಥಿಸುತ್ತಾ ಜೊತೆಗೆ ಕ್ಷೇತ್ರಕಾರ್ಯ ಮಾಡಿ ಸಂಗ್ರಹಿಸಿದ ಶಿಲ್ಪಗಳ ಛಾಯಾಚಿತ್ರಗಳನ್ನಿಟ್ಟುಕೊಂಡು ಶಿಲ್ಪಗಳನ್ನು ವಿವಿಧ ಪ್ರಕಾರಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಕಿನ್ನಾಳ ಕಲಾವಿದರು ಮರ ಮಾಧ್ಯಮದ ಶಿಲ್ಪಗಳಲ್ಲಿ ದೇವತಾ ಶಿಲ್ಪಗಳು, ರಥದ ಅಲಂಕಾರಿಕ ಶಿಲ್ಪಗಳು, ಕಿನ್ನಾಳ ಚೌಕಿಗಳು, ಗೋಡೆಯ ಫಲಕಗಳು ಪ್ರಧಾನವಾಗಿದ್ದು, ಅವುಗಳನ್ನು ಹಲವಾರು ರೀತಿಯಲ್ಲಿ ವಿಂಗಡಿಸಿ ಅಧ್ಯಯನ ಮಾಡಿರುವುದು ಈ ಅಧ್ಯಾಯದ ವಿಶೇಷತೆಯಾಗಿದೆ.

ಐದನೆಯ ಅಧ್ಯಾಯದಲ್ಲಿ ಮಣ್ಣು, ಸೆಗಣಿ, ಚಿಂದಿ ಬಟ್ಟೆಯಂತಹ ತೀರಾ ಶಾಶ್ವತವಲ್ಲದಂತಹ ಮಾಧ್ಯಮಗಳಲ್ಲಿ ಕಿನ್ನಾಳ ಸೆಗಣಿಗೊಂಬೆ ಶಿಲ್ಪಗಳು ರಚನೆಯಾಗಿದ್ದು ಅವುಗಳನ್ನು ಸಂಕೀರ್ಣ ಮಾಧ್ಯಮದ ಶಿಲ್ಪಗಳೆಂದು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಂಕೀರ್ಣ ಮಾಧ್ಯಮಗಳಲ್ಲಿ ಕಿನ್ನಾಳ ಕಲಾವಿದೆಯರು ಹಲವಾರು ಬಗೆಯ ಶಿಲ್ಪಗಳನ್ನು ರಚಿಸಿದ್ದನ್ನು ಇಲ್ಲಿ ವಿಶೇಷವಾಗಿ ಗುರುತಿಸಲಾಗಿದೆ. ಹೀಗೆ ರಚನೆಗೊಂಡು ವೈವಿಧ್ಯಮಯವಾಗಿ ಗಮನ ಸೆಳೆಯುವ ಈ ಶಿಲ್ಪಗಳು ಇಂದಿನ ಆಧುನಿಕ ಶಿಲ್ಪಗಳಿಗೆ ಸ್ಫೂರ್ತಿಯನ್ನು ಹಾಗೂ ಪ್ರೇರಣೆಯನ್ನು ನೀಡುವಂಥವುಗಳಾಗಿವೆ. ಅವು ಜನಪದರ ಆಚರಣೆಯಲ್ಲಿ, ನಂಬಿಕೆಯಲ್ಲಿ ಮರು ಹುಟ್ಟು ಪಡೆಯುತ್ತಾ ಬೆಳೆದು ಉಳಿದುಕೊಂಡು ಬಂದ ರೋಚಕ ಇತಿಹಾಸ ಈ ಅಧ್ಯಾಯದಲ್ಲಿ ಅನಾವರಣಗೊಂಡಿದೆ.

ಆರನೆಯ ಅಧ್ಯಾಯದಲ್ಲಿ ಚಿತ್ರಗಾರರು ಸಾಮಾನ್ಯವಾಗಿ ಮರದಲ್ಲಿ ಮೂರ್ತಿ ಶಿಲ್ಪಗಳನ್ನು ರಚಿಸುತ್ತಾರೆ. ಇವರ ಶಿಲ್ಪಗಳ ರಚನೆಯಲ್ಲಿ ವಿಜಯನಗರ ಪ್ರೇರಣೆಯನ್ನು ನೋಡಬಹುದು. ಕಿನ್ನಾಳ ಕಲೆಯ ಮೇಲಾದ ಪ್ರೇರಣೆ, ಪ್ರಭಾವ ಶೈಲಿ ಮತ್ತು ತಂತ್ರಗಾರಿಕೆ ಬಗ್ಗೆ ವಿವರವಾದ ಅಧ್ಯಯನ ಇಲ್ಲಿ ನಡೆಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಮರೆಯಾಗಿದ್ದ ಕಿನ್ನಾಳ ಕಲೆ ಮತ್ತು ಕಲಾವಿದರನ್ನು ಅಖಿಲ ಭಾರತ ಕರಕುಶಲ ಮಂಡಳಿಯ ಅಧ್ಯಕ್ಷೆ ಕಮಲಾದೇವಿ ಚಟ್ಟೋಪಾಧ್ಯಾಯರು ವಿಶೇಷವಾಗಿ ಗುರುತಿಸಿದ್ದಷ್ಟೇ ಅಲ್ಲ ಈ ಕಲಾವಿದರಿಗೂ ಗೌರವಗಳನ್ನು ತಂದು ಕೊಡಲು ಶ್ರಮಿಸಿದರು. ಕಮಲಾದೇವಿಯವರ ಕಾರ್ಯ ಶ್ಲಾಘನೀಯವಾಗಿದೆ. ಕಿನ್ನಾಳದ ಕಲಾವಿದರು ರಾಜ್ಯ ಪ್ರಶಸ್ತಿಗಳನ್ನು ಪಡೆದಿದ್ದು ಪ್ರಮುಖರನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ.ಉದಾಹರಣೆಗೆ ಹಿರಿಯ ಕಲಾವಿದರಾದ ದಿ. ಕೃಷ್ಣಪ್ಪ, ದಿ. ವೆಂಕೋಬಪ್ಪ ಮತ್ತು ಸೋಮಣ್ಣ, ನಾರಾಯಣಪ್ಪ, ಭಾಗ್ಯಮ್ಮ ಚಿತ್ರಗಾರ ಮುಂತಾದ ಪ್ರಖ್ಯಾತ ಕಲಾವಿದರ ಜೀವನ ಸಾಧನೆಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.

ದೃಶ್ಯಕಲಾ ಕ್ಷೇತ್ರದಲ್ಲಿ ಕೈಯಾಡಿಸಿ ಅನುಭವ ಹೊಂದಿರುವ ಕಲಾವಿದರು, ಕಲಾ ಸಂಶೋಧನಾಸಕ್ತರು ಈ ಬಗೆಯ ಅಧ್ಯಯನ ಕೈಗೊಳ್ಳಲು ಗ್ರಾಮೀಣ ಜನಪದ ಕಲಾಲೋಕದಲ್ಲಿ ಇನ್ನು ಸಾಕಷ್ಟು ವಿಷಯಗಳು ಅಡಗಿವೆ. ಅವುಗಳ ಅಧ್ಯಯನದ ಜೊತೆಗೆ ಅವು ದೃಶ್ಯ ಪ್ರಪಂಚದಿಂದ ಮಾಯವಾಗದಂತೆ, ಮರೆತು ಹೋಗದಂತೆ ಅವುಗಳ ಸಂಗ್ರಹದ ಕಾರ್ಯವು ಅಗತ್ಯವಾಗಿದೆ.ಈ ಕಾರ್ಯ ಇನ್ನಷ್ಟು ತೀವ್ರಗೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿ ಜನಪದ ಕಲೆಯಾದ ಕಿನ್ನಾಳ ಕಲೆಯ ಕುರಿತು ಈ ಸಂಶೋಧನೆ ಪ್ರಾತಿನಿಧಿಕವಾದ ಮತ್ತು ಅಧ್ಯಯನದ ಪರಿಮಿತಿಯಲ್ಲಿ ಅತ್ಯಂತ ಸ್ಥೂಲವಾದ ಮಾದರಿಗಳ ಅಧ್ಯಯನವಾಗಿದೆ. ಇನ್ನೂ ಈ ಕಲೆಯನ್ನು ವ್ಯಾಪಕವಾಗಿ ತೌಲನಿಕವಾಗಿ, ಸಾಂಸ್ಕೃತಿಕವಾಗಿ, ಜನಪದೀಯವಾಗಿ ಹೀಗೆ ಹಲವಾರು ನೆಲೆಗಳಿಂದ ಅಧ್ಯಯನ ಮಾಡಲು ಈ ಕಿರು ಪ್ರಬಂಧ ಒಂದು ಕಿರು ಆಕರ ಸಾಮಗ್ರಿಯಾದರೆ, ನಮ್ಮ ಶ್ರಮ ಸಾರ್ಥಕವೆಂದುಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದಿಂದ ಹಲವು ಹೊಸ ಅಂಶಗಳು, ಫಲಿತಗಳು ಹೊರಬಂದಿವೆ.

೧. ವಿಜಯನಗರ ಚಿತ್ರ ಶಿಲ್ಪ ಶೈಲಿಗಳ ಮುಂದುವರಿಕೆಯಾಗಿ ಕಿನ್ನಾಳ ಕಲೆ ಬೆಳವಣಿಗೆಯನ್ನು ಹೊಂದಿದೆ.

೨. ದಖನಿ ಸುಲ್ತಾನರ ಕಾಲದ ಚಿಕಣಿ ಚಿತ್ರಗಳ ಪ್ರೇರಣೆ, ಪ್ರಭಾವಗಳು ಕಿನ್ನಾಳ ಕಲಾಶೈಲಿಯಲ್ಲಿ ಗಮನಾರ್ಹವಾಗಿ ಕಂಡುಬರುತ್ತವೆ.

೩. ಕಿನ್ನಾಳ ಕಲೆಯ ವೈಶಿಷ್ಟ್ಯಗಳಲ್ಲಿ ವರ್ಣಗಾರಿಕೆಯು ಅತ್ಯಂತ ಮಹತ್ವದ್ದಾಗಿದೆ. ಕಲಾವಿದರೇ ನೈಸರ್ಗಿಕವಾಗಿ ದೇಶಿಯವಾಗಿ ತಯಾರಿಸುವ ಬಣ್ಣಕ್ಕೆ ಲಜಾವರ ಬಣ್ಣವೆನ್ನುತ್ತಾರೆ. ಇದನ್ನು ಬಣ್ಣಗಳ ರಾಜನೆಂದು ಕರೆಯಲಾಗಿದೆ.

೪. ಶಿಷ್ಟ ಶಿಲ್ಪಗಳಲ್ಲಿಯ ಸೂಕ್ಷ್ಮಗಾರಿಕೆ, ಪ್ರಮಾಣ ಬದ್ಧತೆಯ ಸೌಂದರ್ಯ ನಿಷ್ಟತೆ ಕಂಡುಬಂದರೆ, ಕಿನ್ನಾಳ ಕಲಾವಿದೆಯರ ಸೆಗಣಿ ಗೊಂಬೆಗಳಲ್ಲಿ ಸಹಜತೆ, ಮುಗ್ಧತೆಗಳು ವಿಶೇಷ ವಿನ್ಯಾಸದಿಂದ ಮೂಡಿಬಂದಿವೆ.

೫. ಕಿನ್ನಾಳ ಚಿತ್ರಗಾರರು ತಮ್ಮ ಚಿತ್ರ ಶಿಲ್ಪಗಳಲ್ಲಿ ಸ್ಥಳೀಯ ಪ್ರಾದೇಶಿಕ ಹಿನ್ನೆಲೆಯ ಜಾನಪದ ಅಂಶಗಳನ್ನು ಮೈಗೂಡಿಸಿಕೊಂಡಿರುವ ಅಂಶ ಅವರ ಕಲಾಕೃತಿಗಳಲ್ಲಿ ಪ್ರಮುಖವಾಗಿ ಗುರುತಿಸಬಹುದಾಗಿದೆ. ಉದಾಹರಣೆಗೆ ಉಡುಗೆ, ತೊಡುಗೆ, ಹಬ್ಬ, ಹರಿದಿನ, ಉತ್ಸವ, ಸಂಪ್ರದಾಯ ಮುಂತಾದವುಗಳು.

೬. ಸೆಗಣಿ ಗೊಂಬೆಯ ಶಿಲ್ಪಗಳಲ್ಲಿ ಷಡಂಗವಾಗಲಿ, ತಾಳ-ಮಾನ- ಪ್ರಮಾಣಗಳಾಗಲಿ ಕಂಡು ಬರದೇ ಸಹಜವಾದ ಜನಪದ ಶೈಲಿಯ ಮುಕ್ತ ರಚನೆಗಳಾಗಿರುವುದು ಮತ್ತು ಇಂದಿನ ನವ್ಯ ಕಲಾಕೃತಿಗಳಂತೆ ಇವು ಅವರ ಸೃಜನಶೀಲತೆಯನ್ನು ರುಜುವಾತುಪಡಿಸುತ್ತವೆ.

೭. ಕಿನ್ನಾಳದ ಚಿತ್ರಗಳು ವಿಶೇಷವಾಗಿ ರೇಖಾಪ್ರಾಧಾನ್ಯವಾದವುಗಳಾಗಿವೆ.

೮. ಸಣ್ಣ ಗ್ರಾಮವಾದ ಕಿನ್ನಾಳದಲ್ಲಿ ನೆಲೆಸಿರುವ ಚಿತ್ರಗಾರರು ರಾಜ್ಯ, ರಾಷ್ಟ್ರ ಪ್ರಶಸ್ತಿಗಳನ್ನು ಪಡೆದಿರುವುದಲ್ಲದೇ ಅಂತರಾಷ್ಟ್ರೀಯ ಮಟ್ಟದ ಮೌಲ್ಯದ ಜನಪದ ಕಲಾಕೃತಿಗಳನ್ನು ರಚಿಸಿ ಮಾರುಕಟ್ಟೆಯಲ್ಲಿ ಅವರದೇ ಆದ ವಿಶೇಷ ಛಾಪನ್ನು ಮೂಡಿಸಿದ್ದಾರೆ.

೯. ಯಾವುದೇ ಪ್ರತಿಷ್ಠಿತ ತರಬೇತಿಯ ಕಲಾಸಂಸ್ಥೆಯ ಪದವಿಧರರಿಗೂ ಕಡಿಮೆ ಇಲ್ಲದಂತೆ ತಮ್ಮ ಕಲಾ ಪ್ರಾವಿಣ್ಯತೆಯನ್ನು ಗ್ರಾಮೀಣ ಪ್ರದೇಶದ ಈ ಕಲಾವಿದರು ಹೊಂದಿದ್ದಾರೆ.

೧೦. ಕಿನ್ನಾಳ ಶಿಲ್ಪಕಲಾಕೃತಿಗಳು ಮುಖ್ಯವಾಗಿ ಧಾರ್ಮಿಕ ಹಾಗೂ ವೃತ್ತಿ ಮೂಲದ ಹಿನ್ನೆಲೆಯಲ್ಲಿ ಬೆಳೆದು ಬಂದು ಮುಂದೆ ಸೌಂದರ್ಯಮೂಲದ ಕಲೆಗಳಾಗಿ ಆಕಾರ ಪಡೆದಿವೆ.

ಹೀಗೆ ವಿವಿಧ ಮಾಧ್ಯಮಗಳಲ್ಲಿ ರೂಪ ತಳೆದ, ಈ ಕಲೆಯನ್ನು ಕುರಿತು ಸ್ಥೂಲವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ನೂರಾರು ವರ್ಷಗಳಿಂದ ಒಂದಿಲ್ಲಾ ಒಂದು ಬಗೆಯಲ್ಲಿ ನಮ್ಮ ಜನಪದ ಆಚರಣೆ, ನಂಬಿಕೆಗಳ ಹಿನ್ನೆಲೆಯಲ್ಲಿ ಈ ಕಲೆ ಇಂದಿಗೂ ಉಳಿದುಕೊಂಡು ಬಂದಿವೆ. ಈ ಮೂಲಕ ಇದುವರೆಗೆ ಅಲಕ್ಷಿತವಾಗಿದ್ದ ಈ ಕ್ಷೇತ್ರದ ಅಧ್ಯಯನವನ್ನು ಇಲ್ಲಿ ನಡೆಸಲಾಗಿದೆ. ವಿಶೇಷವಾಗಿ ಕಿನ್ನಾಳ ಚಿತ್ರ, ಶಿಲ್ಪಗಳು ಬೆಳೆದು ಬಂದ ಮಾಧ್ಯಮಗಳು, ಹಾಗೂ ಅವುಗಳ ರಚನೆಗೆ ಸಂಬಂಧಿಸಿದಂತೆ ವಿವಿಧ ಮಾಧ್ಯಮಗಳ ಸಾಧ್ಯತೆಗಳನ್ನು, ತಂತ್ರಗಾರಿಕೆಗಳನ್ನು ಮತ್ತು ಅವುಗಳನ್ನು ರಚಿಸುವ ಕಲಾವಿದರನ್ನು ಕುರಿತು ಇಲ್ಲಿ ಪ್ರಥಮ ಬಾರಿಗೆ ಚರ್ಚೆಗೆ ಒಳಪಡಿಸಲಾಗಿದೆ.

ಶಿಷ್ಟ ಶಿಲ್ಪಗಳಂತೆ ಅಧ್ಯಯನಕ್ಕೆ ಗ್ರಾಸವಾಗದೇ ಬಹು ಕಾಲದಿಂದ ಅಲಕ್ಷಿತವಾಗಿಯೇ ಉಳಿದು ಬಂದಿರುವ ನೂರಾರು ವೈವಿಧ್ಯಮಯ ಜನಪದ ಚಿತ್ರ, ಶಿಲ್ಪಗಳು ಕಲಾತ್ಮಕ ನೆಲೆಯಿಂದಲೂ ಪ್ರಸ್ತುತವಾದವುಗಳೆಂದು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಜನಪದ ಮೂಲದ ಕಿನ್ನಾಳ ಕಲೆಯನ್ನು ಅಧ್ಯಯನ ಮಾಡಲಾಗಿದೆ. ಅಧ್ಯಯನಾಸಕ್ತರು ಈ ಕ್ಷೇತ್ರದ ಕಡೆಗೆ ಗಮನಹರಿಸಿದಲ್ಲಿ ಕಿನ್ನಾಳ ಕಲೆಯ ಸಾಕಷ್ಟು ಕಲಾ ಪ್ರಕಾರಗಳು ಇನ್ನೂ ಬೆಳಕಿಗೆ ಬರುವುದರಲ್ಲಿ ಅನುಮಾನವಿಲ್ಲ ಎಂದು ಹೇಳುತ್ತಾ ಪ್ರಸ್ತುತ ಸಂಪ್ರಬಂಧವನ್ನು ಸಮಾರೋಪಿಸಲಾಗಿದೆ.

ಅನುಬಂಧಗಳು

೧. ಗ್ರಂಥಋಣ

೧. ಕಿನ್ನಾಳ ಗೊಂಬೆಗಳು — ಗವಿಸಿದ್ಧ ಎನ್. ಬಳ್ಳಾರಿ
ಪ್ರಸಾರಾಂಗ, ಗು.ವಿ.ವಿ. ಗುಲಬರ್ಗಾ, ೧೯೯೬

೨. ಶಿಲ್ಪಕಲಾ ಪ್ರಪಂಚ — ಪ್ರ.ಸಂ.ಪಿ.ಆರ್.ತಿಪ್ಪೇಸ್ವಾಮಿ
ಕ.ಲಕ.ಅ.ಬೆಂಗಳೂರು, ೧೯೯೪

೩. ಕಿನ್ನಾಳದ ಚಿತ್ರಕಲೆ — ಆರ್.ಎಚ್.ಕುಲಕರ್ಣಿ
ಕ.ಲ.ಕ.ಅ.ಬೆಂಗಳೂರು, ೧೯೯೨

೪. ಕರ್ನಾಟಕ ಜನಪದ ಚಿತ್ರಕಲೆ — ಡಾ.ಎಸ್.ಸಿ.ಪಾಟೀಲ
ವೀರಶೈವ ವಿದ್ಯಾವರ್ಧಕ ಸಂಸ್ಥೆ, ಗದಗ, ೧೯೯೩

೫. ಕರ್ನಾಟಕದ ಕಲೆಗಳು (ಮೂ.ಸಂ.ಕರಕುಶಲ ಕಲೆಗಳು) — ಬೆನಕನಹಳ್ಳಿ ಜಿ.ನಾಯಕ್
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬

೬. ಕರ್ನಾಟಕ ಜನಪದ ಶಿಲ್ಪಕಲೆ — ಡಾ.ಶಿವಾನಂದ ಬಂಟನೂರು
ಅ.ಪ್ರ. ಪಿಹೆಚ್.ಡಿ.ಮ.ಪ್ರ.,ಕ.ವಿ.ವಿ.ಹಂಪಿ.೨೦೦೨

೭. ಭಾರತದ ಜನಪದ ಕಲೆ — ಎನ್.ಮರಿಶಾಮಾಚಾರ್
ಸಿ.ಎಂ.ಎನ್.ಪ್ರಕಾಶನ, ಬೆಂಗಳೂರು, ೧೯೯೧

೮. ಬಳ್ಳಾರಿ ಜಿಲ್ಲೆಯ ಮರದ ವಾಸ್ತು — ಡಾ.ಸಿ.ಮಹಾದೇವ
ಪ್ರಸಾರಾಂಗ, ಕನ್ನಡ ವಿ.ವಿ.,ಹಂಪಿ೨೦೦೦

೯. ಆಚರಣೆಯಲ್ಲಿ ಜನಪದ ವಾಸ್ತು, ಶಿಲ್ಪಗಳು — ಡಾ.ಎಸ್.ಸಿ.ಪಾಟೀಲ
ಪ್ರಸಾರಾಂಗ, ಕನ್ನಡ ವಿ.ವಿ.,ಹಂಪಿ ೧೯೯೬

೧೦. ಕರಕುಶಲ ಕಲೆಗಳು — ಪ್ರ.ಸಂ.ಡಾ.ಕರೀಗೌಡ ಬೀಚನಹಳ್ಳಿ
ಪ್ರಸಾರಾಂಗ, ಕನ್ನಡ ವಿ.ವಿ.,ಹಂಪಿ೨೦೦೦

೧೧. ತಿರುಳ್ಗನ್ನಡ ಸವಿ ಸಂಚಿಕೆ — ಪ್ರ.ಸಂ.ಎಚ್.ಎಸ್.ಪಾಟೀಲ
ಅಖಿಲ ಭಾರತ ೬೨ನೇ ಕನ್ನಡ ಸಾಹಿತ್ಯ ಸಮ್ಮೇಳನ,
ಕೊಪ್ಪಳ,೧೯೯೩

೧೨. ಗದ್ದಗಿಮಠ ಬರಹಗಳು — ಡಾ.ಬಿ.ಎಸ್.ಗದ್ದಗಿಮಠ
ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ.ಮೈಸೂರು,೧೯೯೮

೧೩. ಕರ್ನಾಟಕ ಗ್ರಾಮದೇವತೆಗಳು — ಡಿ.ಲಿಂಗಯ್ಯ
ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, ೧೯೮೪

೧೪. ದೇಗುಲ ರಥಶಿಲ್ಪ — ಧ್ರುವರಾಜ ನಾ ಗದಗಕರ
ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ, ೧೯೯೯

೧೫. ಕೊಪ್ಪಳ:ಸಾಂಸ್ಕೃತಿಕ ಪರಂಪರೆ — ಬಿ.ಸಿ.ಪಾಟೀಲ
ಹರಿಹರ ಪ್ರಕಾಶನ, ಕೊಪ್ಪಳ,೧೯೯೮

೧೬. ನಿಜದ ನೆಲೆ (ಡಾ.ಬಿ.ಕೆ.ಹಿರೇಮಠ ಅಭಿನಂದನಾ ಗ್ರಂಥ) — ಸಂ.ಡಾ.ಎಸ್.ಸಿ.ಪಾಟೀಲ, ಸತ್ಯಾನಂದ ಪಾತ್ರೋಟ
ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ, ೨೦೦೩

೧೭. ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ — ಡಾ.ಯಾದಪ್ಪ ಪರದೇಶಿ
ಅ.ಪ್ರ.ಪಿಹೆಚ್.ಡಿ.ಮ.ಪ್ರ.ಕನ್ನಡ ವಿ.ವಿ.೨೦೦೧

೧೮. ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ — ಕೆ.ವಿ.ಕಾಳೆ
ಪ್ರಸಾರಾಂಗ, ಕ.ವಿ.ವಿ.ಹಂಪಿ, ೨೦೦೦

೧೯. ವಿಜಯನಗರ ಅಧ್ಯಯನ ಸಂಪುಟ ೩ — ಸಂ.ಎಂ.ಎಲ್.ಶಿವಶಂಕರ, ಚನ್ನಬಸಪ್ಪ ಎಸ್. ಪಾಟೀಲ
ಪ್ರಾಚ್ಯ ವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಮೈಸೂರು, ೧೯೯೮

೨೦. ವಿಜಯನಗರ ಅಧ್ಯಯನ ಸಂಪುಟ – ೬ — ಸಂ. ಪ್ರೊ.ಎಂ.ವಿ.ಕೃಷ್ಣಪ್ಪ, ಹೆಚ್.ಟಿ.ತಳವಾರ
ಪ್ರಾಚ್ಯ ವಸ್ತು ಸಂಗ್ರಹಾಲಗಳ ನಿರ್ದೇಶನಾಲಯ
ಹೊಸಪೇಟ, ೨೦೦೧

೨೨. Gazetteer of India, Mysore State, Raichur Dist., Banglore, 1970

೨. ಬಿಡಿ ಲೇಖನಗಳು

೧.	ಗುಡಿಗಾರರು ಚಿತ್ತಾರದ ಕಲೆಂಪ ದಿಗ್ಗಜರು ಕನ್ನಡಮ್ಮ, ೨೩-೪-೧೯೯೨	ವಿ.ಎ.ಇನಾಮದಾರ
೨.	ಕರಕೌಶಲ್ಯದ ಜೀವಂತ ಸೆಲೆ ಸಂಯುಕ್ತ ಕರ್ನಾಟಕ, ೧೦-೫-೧೯೯೨	ಮಹಾಂತೇಶ ಮಲ್ಲನಗೌಡರ
೩.	ರಾಜ್ಯ ಪ್ರಶಸ್ತಿ ವಿಜೇತ ಸೋಮಣ್ಣ ಕಿನ್ನಾಳ ಚೌಕಿ ಕಲಾ ನಿಪುಣ, ಸಂಯುಕ್ತ ಕರ್ನಾಟಕ, ೨೨-೫-೧೯೯೨	ಸಂಪಾದಕೀಯ
೪.	ಕಿನ್ನಾಳ ಕಲೆಯ ಜೀವಂತಿಕೆ ಸೋಮಣ್ಣ ಚಿತ್ರಗಾರ ಸುದ್ದಿಮೂಲ, ೨೩-೭-೧೯೯೨	ಎಚ್.ಎನ್.ಚಿತ್ರಗಾರ
೫.	ರಾಜ್ಯ ಪ್ರಶಂಸೆ ಪಡೆದ ವಿಶಿಷ್ಟ ಕಲಾವಿದ ಕೊಪ್ಪಳ ಬಂದು ಶ್ರೀ ಎಸ್.ವಿ.ಚಿತ್ರಗಾರ್ ಅಮಚೆ ಚಿತ್ರಗಾರ (ಮಾಸಪತ್ರಿಕೆ) ೯-೧೯೯೨	ಸಂಪಾದಕೀಯ
೬.	ಕಿನ್ನಾಳ ಕಲೆ ಇತಿಹಾಸ ಭವ್ಯ, ಭವಿಷ್ಯ ಭೀಕರ ಸುಧಾ (ವಾರಪತ್ರಿಕೆ), ೨೨-೧೧-೧೯೯೨	ಟಿ.ವಿ.ಮಾಳಗದ
೭.	ಕಿನ್ನಾಳದ ಸಂಪ್ರದಾಯ ಕಲೆಯ ಮಹಾನ ಕಲಾವಿದ ಸೋ.ವಿ.ಚಿತ್ರಗಾರ, ಸಮರಸ(ಮಾಸಪತ್ರಿಕೆ), ೧೫-೩-೧೯೯೩	ಸ.ಮ.ಶಿರಹಟ್ಟಿ
೮.	ಹೊನ್ನಾವರದಲ್ಲಿ ಕೊನರಿದ ಸಾಂಪ್ರದಾಯಿಕ ಕಲೆಗಳು ಕನ್ನಡಪ್ರಭ, ೧೮-೩-೧೯೯೩	ಸಂಪಾದಕೀಯ
೯.	ಕಿನ್ನಾಳದ ನೆಲದ ಮೇಲೆ ಹೂವಾಗಿ ಅರಳಿದ ಕಲೆ ಉದಯವಾಣಿ, ೧೧-೭-೧೯೯೩	ಆರ್.ಜಿ.ಶ್ಯಾನಭಾಗ್
೧೦.	ಅಪೂರ್ವ ಚಿತ್ರಕಲಾವಿದ ಸೋಮಣ್ಣ ಚಿತ್ರಗಾರ ಸಂಜೆವಾಣಿ, ೨೧-೧೧-೧೯೯೩	ವಿಠಪ್ಪ ಗೋರಂಟ್ಲಿ

೧೧.	ಕಿನ್ನಾಳ ಕಲೆಯ ಸೋಮಣ್ಣ ಚಿತ್ರಗಾರ ಕನ್ನಡಪ್ರಭ, ೨-೧೦-೧೯೯೪	ಸಂಪಾದಕೀಯ
೧೨.	ವಿಜಯನಗರ ವೈಭವಕ್ಕೆ ಮೆರಗು ನೀಡಿದ ಕಿನ್ನಾಳ ಕಲೆ ಸಂಯುಕ್ತ ಕರ್ನಾಟಕ, ೩೧-೧-೧೯೯೫	ಲಕ್ಷ್ಮೀಕಾಂತ ದುದ್ದುಣಿಗಿ
೧೩.	ಕಿನ್ನಾಳ ಕಲೆಯ ಜೀವನಾಡಿ ಸೋಮಣ್ಣ ಚಿತ್ರಗಾರ ಸಂಯುಕ್ತ ಕರ್ನಾಟಕ, ೫-೨-೧೯೯೫	ವಾಸುದೇವಾಚಾರ್ಯ
೧೪.	ಕಿನ್ನಾಳ ಚಿತ್ತಾರ ಕಲೆಯ ಹೆಮ್ಮೆಯ ಚಿತ್ರಗಾರ ಸೋಮಣ್ಣ ಪ್ರಜಾವಾಣಿ, ೨೯-೩-೧೯೯೬	ವಿದ್ಯಾ ಕೊಡ್ಲೆಕೆರೆ
೧೫.	ಪುರಾತನ ಜನಪದ ಕಿನ್ನಾಳ ಕಲೆಯ ನಿಪುಣ ಸೋಮಣ್ಣ ಚಿತ್ರಗಾರ, ಜನತಾವಾಣಿ, ೨೦-೭-೧೯೯೭	ಶ್ರೀಧರ ಶೆಣೈ
೧೬.	ಟಿ.ಕೆ.ಮೂರ್ತಿಗೆ ಶಿಲ್ಪಶ್ರೀ ಪ್ರಶಸ್ತಿ ಆಂದೋಲನ, ೨೫-೧೨-೧೯೯೭	ಸಂಪಾದಕೀಯ
೧೭.	ಪುರಾತನ ಜನಪದ ಕಲೆ ಕಿನ್ನಾಳ ಕಲೆ ಮಂಗಲ(ವಾರಪತ್ರಿಕೆ), ೨೭-೪-೧೯೯೮	ಶ್ರೀಮತಿ ಕಿರಣ್ ಪ್ರಸಾದ ಆರ್
೧೮.	ಕಿನ್ನಾಳ ಕಲೆಯ ಜಾದೂಗಾರ ಸೋಮಣ್ಣ ಜನಪದ(ಮಾಸಪತ್ರಿಕೆ), ಜೂನ್,೧೯೯೮	ಶ್ರೀಮತಿ ಕಿರಣ್ ಪ್ರಸಾದ ಆರ್
೧೯.	ಮನಮೋಹಕ ಕಿನ್ನಾಳ ಕಲೆ ಪುನಶ್ಚೇತನಕ್ಕೆ ಪ್ರಯತ್ನ ಪ್ರಜಾವಾಣಿ, ೯-೮-೧೯೯೮	ಎನ್.ಗೋಪಿಚಂದ್
೨೦.	ಕಿನ್ನಾಳ ಕಲೆ, ಕುಸುರಿ ಕೆಲಸದ ಪವಾಡ ಕರ್ಮವೀರ, ೨೮-೩-೧೯೯೯	ಕಿರಣ ಆರ್. ಪ್ರಸಾದ
೨೧.	ಕಿನ್ನಾಳ ಕಲೆಯ ಅದ್ಭುತ ಕಲಾವಿದ ಸೋಮಣ್ಣ ಚಿತ್ರಗಾರ ಅಕ್ಷಯ(ಮಾಸಪತ್ರಿಕೆ) ಮುಂಬಯಿ ಎಪ್ರಿಲ್, ೧೯೯೯	ಶ್ರೀಮತಿ ಕಿರಣ ಆರ್. ಪ್ರಸಾದ
೨೨.	ಕಿನ್ನಾಳದ ಕಲೆಯಲ್ಲಿ ಬೆಡಗು ಬಿನ್ನಾಣ ಪ್ರಜಾವಾಣಿ, ೧೦-೪-೧೯೯೯	ಆನಂದತೀರ್ಥ ಪ್ಯಾಟಿ
೨೩.	ಕಿನ್ನಾಳ ಚೌಕಿ ಎಂಥ ಕಲೆ ಅಂತೀರಿ ಕನ್ನಡಪ್ರಭ, ೩೦-೧-೨೦೦೦	ವಿ.ಹನುಮಂತಪ್ಪ
೨೪.	ಕಿನ್ನಾಳ ಕಲೆ ಚಿತ್ತಾರ ಮೂಡಿಸುವವರ ಬದುಕು ಮಾತ್ರ ಚಿಂದಿ ಸಂಯುಕ್ತ ಕರ್ನಾಟಕ, ೨೧-೧೨-೨೦೦೫	ರಾಜೇಂದ್ರ ಪಾಟೀಲ
೨೫.	ಪುರಾತನ ಜನಪದ ಕಿನ್ನಾಳ ಕಲೆಯ ನಿಪುಣ ಸೋಮಣ್ಣ ಚಿತ್ರಗಾರ, ಕನ್ನಡ ನಾಡು ೨೮-೦೭-೧೯೯೭	ಶ್ರೀಧರ ಶೆಣೈ
೨೬.	ಪುರಾತನ ಜನಪದ ಕಿನ್ನಾಳ ಕಲೆಯ ನಿಪುಣ ಸೋಮಣ್ಣ ಚಿತ್ರಗಾರ, ಉತ್ತರಕರ್ನಾಟಕ ೧೦-೦೮-೧೯೯೭	ಸಂಪಾದಕೀಯ

*****

೩. ಸಂಕ್ಷೇಪಗಳು

೧. ಪ್ರ.ಸಂ.	ಪ್ರಧಾನ ಸಂಪಾದಕರು
೨. ಕ.ಲ.ಲ.ಅ.	ಕರ್ನಾಟಕ ಲಲಿತಕಲಾ ಅಕಡೆಮಿ, ಬೆಂಗಳೂರ
೩. ಕ.ವಿ.ವಿ, ಹಂಪಿ	ಕನ್ನಡ ವಿಶ್ವವಿದ್ಯಾಲಯ, ಹಂಪಿ
೪. ಪು.ಸಂ.	ಪುಟ ಸಂಖ್ಯೆ
೫. ಗು.ವಿ.ವಿ.,	ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
೬. ಮ.ಪ್ರ.	ಮಹಾಪ್ರಬಂಧ
೭. ಮೈ.ವಿ.ವಿ.,	ಮೈಸೂರ ವಿಶ್ವವಿದ್ಯಾಲಯ, ಮೈಸೂರು
೮. ಸಂ.	ಸಂಪಾದಕ
೯. ಕಿ.ಪ್ರ.	ಕಿರು ಪ್ರಬಂಧ

*****



ಡಾ. ಶಿವಾನಂದ ಬಂಟನೂರ ಅವರ "ಕರ್ನಾಟಕ ಜನಪದ ಶಿಲ್ಪಕಲೆ" ಪಿಹೆಚ್.ಡಿ ಮಹಾಪ್ರಬಂಧ ಮತ್ತು ಡಾ.ಆರ್.ಎಚ್.ಕುಲಕರ್ಣಿಯವರ "ಕಿನ್ನಾಳ ಕಲೆ" ಮತ್ತು "ವಿಜಯನಗರ ಅಧ್ಯಯನ ಸಂಪುಟ" ಗ್ರಂಥಗಳಿಂದ ಕೆಲವು ಚಿತ್ರಗಳನ್ನು ಅತ್ಯಂತ ಕೃತಜ್ಞತೆಯಿಂದ ಪ್ರಸ್ತುತ ಕಿರು ಪ್ರಬಂಧಕ್ಕೆ ಬಳಸಿಕೊಳ್ಳಲಾಗಿದೆ.



ಕರಕುಶಲ ಕಲೆಗಳ
ತಯಾರಿಕಾ ಕೇಂದ್ರಗಳು





